ಉಪಾಧ್ಯಕ್ಷರು : ಇದರ ಮೇಲೆ ಯಾರಾದರೂ ಮಾನ್ಯ ಸದಸ್ಯರುಗಳು ಮಾತನಾಡುವವರಿದ್ದರೆ ಮಾತನಾಡಬಹುದು.

ಉಪಾಧ್ಯಕ್ಷರು : 1985-86ನೇ ವರ್ಷಕ್ಕೆ ಸಂಬಂಧಿಸಿದ ಹೆಚ್ಚುವರಿ ಅನುದಾನದ ಮೇಲಿನ ಚರ್ಚೆ ಇಲ್ಲಿಗೆ ಮುಕ್ತಾಯವಾಯಿತು. ಪ್ರಸ್ತಾವ ಏನೆಂದರೆ,

"1985-86ನೇ ಆರ್ಥಿಕ ವರ್ಷಕ್ಕೆ ಸಂಬಂಧಿಸಿದ ಹೆಚ್ಚುವರಿ ಅನುದಾನಗಳ ಅಭಿಯಾಚನೆ ಸಂಖ್ಯೆಗಳಾದ 19,21,22,34,38, 45,46,63 ಮತ್ತು 64ಕ್ಕೆ ಪಟ್ಟಿಯಲ್ಲಿ ಸೂಚಿಸಿದ ಮೊಬಲಗಿಗೆ ಮೀರದಂತಿರುವ ಮೊತ್ತವನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

ಉಪಾಧ್ಯಕ್ಷರು : 1986-87ನೇ ವರ್ಷಕ್ಕೆ ಸಂಬಂಧಿಸಿದ ಹೆಚ್ಚುವರಿ ಅನುದಾನದ ಮೇಲಿನ ಚರ್ಚೆಯು ಸಹ ಇಲ್ಲಿಗೆ ಮುಕ್ತಾಯವಾಯಿತು. ಪ್ರಸ್ತಾವ ಏನೆಂದರೆ,

"1986-87ನೇ ಆರ್ಥಿಕ ವರ್ಷಕ್ಕೆ ಸಂಬಂಧಿಸಿದ ಹೆಚ್ಚುವರಿ ಅನುದಾನಗಳ ಅಭಿಯಾಚನೆ ಸಂಖ್ಯೆಗಳಾದ 5,21,22,33,34, 45,46, ಮತ್ತು 59ಕ್ಕೆ ಪಟ್ಟಿಯಲ್ಲಿ ಸೂಚಿಸಿದ ಮೊಬಲಗಿಗೆ ಮೀರದಂತಿರುವ ಮೊತ್ತವನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಚರ್ಚೆ ಹಾಗೂ ಮುಖ್ಯಮಂತ್ರಿಗಳಿಂದ ಉತ್ತರ.

+ ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರು ಉಭಯ ಸದನಗಳನ್ನು ಉದ್ದೇಶಿಸಿ ಮಾಡಿರುವಂತಹ ಭಾಷಣವನ್ನು ವಿರೋಧಿಸಿ ಅತ್ಯಂತ ಪ್ರಮುಖವಾದಂತಹ ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ನಾನು ಇಚ್ಛಿಸುತ್ತೇನೆ. ಹಿಂದೆ ಮೈಸೂರು ರಾಜ್ಯ ಇಡೀ ದೇಶದಲ್ಲೇ ಅಲ್ಲದೇ ಪ್ರಪಂಚದಲ್ಲೇ ಒಂದು ಮಾದರಿಯಾದಂತಹ ರಾಜ್ಯವಾಗಿತ್ತು. ಅಂದು ರಾಜ್ಯದಲ್ಲಿದ್ದಂತಹ ರಾಜರು ಅವರ ಬೆಂಬಲಕ್ಕೆ ನಿಂತಿರುವಂತಹ ಅಧಿಕಾರ ವರ್ಗ ಮೈಸೂರನ್ನು ಒಂದು ಮಾದರಿಯನ್ನಾಗಿ ಮಾಡಿದರು. ಅದಕ್ಕೆ ಅನೇಕ ಇತಿಹಾಸವಿದೆ. ನಾನು ಅದನ್ನೆಲ್ಲಾ ಪ್ರಸ್ತಾಪಿಸುವುದಕ್ಕೆ ಹೋಗುವುದಿಲ್ಲ.

ನೇರವಾಗಿ ವಿಷಯಕ್ಕೆ ಬರುವುದಾದರೇ ಇಡೀ ವಿಶ್ವದಲ್ಲಿ ಸಮಾಜವಾದಿ ಚಳುವಳಿ ಫ್ರಾನ್ಸ್ ದೇಶದಲ್ಲಿ ಪ್ರಾರಂಭವಾಯಿತು. ಇದಕ್ಕೆ ಕಾರ್ಲ್‌ಮಾರ್ಕ್ಸ್‌ರವರು ಒಂದು ಸಿದ್ಧಾಂತವನ್ನು ರಚಿಸಲಿಕ್ಕೆ ಕೊಟ್ಟರು. ಕಾರ್ಲ್‌ಮಾರ್ಕ್ಸ್‌ರ ಸಿದ್ಧಾಂತ ರಷ್ಯಾದೇಶದಲ್ಲಿ ಜಾರಿಗೆ ಬಂದು ಅಲ್ಲಿರುವ ಉತ್ಪಾದನಾ ಸಾಧನಗಳೆಲ್ಲವೂ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟವು. ರಷ್ಯಾದಲ್ಲಿ ಆ ಪದ್ಧತಿ ಜಾರಿಯಾಗುವುದಕ್ಕೆ ಮೊದಲೇ ಮೈಸೂರಿನ ಮಹಾರಾಜರಾದವರು ಅವರು ವಂಶಪಾರಂಪರ್ಯವಾಗಿ ರಾಜಮನೆತನದಿಂದ ಬಂದಿದ್ದರೂ ಸಹಿತ ಈ ರಾಜ್ಯವನ್ನು ರಾಜ್ಯದ ಹಿತವನ್ನು ಕಾಪಾಡುವ ದೃಷ್ಟಿಯಿಂದ ಸರ್ಕಾರೀ ಸ್ವಾಮ್ಯದ ಕಾರ್ಖಾನೆಗಳನ್ನು ಸ್ಥಾಪಿಸುವುದರಲ್ಲಿ ಪ್ರಥಮ. ರಷ್ಯಾದೇಶದಲ್ಲಿಯೂ ಸಹಿತ ಕಮ್ಯುನಿಸಂ ಅನ್ನುವುದು ಪ್ರಾರಂಭ ಆಗುವುದಕ್ಕಿಂತ ಮೊದಲು ಉತ್ಪತ್ತಿ ಸಾಧನಗಳು ಸರ್ಕಾರದ, ರಾಜ್ಯದ ವಶಕ್ಕೆ ಒಳಪಡುವ ಮೊದಲು ಇಲ್ಲಿಯ ಸರ್ಕಾರ ಅಂತಹ ಉದ್ದಿಮೆಗಳನ್ನು ಸ್ಥಾಪಿಸುವ ಕೀರ್ತಿ, ಇವತ್ತು ಮೈಸೂರು ಗಂಧದೆಣ್ಣೆಯ ಕಾರ್ಖಾನೆ, ಮೈಸೂರು ಲ್ಯಾಂಪ್ಸ್, ಮತ್ತು ಐಟಿಐಎಲ್ ಎಂಬ ಒಂದು ಸಂಸ್ಥೆ ಇತ್ತು ಅದು

ಮತ್ತು ರೆಮ್ಕೋ ಎಂಬ ಸಂಸ್ಥೆ ಇತ್ತು. ಇಂತಹ ಅನೇಕ ಕಾರ್ಖಾನೆಗಳನ್ನು ಸ್ಥಾಪಿಸಿ ಸರ್ಕಾರದ ಸ್ವಾಮ್ಯದಲ್ಲಿ ಅತ್ಯಂತ ಪ್ರಮುಖವಾದ ಪಾತ್ರ ವಹಿಸಿ ರಾಜ್ಯಾಂಗದ ಬೊಕ್ಕಸಕ್ಕೆ ಈ ಸರ್ಕಾರೀ ಸ್ವಾಮ್ಯದ ಕಾರ್ಖಾನೆಗಳು ತಮ್ಮದೇ ಆದ ಕೊಡುಗೆಯನ್ನು ಕೊಡುತ್ತಿರುವ ಒಂದು ಪರಂಪರೆ ಈ ರಾಜ್ಯದಲ್ಲಿದೆ. ಆ ದೃಷ್ಟಿಯಿಂದ ಇವತ್ತಿನ ದಿವಸ ಸ್ವಾತಂತ್ರ್ಯ ಬಂದ ಮೇಲೂ ಸಹಿತ ಆ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಿದೆ. ಭದ್ರಾವತಿ ಉಕ್ಕಿನ ಕಾರ್ಖಾನೆ, ಗಂಧದೆಣ್ಣೆಯ ಕಾರ್ಖಾನೆಯ ಬಗ್ಗೆ ನಾನು ಅನೇಕ ಉದಾಹರಣೆಗಳನ್ನು ಹೇಳಿದ್ದೇನೆ. ಅದೇ ರೀತಿಯಲ್ಲಿ ಎನ್.ಜಿ.ಇ.ಎಫ್. ಅಂತಕ್ಕಂತಹ ಕಾರ್ಖಾನೆ ಸಹ ಸ್ವತಂತ್ರ್ಯ ಬಂದ ಮೇಲೆ ಈ ರಾಜ್ಯವನ್ನು ಆಳತಕ್ಕಂತಹ ಮುಖ್ಯಮಂತ್ರಿಗಳಾದ ಮಾನ್ಯ ನಿಜಲಿಂಗಪ್ಪನವರು ಬಹಳ ದೂರದೃಷ್ಟಿಯಿಟ್ಟುಕೊಂಡು ಈ ಕಾರ್ಖಾನೆ ಸ್ಥಾಪಿಸಿದ್ದಾರೆ. ಈ ಕಾರ್ಖಾನೆ ಸ್ಥಾಪನೆ ಆದ ಕಾಲದಲ್ಲಿ ರಾಜ್ಯಗಳವರೇ ಅದರಲ್ಲಿ ಇಂಜಿನಿಯರ್‌ಗಳಾಗಿದ್ದರು. ರಾಜ್ಯದವರೇ ಇಂಜಿನಿಯರ್ ಆದ ಕಾರಣ ಜರ್ಮನಿ ದೇಶದ ತಾಂತ್ರಿಕ ಜ್ಞಾನವನ್ನು ಪಡೆದು ಅತ್ಯಂತ ಉತ್ತಮವಾದ ರೀತಿಯಲ್ಲಿ ಕಾರ್ಯ ನಿರ್ವಹಿಸಿಕೊಂಡು ಬಂದಿದೆ. ಅದನ್ನು ನಾವು ಕಂಡಿದ್ದೇವೆ. ಆದರೆ ಇವತ್ತಿನ ದಿವಸ ಕೋತಿ ಕೈಗೆ ಮಲ್ಲಿಗೆ ಹೂವು ಕೊಟ್ಟ ಹಾಗೆ ಆಗಿದೆ ಮಾನ್ಯ ಅಧ್ಯಕ್ಷರೇ, ಯಾವತ್ತು ಇಲ್ಲಿ ಪ್ರಪಂಚಾದ್ಯಂತ ಆಂದೋಳನ ಪ್ರಾರಂಭವಾಯಿತು ಅದು ಮುಂದುವರೆಯಬೇಕಾಗಿದ್ದು, ಇವತ್ತು ಕೋತಿ ಕೈಗೆ ಮಲ್ಲಿಗೆ ಹೂವು ಕೊಟ್ಟಂತೆ ಈ ಪರಿಸ್ಥಿತಿಗೆ ಎನ್.ಜಿ.ಇಎಫ್.ಕಾರ್ಖಾನೆ ಬಂದಿದೆ. ಮಾನ್ಯ ಅಧ್ಯಕ್ಷರೇ, ಇತ್ತೀಚಿನ ಸರ್ಕಾರ ಅಥವಾ ಆಡಳಿತ ಮಂಡಳಿಯ ತೀರ್ಮಾನದಂತೆ ಈ ಕಾರ್ಖಾನೆಯನ್ನು ಖಾಸಗಿಯವರಿಗೆ ವಹಿಸಿಕೊಡುವಂತಹ ಒಂದು ತೀರ್ಮಾನ ಮಾಡಿಕೊಂಡಿದ್ದಾರೆ. ಆ ಆಡಳಿತ ಮಂಡಳಿಯವರು ಒಂದು ಶಿಫಾರಸ್ಸನ್ನು ಮಾಡಿದ್ದಾರೆ. ಈ ಸಂಸ್ಥೆಯಲ್ಲಿರತಕ್ಕಂಥ ಶೇರು ಬಂಡವಾಳವನ್ನು ಹೆಚ್ಚಿಗೆ ಮಾಡಿ, ಹೆಚ್ಚಿಗೆ ಮಾಡಿದ ಶೇರುಗಳಲ್ಲಿ ಶೇಕಡ 35ರಷ್ಟು ಶೇರನ್ನು ಅಂತರರಾಷ್ಟ್ರೀಯ ಬಹುರಾಷ್ಟ್ರೀಯ ಸಂಸ್ಥೆಯಾದ ಎ.ಬಿ.ಬಿ. ಸಂಸ್ಥೆಗೆ ಕೊಡಬೇಕೆಂದು ತೀರ್ಮಾನ ತೆಗೆದುಕೊಂಡು ಈಗ ಅದು ಸರ್ಕಾರದ ಒಪ್ಪಿಗೆಗೆ ಕಳಿಸಿದ್ದಾರೆ. ಮಾನ್ಯ ಅಧ್ಯಕ್ಷರೇ, ಈ ಕಾರ್ಖಾನೆ ವಿಚಾರದಲ್ಲಿ ಎರಡೂ ಸದನಗಳ ಸಮಿತಿ ಎರಡು ವರದಿಯನ್ನು ಕೊಟ್ಟಿದ್ದಾರೆ. ಅದೆಲ್ಲಾ ನನಗೆ ಗೊತ್ತಿದೆ. ಸಮಯದ ಅಭಾವವಿರುವುದರಿಂದ ನಾನು ಅವೆಲ್ಲವನ್ನೂ ವಿವರವಾಗಿ ಮಾತನಾಡಲು ಹೋಗುವುದಿಲ್ಲ. ಈ ಕಾರ್ಖಾನೆಗೆ ಸೀಮಿತವಾಗಿರುವಂತೆ ಈ ಶಾಸಕಾಂಗದ ವರದಿ ಬಂದಿದೆ. ಇದು 11ನೆಯ ವರದಿಯನ್ನು ಎನ್‌ಜಿಇಎಫ್ ಕಾರ್ಖಾನೆಗೆ ಸಂಬಂಧಪಟ್ಟಂತೆ ಕಳಿಸಿದ್ದಾರೆ. ಈ ವರದಿಯ ಬಗ್ಗೆ ನಾನು ಕಳೆದ ಬಾರಿ ಸುಮಾರು 2 ಗಂಟೆಗಳ ಕಾಲ ಕೇವಲ ಇದೊಂದು ವರದಿಯ ಮೇಲೆ ಮಾಡಿದ್ದೇನೆ. ಅದೆಲ್ಲವನ್ನೂ ಕೂಡ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈ ಕಾರ್ಖಾನೆಯ ಆಡಳಿತ ವರ್ಗ ಯಾವ ರೀತಿ ನಡೆಸಿಕೊಂಡು ಬರುತ್ತಿದ್ದಾರೆ ಎಂಬ ಬಗ್ಗೆ ಈ 41ನೇ ವರದಿಯಲ್ಲಿರುವ ಕೆಲವು ಉದಾಹರಣೆಗಳನ್ನು ಮಾತ್ರ ನಾನು ಉಲ್ಲೇಖ ಮಾಡುವುದಕ್ಕೆ ಇಚ್ಛೆ ಪಡುತ್ತೇನೆ. ಸಾರ್ವಜನಿಕ ಉದ್ಯಮಗಳ ಸಮಿತಿ 41ನೇ ವರದಿಯಲ್ಲಿ ತನ್ನ ರೆಕಮೆಂಡೇಷನ್ಸ್‌ನ ಪ್ಯಾರಾ 2.26ರಲ್ಲಿ ಹೇಳಿದ್ದಾರೆ, ಅದು ಬಹಳ ಉದ್ದವಾಗಿದೆ. ಅವೆಲ್ಲವನ್ನೂ ಓದಲಿಕ್ಕೆ ಹೋಗುವುದಿಲ್ಲ. ಅಲ್ಲಿ ಉಪಯೋಗಿಸಿರತಕ್ಕ ಕೆಲವು ಪದಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ.

"The technology in the Company could not properly diagnose the problem until the foolishness ಈ ಪದವನ್ನು ನಾನು ಒತ್ತಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ವರದಿಯಲ್ಲಿರತಕ್ಕ ಪದಗಳನ್ನು ಮಾತ್ರ ನಾನು ಉಪಯೋಗಿಸುತ್ತಿದ್ದೇನೆ.

Until the foolishness of the decision against the provision of certain essential facilities and the production performance was pointed out by the technologists from Simon.

ಇಲ್ಲಿರತಕ್ಕಂಥ ಆಡಳಿತ ವರ್ಗ ಎಷ್ಟರಮಟ್ಟಿಗೆ ಇದೆ ಎಂದು ಅರ್ಥವಾಗುತ್ತದೆ. ಅವೊತ್ತಿನ ದಿವಸ ಈ ಆಡಳಿತ ವರ್ಗದಲ್ಲಿದ್ದಂತಹವರು ಅಂದರೆ, ಈ ರಾಜ್ಯದ ಒಬ್ಬ ಮುಖ್ಯ ಕಾರ್ಯದರ್ಶಿಗಳಾಗಿರತಕ್ಕಂಥವರು ಛೇರ್‌ಮನ್ ಅಂಡ್ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಕೆಲಸ ಮಾಡತಕ್ಕಂಥ ಸಂದರ್ಭದಲ್ಲಿ, ಆ ಒಂದು ಆಡಳಿತ ವರ್ಗವನ್ನು ವರದಿಯಲ್ಲಿ ಏನಂತ ಕರೆದಿದ್ದಾರೆ ಅಂದರೆ, ಫೂಲ್ಸ್ ಅಂತ ಕರೆದಿದೆ. A fool was made the Chief Secretary of the State.

ನಾನು ಅವರನ್ನು ಫೂಲ್ ಅಂತ ಕರೆಯುತ್ತಿಲ್ಲ ವರದಿಯಲ್ಲಿ ಹೇಳಿದ್ದಾರೆ. A fool was made the chief Secretary of the State. ಅಲ್ಲಿ ಅದನ್ನು ಸರಿಸಮಾಪ್ತಿ ಮಾಡತಕ್ಕ ಕೆಲಸ ಮಾಡಿ, ಫೂಲ್ ಅನ್ನುವುದರ ಬಗ್ಗೆ ಕನ್ನಡದಲ್ಲಿ ಹೇಳಬೇಕಾದರೆ, ಮೂರ್ಖ ಎಂದು ಹೇಳಬಹುದು. ಆ ಮೂರ್ಖರ ಕೈಗೆ ಈ ಕಾರ್ಖಾನೆಯನ್ನು ಕೊಟ್ಟ ಕಾರಣದಿಂದ, ಇವೊತ್ತು ಈ ಕಾರ್ಖಾನೆಯನ್ನು ಬೇರೆಯವರಿಗೆ ಕೊಡತಕ್ಕಂಥಾದ್ದು ಆಗುತ್ತಿದೆ. ಮತ್ತೆ ವರದಿಯನ್ನು ಬೇರೆಯವರಿಗೆ ಕೊಡತಕ್ಕಂಥಾದ್ದು ಆಗುತ್ತಿದೆ. ಮತ್ತೆ ವರದಿಯನ್ನು ಪುನಃ ಉಲ್ಲೇಖ ಮಾಡಿ ಹೇಳುವುದಾದರೆ ಇನ್ನು ವರದಿಯ 2.27ರಲ್ಲಿ ಏನು ಹೇಳುತ್ತಾರೆಂದರೆ, ಅದನ್ನು ಪೂರ್ತಿಯಾಗಿ ಓದುತ್ತೇನೆ.

"The fact that the investment on Crane and pressurisation of the Winding Section was just about Rs. 30 lakhs further fortifies the foolishness of the decisions taken in this behalf against installation of pressurisation Chambers and the Crane."

ಅದಕ್ಕೆ ಹಾರಬೇಕಾಗಿರತಕ್ಕದ್ದು ಕೇವಲ 34 ಲಕ್ಷ ರೂಪಾಯಿ ಮಾತ್ರ. ಇದರಿಂದ ನಷ್ಟವಾಗಿರತಕ್ಕಂಥಾದ್ದು ಸುಮಾರು 4 ಕೋಟಿ ರೂಪಾಯಿ ನಷ್ಟವಾಗಿದೆ. ಇದನ್ನು ವರದಿಯಲ್ಲಿ ಪ್ರಸ್ತಾಪ ಮಾಡಿರುವುದರಿಂದ ನಾನು ಪೂರ್ಣವಾಗಿ ಹೇಳಲಿಕ್ಕೆ ಹೋಗುವುದಿಲ್ಲ. ಇದನ್ನು ಸರಿಪಡಿಸಬೇಕು ಎಂಬುದರ ಬಗ್ಗೆ ಈ ವರದಿಯಲ್ಲಿ ಹೇಳಿದ್ದಾರೆ. ನಾನು ಪೂರ್ಣ ಅಂಶ ಹೇಳುವುದಿಲ್ಲ ಅದೇರ ಭಾಗಾಂಶಗಳನ್ನು ಮಾತ್ರ ಓದಲಿಕ್ಕೆ ಇಷ್ಟಪಡುತ್ತೇನೆ.

"The Committee recommends that the Government should sufficiently caution all their nominee Directors on the Board of public Sector and their duty does not end with merely cautioning, expressing apprehension or Steaching gospel but in ensuring proper implmentation of the decisions taken in their collective wisdom and failure to do so would mean dereliction of their duty. ನಾನು ಈ ಪದವನ್ನು ಹೇಳುತ್ತಿಲ್ಲ. ಡಿರ್ಲಿಕ್ಷನ್ ಆಫ್ ಡ್ಯೂಟಿ ಎಂಬ ಬಗ್ಗೆ ವರದಿಯಲ್ಲಿ ಹೇಳಿಲ್ಲ. ಇದರ ಬಗ್ಗೆ ನಾನು ಹಿಂದೆ ಸುಮಾರು ಎರಡು ಗಂಟೆಗಳ ಕಾಲ ಚರ್ಚೆ ಮಾಡಿದ್ದೇನೆ. ಈ ವರದಿ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರರಕ್ಕೆ ಹೇಳಿದ್ದೇನೆ. ಆದರೆ ಇಲ್ಲಿಯವರೆಗೂ ಕೂಡ ಸರ್ಕಾರ ಚಕಾರ ಎತ್ತಲಿಲ್ಲ. ಇದು ಆದ ನಂತರ ಮತ್ತೊಂದು ವರದಿ ಬಂದಿದೆ. ಇದು ಇಡೀ ರಾಜ್ಯದ ಜನತೆಯ ಮುಂದೆ ಈ ವರದಿ ಇದೆ. ಸಾರ್ವಜನಿಕ ಉದ್ದಿಮೆಗಳ ಸಮಿತಿಯವರು ತನ್ನ 53ನೇ ವರದಿಯನ್ನು ದಿನಾಂಕ 29-4-92 ರಲ್ಲಿ ಈ ಸದನಕ್ಕೆ ಅರ್ಪಿಸಿದ್ದಾರೆ. ಇದರಲ್ಲಿ ಮೊದಲನೇ ಪುಟದಿಂದ ಕೊನೆಯ ಪುಟದವರೆಗೂ ಈ ಆಡಳಿತ ವರ್ಗವನ್ನು ಬರೀ ಬೆತ್ತಲೆಯಾಗಿ ನಿಲ್ಲಿಸಿದ್ದಾರೆ. ಆಗ ಯಾರು, ಆಡಳಿತ ವರ್ಗದಲ್ಲಿದ್ದರೋ ಅವರಿಗೆ ಮಾನ ಮರ್ಯಾದೆ ಇಲ್ಲ. ನನಗೆ ಸಮಯ ಇಲ್ಲದೆ ಇರುವುದರಿಂದ ನಾನು ಅದನೆಲಾ ಹೇಳಲಿಕ್ಕೆ ಹೋಗುವುದಿಲ್ಲ. ಅದರ ಬಗ್ಗೆ ನಾನು ಬಹಳ ಮಾತನಾಡಬೇಕಾದುದು

ಅವಶ್ಯಕತೆ ಇದೆ. ಆದರೆ ಅದನ್ನೆಲ್ಲಾ ಹೇಳಲಿಕ್ಕೆ ಹೋಗುವುದಿಲ್ಲ. ಈ ವರದಿಯಲ್ಲಿ ನಮೂದಾಗಿರತಕ್ಕಂಥಾದ್ದು ಒಂದನೆಯದು ಶೇರು ವರ್ಗಾವಣೆ, ಎರಡನೆಯದಾಗಿ inflation of production figures by advanced crediting of incomplete production, consequent declaration of fictitious profits (c) default in pursusance of claim for commission of Rs. 247.73 lakhs.... in respect of Defence supplies made by M/s. AEG of West Germany to Government of India and repudiation of the claim by AEG ಎನ್ನತಕ್ಕದ್ದರ ಬಗ್ಗೆ ವರದಿ ಕೊಟ್ಟಿದ್ದಾರೆ. ಇದರಲ್ಲಿದ್ದ ನಾಲ್ಕು ಅಂಶಗಳನ್ನು ಹೇಳಿದ್ದಾರೆ. ನಾನು ಒಂದನೆಯ ವಿಚಾರವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಈ ಶೇರಿನ ವರ್ಗಾವಣೆ ಮೊದಲನೆ ದಿಕ್ಕಿನಲ್ಲಿ ಹೇಳಿ ಯಾವ ರೀತಿ ಇದು ಆಗಲೇ ನಡೆಸಿದ್ದಾರೆ ಎನ್ನತಕ್ಕಂಥಾದ್ದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. In respect of defence suppliess made by M/s. A.E.G., of West Germany to Government of India. ಇನ್ನು ಎರಡನೇ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಅಬ್ಸರ್ವೇಷನ್ಸ್ ಅಂಡ್ ರೆಕಮೆಂಟೇಷನ್ಸ್ ಆಫ್ ದಿ ಕಮಿಟಿ ಎಂಬುದರ 1.13ರಲ್ಲಿ ಏನಿದೆ ಎಂಬುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. - Observation and Recommendations of the Committee:

"In view of the seriousness of the above Developments, the Committee recommends that as the, then Chairman and Managing Director of the Company Sri N.K. Prabhakar Rao was clearly responsible in this regard, stringent action may be taken against him."

ಇದು 1ನೇ ಪ್ಯಾರಾದಲ್ಲಿ, ಇನ್ನು 2ನೇ ಪ್ಯಾರಾದಲ್ಲಿ,

"In its view, the Board of Directors, especially thee Government Nominees have acted as per the line indicated by the then Chairman and Managing Director without exercising their independent judgement. The committee therefore recommends that a thorough enquiry should be ordered in this regard and necessary action taken against them." ಎಂದು ಇದೆ. ಅಂದ ಮೇಲೆ ತಾವು ಏನು ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದೀರಿ? ಸಮಿತಿಯಲ್ಲಿ ಇರತಕ್ಕ ಬೇರೆ ಡೈರೆಕ್ಟರ್‌ಗಳ ಮೇಲೂ ಹೇಳಿದ್ದಾರೆ, ಛೇರ್ಮನ್ ಅಂಡ್ ಮ್ಯಾನೇಜಿಂಗ್ ಡೈರೆಕ್ಟರ್ ಆಗಿರತಕ್ಕವರ ಮೇಲೂ ಹೇಳಿದ್ದಾರೆ. ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಇದನ್ನು ನಾನು ಕೇಳುತ್ತಿಲ್ಲ. ಸಮಿತಿಯ ವರದಿಯಲ್ಲಿರತಕ್ಕದ್ದರ ಬಗ್ಗೆ ಸಭೆಯ ಗಮನಕ್ಕೆ ತರುತ್ತಿದ್ದೇನೆ. ಇದೇ ರೀತಿಯಲ್ಲಿ ಇದು ಇನ್ನೂ ಎಲ್ಲಿಯವರೆಗೆ ನಡೆದಿದೆ ಎಂದರೆ, ಅಧಿಕೃತವಾದ ದಾಖಲೆಗಳನ್ನು ತಿದ್ದುವುದು, ದಾಖಲೆಗಳಲ್ಲಿ ಇಲ್ಲದೇ ಇರುವುದನ್ನು ದಾಖಲೆಗಳಿಗೆ ಸೇರೇಸುವುದು, ಇತ್ಯಾದಿ ಪ್ರಯತ್ನ ಈ ಕಂಪೆನಿಗೆ ಬರಬೇಕಾದ ಸುಮಾರು 5 ಕೋಟಿ ರೂ. ನಷ್ಟು ಎ.ಇ.ಜಿ.ನಿಂದ ಬರಬೇಕಾದ ಕಮಿಷನ್ ನಮ್ಮ ಲೆಕ್ಕದ ಪ್ರಕಾರ. ಆದರೆ ಆ ಕಂಪೆನಿಯಿಂದ ಲೆಕ್ಕದ ಪ್ರಕಾರವೇ ಸುಮಾರು 2.5 ಕೋಟಿ ರೂ. ಬರಬೇಕಾಗಿತ್ತು. ಈ ವಿಚಾರದಲ್ಲಿ ಈ ಸಮಿತಿಯವರು ಬಹಳ ಕೂಲಂಕುಷವಾಗಿ ಪರಿಶೀಲನೆ ಮಾಡಿ ಈ ವರದಿಯನ್ನು ಇವತ್ತು ಕೊಟ್ಟಿದ್ದಾರೆ. ಈ ವರದಿ ಪ್ರಿಂಟ್ ಆಗಿರುವ ಪ್ರತಿ ಪುಟದಲ್ಲೂ ಅಂಡರ್‌ಲೈನ್ ಮಾಡಿದ್ದಾರೆ. ಅಂಡರ್‌ಲೈನ್ ಕೂಡ ಪ್ರಿಂಟ್ ಆಗಿ ಬಂದಿದೆ. ಈ ಸಮಿತಿಯ ವರದಿಯ 3.36 ರಲ್ಲಿ ಏನು ಹೇಳಿದ್ದಾರೆಂದರೆ

"Therefore, the committee strongly in no uncertain terms recommends that Criminal and Civil Proceedings as the case may be, should be initiated

against him without any delay. The Government/Company may also approach A.E.G., to withdrawn G.R.Sharma, from the company's Board and to dis-associate him from the A.E.G.'s dealings with the company."

ಅಲ್ಲಿ ಒಬ್ಬ ಸ್ಪೈನ್ನು ಇಟ್ಟಿದ್ದಾರೆ. ಎ.ಇ.ಜಿ. ಕಂಪನಿಯವರು ಎನ್.ಜಿ.ಇ.ಎಫ್.ನಲ್ಲಿ ಒಬ್ಬ ಸ್ಪೈನ್ನು ಇಟ್ಟಿದ್ದಾರೆ. ಅವರ ಹೆಸರು ಡಿ. ಆರ್. ಶರ್ಮ ಎಂದು. ಅವರು ಈಗ ಇಲ್ಲ. ಅವರು ಕೆಲಸಕ್ಕೆ ಸೇರಿದಾಗಿನಿಂದ ತಮ್ಮ ಕೊನೆಯ ಉಸಿರನ್ನು ಎಳೆಯುವವರೆಗೂ ಸಹ ಅವರು ಎ.ಇ.ಜಿ.ಯ ಸ್ಪೈ ಆಗಿ ಇಲ್ಲಿ ಕೆಲಸ ಮಾಡಿದ್ದಾರೆ.ಈ ಸಮಿತಿಯವವರು ಹಿಂದೆ ಕೂಡ ಹೇಳಿದ್ದಾರೆ. ಈ ಕಂಪೆನಿಯಿಂದ ಇವರನ್ನು ದೂರ ಇಡಬೇಕು, ಮತ್ತು ಇವರಮೇಲೆ ಸಿವಿಲ್ ಮತ್ತು ಕ್ರಿಮಿನಲ್ ಆಕ್ಷನ್ ಕೂಡ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಆದರೆ ಇವತ್ತಿನ ದಿವಸ ಏನೂ ಮಾಡಿಲ್ಲ. ಇದು ಸಂಬಂಧಪಟ್ಟ ಒಬ್ಬ ಡೈರೆಕ್ಟರ್‌ರವರ ಮೇಲೆ ಹೇಳಿರತಕ್ಕದ್ದು. ಇದಾದಮೇಲೆ ಆ ಎನ್.ಜಿ.ಇ.ಎಫ್. ಕಂಪೆನಿಯ ಅಧಿಕಾರಿಗಳಾಗಿರತಕ್ಕವರ, ಮೇಲೂ ಕೂಡ ಈ ಸಮಿತಿಯ ವರದಿಯಲ್ಲಿದೆ. ಇದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಾನು ಇದನ್ನು ಪೂರ್ತಿಯಾಗಿ ಓದುವುದಕ್ಕೆ ಇಷ್ಟಪಡುವುದಿಲ್ಲ. ಇಲ್ಲಿ ಅವಶ್ಯಕವಾಗಿರುವುದನ್ನು ಮಾತ್ರ ಓದುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ಯಾರಿಗೆ ತಾವು ಹೇಳುತ್ತಿದ್ದೀರಿ? ಇಲ್ಲಿ ಯಾವ ಸರ್ಕಾರ ಸರ್ಕಾರವೇ ಇಲ್ಲ. ಸರ್ಕಾರ ಗರಬಡಿದುಹೋಗಿದೆ. ಇವರು ಮಾತನಾಡತಕ್ಕ ವಿಚಾರ ಅವರಿಗೇನು ಗೊತ್ತಾಗಿದೆ? ನಾನು ತಮ್ಮನ್ನು ಆಕ್ಷೇಪಣೆ ಮಾಡುತ್ತಿಲ್ಲ.

ಮಾನ್ಯ ಅಧ್ಯಕ್ಷರೆ, ಇವರು ಯಾರಿಗೆ ಹೇಳುತ್ತಿದ್ದಾರೆ ನನಗೆ ಬಹಳ ಆಶ್ಚರ್ಯ ಆಗಿದೆ. ಇವರು ಮಾತನಾಡುತ್ತಿರತಕ್ಕ ವಿಚಾರ ತಮಗೆ ಗೊತ್ತಾಗಿದೆಯಾ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಇಷ್ಟೊಂದು ಗೊತ್ತಿಲ್ಲ ಎಂದರೆ ನಾನು ಇಲ್ಲಿಗೆ ಬರುತ್ತ ಇರಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅಲ್ಲಿ ಬರುವುದಕ್ಕೆ ಗೊತ್ತಿರಲೇಬೇಕು ಎಂದೇನು ಇಲ್ಲ. ಇತ್ತೀಚಿನ ದಿನಗಳಲ್ಲಿ ಮಂತ್ರಿಗಳಾಗಬೇಕಾದವರೆ, ಅದಕ್ಕೆ ಏನೂ ಪಾಂಡಿತ್ಯ ಬೇಕಾಗಿಲ್ಲ. ನಾವು ನೋಡಿದ್ದೇವೆ. ನಿಮ್ಮ ಲಾಟ್ ಲಾಟ್ ನೋಡುತ್ತೇವಲ್ಲ ನಾವು ಅದಕ್ಕೆ ಏನೂ ತಲೆ ಕೆಡಿಸಿಕೊಳ್ಳೇಬೇಕಾಗಿಲ್ಲ. ಅದಕ್ಕೆ ಒಂದು ವಿಚಾರ ಶಕ್ತಿ ಬೇಕು ಎಂದು ಎಲ್ಲಿದೆ? ಮಂತ್ರಿಯಾದವರಿಗೆ ವಿಚಾರ ಶಕ್ತಿ ಇರಬೇಕು ಎಂದು ಎಲ್ಲಿದೆ ಸ್ವಾಮಿ? ಅದೇನೂ ತಾವು ತಿಳಿದುಕೊಳ್ಳಬೇಡಿ. ನಿಮ್ಮ ಒಬ್ಬರ ಬಗ್ಗೆ ಹೇಳುತ್ತಿಲ್ಲ. ನೇರವಾಗಿ ತಮಗೆ ಹೇಳುತ್ತಿಲ್ಲ. ಇಲ್ಲಿ ಗೊತ್ತಿರತಕ್ಕವರು ಬರಬೇಕು ಎಂದು ಎಲ್ಲೂ ಇಲ್ಲ, ಅಧ್ಯಕ್ಷರೆ, ತಾವು ಹೇಳಿ.

ಉಪಾಧ್ಯಕ್ಷರು : ನಾಲ್ಕು ಜನ ಮಂತ್ರಿಗಳು ಇದ್ದಾರೆ. ಅವರು ಮಾತನಾಡುತ್ತಾರೆ; ಬಿಡಿ.

ಶ್ರೀ ವಾಟಾಳ್ ನಾಗರಾಜ್ : ನಾವೇನೂ ಕೇಳಿಕೊಳ್ಳಲಿಲ್ಲ.

ಶ್ರೀ ಸಿ. ಬೈರೇಗೌಡ : ಇನ್ನೊಂದು ವಿಚಾರ.

ಶ್ರೀ ವಾಟಾಳ್ ನಾಗರಾಜ್ : ಕೋಣನ ಮುಂದೆ ಕಿಂದರಿ ಬಾರಿಸಿದರೆ ಏನೂ ಆಗಬಹುದು. ಅದೇ ಆಗುತ್ತಿದೆ. ನನಗೆ ಅನಿಸುತ್ತದೆ. ಆಳವಾಗಿ ನಮ್ಮ ನೂತನ ವಿದ್ಯುತ್ ಕಾರ್ಖಾನೆ ಬಗ್ಗೆ ಪ್ರಾರಂಭ ಮಾಡಿದ್ದಾರೆ. ಅಲ್ಲಿನ ಭ್ರಷ್ಟಾಚಾರದ ಬಗ್ಗೆ

ನಿರಂತರವಾಗಿ ಈ ಸಭೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಯಾರಿಗೆ ಇವರು ಹೇಳುತ್ತಿದ್ದಾರೆ. ಒಂದೇ ಸಮನಾಗಿ ಈ ಶಾಸನಸಭೆಗೆ ಬಂದಂತಹ ನಾಲ್ಕು ವರ್ಷದಿಂದ ಒಂದೇ ಸಮಿತಿಯ ವರದಿಯ ಬಗ್ಗೆ ಹೇಳುತ್ತಿದ್ದಾರೆ. ಯಾರು ಕೇಳುತ್ತಿದ್ದಾರೆ?

ಉಪಾಧ್ಯಕ್ಷರು : ಸರ್ಕಾರದ ಪರವಾಗಿ ಏಳು ಜನ ಮಂತ್ರಿಗಳು ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಮೂರು ಜನ ಅಧ್ಯಕ್ಷರುಗಳು ಬಂದರು. ಮೂರು ಜನ ಉಪಾಧ್ಯಕ್ಷರು ಬಂದರು. ಮೂರು ಜನ ಮುಖ್ಯಮಂತ್ರಿಗಳು ಬಂದರು. ನಾಲ್ಕನೇ ಮುಖ್ಯಮಂತ್ರಿ ಬಂದರು, ಒಂದು ಲಾಟ್ ಲಾಟ್ ಮಂತ್ರಿಗಳು ಬಂದರು. ಯಾರ ಮುಂದೆ ಹೇಳುವುದು ಸ್ವಾಮಿ?

ಉಪಾಧ್ಯಕ್ಷರು : ಅವರು ಹೇಳುತ್ತಿರುವುದನ್ನು ನೋಟ್ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಾನು ಅವರ ಬಗ್ಗೆ ಹೇಳುತ್ತಿಲ್ಲ. ಅವರು ನೋಟ್ ಮಾಡಿಕೊಳ್ಳುತ್ತಿಲ್ಲ ಎಂದು ನಾನು ಹೇಳುತ್ತಿಲ್ಲ. ಅವರ ಬಗ್ಗೆ ನನಗೆ ವೈಯಕ್ತಿಕವಾಗಿ ಗೌರವ ಇದೆ.

ಉಪಾಧ್ಯಕ್ಷರು : ಮಾನ್ಯ ವಾಟಾಳ್ ಅವರೇ, ಅವರಿಗೆ ಮಾತನಾಡಲು ಅವಕಾಶ ಕೊಡಿ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಅವರು ನೋಟ್ ಮಾಡಿಕೊಳ್ಳಬೇಕಾದ ಅವಶ್ಯಕತೆ ಇಲ್ಲ. ಏಕೆಂದರೆ ಪ್ರತಿ ಒಂದು ಸಹ ಬ್ಲಾಕ್ ಅಂಡ್ ವೈಟಿನಲ್ಲಿ ಇದೆ. ಅವರು ನೋಟ್ ಮಾಡಿಕೊಳ್ಳಬೇಕಾದಂತಹ ಅವಶ್ಯಕತೆ ಏನೂ ಉಳಿದಿಲ್ಲ. ಅಲ್ಲಿ ಬಹಳ ಗಹನವಾಗಿರತಕ್ಕ ವಿಚಾರ. ಮತ್ತೊಂದು ವಿಚಾರವನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. Again on the Chairman and Managing Director: ಛೇರ್ಮನ್ ಮ್ಯಾನೇಜಿಂಗ್ ಡೈರೆಕ್ಟರ್ ಆಗಿರತಕ್ಕವರರ ಬಗ್ಗೆ ಈ ವರದಿಯಲ್ಲಿ ಏನು ಇದೆ ಎಂಬುದನ್ನು ತಮ್ಮ ಮೂಲಕ ಈ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. "The Committee can only conclude that this confirms his own role in the default to pursue the Company's claim for Commission." ಸರ್ಕಾರ ಗಮನಿಸುವುದಿಲ್ಲ. ಏಕೆಂದರೆ ಇದು ಮುಕ್ಕಾಲು ವರ್ಷವಾಗಿದೆ ಸರ್ಕಾರದ ಕೈಸೇರಿ. ನೀವು ಗಮನಿಸುವುದಿಲ್ಲ. ನಮ್ಮ ಜಂಜಾಟದಲ್ಲಿ ನಿಮ್ಮ ಕುರ್ಚಿ ಉಳಿಸಿಕೊಳ್ಳುವಷ್ಟರಲ್ಲಿ ಯಾವ ಸಮಿತಿ ಏನು ವರದಿ ಕೊಟ್ಟಿದೆ ಏನು ಇದೆ ಎಂಬ ವಿಷಯ ಗೊತ್ತಿಲ್ಲ. ಸಮಿತಿಗಳು ಇದ್ದಾವೆ ಎನ್ನುವುದನ್ನು ಸರ್ಕಾರ ಮರೆತಿದೆ. ಅವರಿಗೆ ಅವರ ಕುರ್ಚಿಯನ್ನು ಬಿಟ್ಟರೆ ಬೇರೆ ಏನೂ ಕೂಡ ಇಲ್ಲ ಎಂದು ತಿಳಿದುಕೊಂಡಿದ್ದಾರೆ. ಈ ಸಭೆ ಕೂಡ ಇಲ್ಲವೆಂದು ತಿಳಿದು ಕೊಂಡಿದ್ದಾರೆ. ನಮ್ಮ ಕೆಲಸ ನಾವು ಮಾಡಬೇಕಾಗಿದೆ. ಆದ್ದರಿಂದ ಈ ಕೆಲಸ ಮಾಡುತ್ತಿದ್ದೇವೆ. ಪದ ಉಪಯೋಗಿಸಿರತಕ್ಕದ್ದು. "The committee strongly recomends initiation of the Criminal and Civil Proceedings as the case may be against Sri Prabhakar Rao, former Chairman and Managing Director of the Company in regard to his role in the commission Episode."

ಇವರು ಮುಖ್ಯ ಕಾರ್ಯದರ್ಶಿಗಳು ಆಗಿದ್ದರು. ಹಿಂದಿನ ವರದಿಯಲ್ಲಿ a fool was a chief Secretary. ಈ ವರದಿಯಲ್ಲಿ A Criminal was the Chief Secretary of the State. ಇದನ್ನು ನಾನು ಹೇಳುತ್ತಿಲ್ಲ. ವರದಿ ಹೇಳುತ್ತಿದೆ. ಅದೇ ರೀತಿಯಲ್ಲಿ ಇದು ಕಮೀಷನ್‌ಗೆ ಸಂಬಂಧಪಟ್ಟಿದ್ದು ಆದರೆ ಅಲ್ಲಿ ಏನೂ ತಯಾರಿ ನಡೆಯದಿದ್ದರೂ ಸಹ, ಸಾಮಾನು ತಯಾರಾಗದೇ ಇದ್ದರೂ ಸಹ ತಯಾರಾಗಿದೆ ಎಂದು ಲೆಕ್ಕ ಕೊಟ್ಟರು. ಒಂದು ಕಮಿಟಿ ಮಾಡಿ ಜಯರಾಮನ್ ಕಮೀಷನ್ ಎನ್ನತಕ್ಕ ಕಮಿಟಿಯ ವರದಿ ಆಯಿತು. ಅದರಲ್ಲಿ ನಾಲ್ಕು ಅಧಿಕಾರಿಗಳ ಮೇಲೆ ಗುರುತರವಾದಂತಹ

ಒಂದು ಹೊರೆಯನ್ನು ಹೊರಿಸಿದ್ದಾರೆ. ಈ ಸಮಿತಿಯ ವರದಿಯಲ್ಲಿದೆ. ಅವರ ಹೆಸರುಗಳನ್ನು ಸಹ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಬ್ಬರು ಹೀರಾಲಾಲ್ ಎಂದು. ಈಗಲೂ ಕೂಡ ಅದರಲ್ಲಿ ಇದ್ದಾರೆ. ಹೀರಾಲಾಲ್ ಎನ್ನತಕ್ಕವರು ಈಗಲೂ ಕೂಡ ಇದ್ದಾರೆ. ಅವರಿಗೆ ಇವರು ಕೊಟ್ಟಿರತಕ್ಕದ್ದು ಏನು ಅಂದರೆ ರೆಕ್ಮೆಂಡೇಷನ್. ಅವರನ್ನು ಇವತ್ತು ಟೆಕ್ನಿಕಲ್ ಡೈರೆಕ್ಟರ್ ಆಗಿ ಮಾಡಿ ಕೂರಿಸಿದ್ದಾರೆ. ಅವರು ಎಲೆಕ್ಟ್ರಿಕಲ್ ಇಂಜಿನಿಯರ್ ಅಲ್ಲ. ಅದು ಎನ್‌ಜಿಇಎಫ್. ನ್ಯೂ ಗವರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ. ಎಲೆಕ್ಟ್ರಿಕ್ ಫ್ಯಾಕ್ಟರಿಯಲ್ಲಿ ಒಬ್ಬ ಮೆಕಾನಿಕಲ್ ಇಂಜಿನಿಯರ್ ಆಗಿತಕ್ಕವರನ್ನು ಟೆಕ್ನಿಕಲ್ ಡೈರೆಕ್ಟರ್ ಎಂದು ಮಾಡಿದ್ದಾರೆ. He is not an Electrical Engineer.

4.00 ಪಿ.ಎಂ.

He is the Technical Director now. His basic qualification is Mechanical. But he is the Techinical Director in Electrical matters.

Sri. D.B. Chandregowda : That is the mechanics of Electricals.

ಶ್ರೀ ಸಿ. ಬೈರೇಗೌಡ : ಹೊಸ ಸಬ್ಜೆಕ್ಟ್. ಅಂತಹವರು ರೆಕಮಂಡ್ ಮಾಡಿದ್ದಾರೆ. ಎನ್‌ಜಿಇಎಫ್‌ನ್ನು ಎಬಿಬಿಗೆ ಕೊಡಿಯೆಂದು ಹೇಳಿದ್ದಾರೆ. ಆಮೇಲೆ ಅದಕ್ಕೆ ಬರುತ್ತೇನೆ. ಇದರಲ್ಲಿ ಹೀರಾಲಾಲ್ ಎನ್ನತಕ್ಕವರು ಎಕ್ಸಿಕ್ಯುಟಿವ್ ಡೈರೆಕ್ಟರ್ ಆಗಿದ್ದರು. ಕೆ.ಜಿ. ಷಣ್ಮುಖಪ್ಪ ಬಿ.ಆರ್. ಶಾಂತಕುಮಾರ್ ಇನ್ನೊಬ್ಬರು ಇದ್ದಾರೆ ಒಟ್ಟು 4 ಜನ. ಅವರೆಲ್ಲರಿಗೂ ಬಡ್ತಿ ಕೊಟ್ಟು ಇವತ್ತು ಕಂಪನಿಯೇ ಗತಿ ಏನಾಗಿದೆ? ಇವತ್ತು ಒಂದೇ ವರ್ಷದಲ್ಲಿ 21 ಕೋಟಿ ರೂಪಾಯಿ ನಷ್ಟವಾಗಿದೆ. ಈ ವರ್ಷ ಏನೋ ಮಾರ್ಜಿನಲ್ ಲಾಭ ಬರುತ್ತದೆಂದು ಹೇಳುತ್ತಿದ್ದಾರೆ. ಅದಕ್ಕೆ ಆಮೇಲೆ ಬರುತ್ತೇನೆ. ಈ ವರದಿಯಲ್ಲಿ ಏನು ಹೇಳುತ್ತಿದ್ದಾರೆಂದರೆ, ಈ ಪ್ಯಾರಾ ಪೂರ್ತಿ ಓದುವುದಕ್ಕೆ ಇಷ್ಟಪಡುತ್ತೇನೆ. ಪ್ಯಾರಾ ನಂ. 3.52 ಅದು ಈ ರೀತಿ ಇದೆ.

"In the background of the findings/observations and recommendations of the Committee in Chapters I, II, and III of this report, the Committee is of the view that there is need for revamping the Board of Directors of the Company as the N.G.E.F., Ltd., is a premier manufacturing company in the State Public Sector withs large capacity of technological manufacture, diversions and sophisticated equipments needed by the key sectors of economy, as the company also has high potential of rapid growth by utilising its well equipped factories, as well as skilled and technically qualified manpower. It is necessary that such a company is headeed by an able person with technical and professional qualifications, experience and competence who can give the much needed technical and operational thrust and direction in a dynamic and authoritative manner. The Committee recommends that these suggestions of the Committee may be examined and implemented by the Government on *priority.*"

This is the recommendation of the committee. Till today, they have not implemented it. ಇವತ್ತಿನವರೆಗೂ ಕೂಡ ಈವೊಂದು ಸಮಿತಿಯ ವರದಿ ಏನಿದೆ ಸಮಿತಿ ಏನನ್ನು ಸಲಹೆ ಮಾಡಿದೆ ಯಾವ ಸಲಹೆಗಳನ್ನು ಕೂಡ ಸರ್ಕಾರ ಜಾರಿಗೆ ತಂದಿಲ್ಲ. ಆದ್ದರಿಂದ ಇವತ್ತು ಈ ಸಂಸ್ಥೆಯನ್ನು ಎಬಿಬಿಗೆ ಕೊಡತಕ್ಕ ಕೆಲಸ

ನಡೆಯುತ್ತಿದೆ. ನಾನು ಮುಖ್ಯಮಂತ್ರಿಗಳಿಗೆ ಮೂರು ಕಾಗದಗಳನ್ನು ಬರೆದಿದ್ದೇನೆ. ಒಂದು ಕಾಗದವನ್ನು ಸವಿಸ್ತಾರವಾಗಿ 11-15 ಪುಟಗಳ ಕಾಗದ ಬರೆದಿದ್ದೇನೆ. ಅದಕ್ಕೆ ಇದುವರೆಗೆ ನನಗೆ ಸ್ವೀಕಾರವಾಗಿದೆ ಎನ್ನುವ ರಿಪ್ಲೈ ಬಂದಿಲ್ಲ. ಅದರಲ್ಲಿ ಈ ಸಮಿತಿಯ ರೆಕಮೆಂಡೇಶನ್ ಏನಿದೆ ಅದನ್ನು ಕೂಡ ಹೇಳಿದ್ದೇನೆ. ಇದಕ್ಕೆ ಯಾರು ಕಾರಣ ಎನ್ನುವುದನ್ನು ಸಮಿತಿಯ ವರದಿಯನ್ನು ಉಲ್ಲೇಖಿಸಿ ನಾನು ಬರೆದಿದ್ದೇನೆ. ಅದರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಕೂಡ ಹೇಳಿದ್ದೇನೆ. ಇದು ಯಾವುದೂ ಇದುವರೆಗೂ ಮಾಡಿಲ್ಲ. ಇದನ್ನು ಮಾರಾಟ ಮಾಡಬೇಕೆನ್ನುವುದು ನಡೆಯುತ್ತಿದೆ. ಇದರ ಚಿತ್ರವನ್ನು ಸ್ವಲ್ಪ ಸೂಕ್ಷ್ಮವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲವನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಕಳೆದ 10 ವರ್ಷಗಳಿಂದ ಇದು ನಡೆದಿರತಕ್ಕದ್ದು ನಾನು ಎಲ್ಲ ವರ್ಷಗಳದ್ದು ಹೇಳುವುದಕ್ಕೆ ಹೋಗುವುದಿಲ್ಲ. ಪ್ರಾಫಿಟ್ ಆಫ್ಟರ್ ಟ್ಯಾಕ್ 1992-93ರಲ್ಲಿ (-) 2089.05 ಲಕ್ಷ. 1991-92ರಲ್ಲಿ (-) 678.91 1990-91ರಲ್ಲಿ 249.91ನಾನು ಇಷ್ಟಕ್ಕೆ ಸೀಮಿತಗೊಳಿಸುತ್ತೇನೆ. ಇದು ಏಕೆ ನಷ್ಟ ಅನುಭವಿಸುತ್ತಿತ್ತು? ಸಮಿತಿಯ ಎರಡು ವರದಿಗಳನ್ನು ಸರ್ಕಾರ ಜಾರಿಗೆ ತಂದಿದ್ದರೆ ಈ ನಷ್ಟವಾಗುತ್ತಿರಲಿಲ್ಲ. ಸಮಿತಿ ವರದಿಯನ್ನು ಕೊಟ್ಟಿದ್ದರೂ ಸಹ ಅದಕ್ಕೆ ಇರತಕ್ಕ ಕಾಯಿಲೆ ಏನು ಆ ಕಾಯಿಲೆಗೆ ತಕ್ಕಂತೆ ಔಷಧಿಯನ್ನು ಸಮಿತಿಯ ವರದಿಯಲ್ಲಿ ಕೊಟ್ಟಿದ್ದರೂ ಸಹ ಔಷಧಿಯನ್ನು ಕೊಡುವುದಕ್ಕೆ ಬದಲಾಗಿ ಇವತ್ತು ಸರ್ಕಾರ ಕಂಪನಿಗೆ ವಿಷವನ್ನು ಕೊಡತಕ್ಕ ಒಂದು ಪ್ರಯತ್ನವನ್ನು ನಡೆಸಿದೆ. ಇವತ್ತು ಏನಾಗಿದೆ ಅಂದರೆ, ಎಬಿಬಿ ಸಂಸ್ಥೆಯಿದೆ, ಎಬಿಬಿ ಎನ್ನುವುದು ತಮಗೆ ಗೊತ್ತಿದೆ. ನಮ್ಮ ಭಾರತ ದೇಶದ ರೈಲ್ವೆಗೆ ಲೋಕೋಮೋಟಿವ್ಸ್ ಕೊಡತಕ್ಕ ಬಗ್ಗೆ ರಾಷ್ಟ್ರಾದ್ಯಂತ ದೊಡ್ಡ ಸ್ಕ್ಯಾಂಡಲ್ ಆಗಿದೆ. ಲೋಕಸಭೆಯಲ್ಲಿ ಕೂಡ ಅದರ ಬಗ್ಗೆ ಚರ್ಚೆಯಾಗಿದೆ. ಅದರ ಬಗ್ಗೆ ಒಂದು ಸಮಿತಿಯಾಗಿದೆ. ಪಾರ್ಲಿಮೆಂಟ್ ಸಮಿತಿಗೆ ಇದುವರೆಗೆ ಕಾಗದಪತ್ರಗಳನ್ನು ಕೊಡುವುದಕ್ಕೆ ಇಷ್ಟಪಡುತ್ತಿಲ್ಲ. ರೈಲ್ವೆಮಿನಿಸ್ಟ್ರಿ. ನಾನು ಅದನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅಷ್ಟ ಬಲವಾಗಿದೆ ಈ ದೇಶದಲ್ಲಿರತಕ್ಕ ಆಡಳಿತದ ಮೇಲೆ ಅವರ ಬಲ. ಯಾರು ಭಾರತದೇಶದ ಆಡಳಿತ ಸೂತ್ರವನ್ನು ಹಿಡಿದಿದ್ದಾರೆ ಅವರ ಮೇಲೆ ಇವರ ಹಿಡಿತ ಅಷ್ಟು ಬಲವಾಗಿದೆ. ಎಷ್ಟು ಬಲವಾಗಿದೆ ಎನ್ನುವುದಕ್ಕೆ ಇತ್ತೀಚೆಗೆ ಪತ್ರಿಕೆಗಳಲ್ಲಿ ಬಂದಿರತಕ್ಕದ್ದನ್ನು ನೋಡಿದರೆ ಗೊತ್ತಾಗುತ್ತದೆ. ಒಂದು ಸಂಸದೀಯ ಸಮಿತಿಗೆ ತನ್ನ ದಾಖಲೆಗಳನ್ನು

ಕೊಡುವುದಿಲ್ಲವೆನ್ನುವ ಒಂದು ನಿರ್ದಿಷ್ಟವಾದ ನಿಲುವನ್ನು ಕೇಂದ್ರ ರೈಲ್ವೆ ಇಲಾಖೆ ಪಡೆದಿರತಕ್ಕದ್ದು ಅಷ್ಟೆ ಇದಕ್ಕೆ ಒಂದು ನಿದರ್ಶನ. ಅದಕ್ಕೆ ಯಾರು ಕಾರಣಕರ್ತರಾಗಿದ್ದರು ಎಬಿಬಿಗೆ ಕಂಟ್ರಾಕ್ಟನ್ನು ಒದಗಿಸುವುದಕ್ಕೆ ಯಾರು ಕಾರಣಕರ್ತರಾಗಿದ್ದರು ಅವರೇ ಈ ಎನ್‌ಜಿಇಎಫ್‌ನ್ನು ಕೂಡ ಎಬಿಬಿಗೆ ವಹಿಸುವುದಕ್ಕೆ ಪ್ರಯತ್ನ ಇವತ್ತಿನ ದಿವಸ ನಡೆದಿದೆ. ಈ ರಾಜ್ಯದ ಆಡಳಿತದ ಮೇಲೂ ಸಹ ಅವರದು ಬಹಳ ಹಿಡಿತವಿದೆ. ಅಷ್ಟಿಷ್ಟಲ್ಲ ಬಹಳ ಹಿಡಿತವಿದೆ. ಇವತ್ತಿನ ದಿವಸ ನಮ್ಮ ಮುಖ್ಯಮಂತ್ರಿಗಳನ್ನು ಕೈಗೊಂಬೆಯಾಗಿ ಮಾಡಿಕೊಂಡಿದ್ದಾರೆ. ಲೋಕೋಮೋಟಿವ್ಸ್ ಕೊಡಿಸಿದ್ದಾರೆ. ಅವರು ನಿಮ್ಮನ್ನು ಕೈಗೊಂಬೆಯಾಗಿ ನಡೆಸುತ್ತಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ : ಯಾರು?

ಶ್ರೀ ಸಿ. ಬೈರೇಗೌಡ : ನಾನು ಹೆಸರು ಹೇಳಿದರೆ ನಮ್ಮ ಅಧ್ಯಕ್ಷರು ಕಡತದಿಂದ ತೆಗೆದುಹಾಕುತ್ತಾರೆ ನೀವು ಅದಕ್ಕೆ ದೊಡ್ಡದಾಗಿ ಹೇಳುತ್ತೀರಿ, ಇದು ಆಗುತ್ತಾ ಇರುತ್ತದೆ. ಯಾರ್ಯಾರು ಎನ್‌ಜಿಇಎಫ್ ಸಂಸ್ಥೆಯಲ್ಲಿ ಕೆಲಸ ಮಾಡಿದ್ದಾರೆ ಅವರೆಲ್ಲರನ್ನು ದೂಷಣೆ ಮಾಡುವುದಕ್ಕೆ ಹೋಗುವುದಿಲ್ಲ. ನಿಜವಾಗಲೂ ಕೂಡ ಅವರ ಹೆಸರನ್ನು ನೆನಸಿಕೊಳ್ಳುವುದಕ್ಕೆ ಅಷ್ಟೆ ಸಂತೋಷವಾಗುತ್ತದೆ.ಈ ಸಮಿತಿಯ ವರದಿಯಲ್ಲಿ

ಸಹ ಅವರ ಹೆಸರುಗಳನ್ನು ಸೇರಿಸಿದ್ದಾರೆ. ಸಮಿತಿಯ ವರದಿಯಲ್ಲಿ ಮೂರು ಹೆಸರುಗಳನ್ನು ಸೇರಿಸಿದ್ದಾರೆ. ಎಸ್.ಕೆ.ದಾಸ್, ಮತ್ತೊಬ್ಬರು ಅಂದಿನ ಸಿಎಂಡಿ ಆಗಿದ್ದವರು ಎಸ್.ಬಿ. ಮುದ್ದಪ್ಪ ಮತ್ತು ಕಾರ್ಖಾನೆಯ ಕೆ.ಆರ್. ಕೃಷ್ಣೇಗೌಡ ಅವರ ಹೆಸರುಗಳನ್ನು ಕೂಡ ಸೇರಿಸಿದ್ದಾರೆ. ಅವರ ಸೇವೆಯನ್ನು ಸ್ಮರಿಸಿದ್ದಾರೆ ಅವರುಗಳ ಹೆಸರುಗಳನ್ನು ಹೇಳುವುದಕ್ಕೆ ನನಗೂ ಕೂಡ ಅಷ್ಟೆ ಸಂತೋಷವಾಗುತ್ತದೆ ಅದು ಬೇರೆ. ಬಿಐಎಫ್ಆರ್ ಎನ್ನತಕ್ಕದ್ದು ಒಂದು ಇದೆ. ನಾನು ಆಗಲೇ ಹೇಳಿದಹಾಗೆ ಎನ್‌ಜಿಇಎಫ್ ಷೇರುಗಳನ್ನು ಶೇಕಡ 35ರಷ್ಟನ್ನು 38ಕೋಟಿ ರೂಪಾಯಿಗಳಿಗೆ ಮಾರಾಟ ಮಾಡುವುದಕ್ಕೆ ಆಡಳಿತ ಮಂಡಳಿಯವರು ಸರ್ಕಾರಕ್ಕೆ ಶಿಫಾರಸು ಕಳುಹಿಸಿದ್ದಾರೆ. 38 ಕೋಟಿ ರೂಪಾಯಿ, ಇವತ್ತು ಎನ್‌ಜಿಇಎಫ್ ಕಾರ್ಖಾನೆಯ ಒಟ್ಟಾರೆ ಆಸ್ತಿಯನ್ನು ಲೆಕ್ಕಹಾಕಿದರೆ ಸುಮಾರು 400 ಕೋಟಿ ರೂಪಾಯಿಯಾಗುತ್ತದೆ. ಮಾರ್ಕೆಟ್ ರೇಟ್ ಪ್ರಕಾರ ಲೆಕ್ಕ ಹಾಕಿದರೆ ಸುಮಾರು 400 ಕೋಟಿ ರೂಪಾಯಿಯಾಗುತ್ತದೆ. 400 ಕೋಟಿ ರೂಪಾಯಿಯಲ್ಲಿ ಶೇಕಡ 35ರಷ್ಟು ಅಂದರೆ 140 ಕೋಟಿ ರೂಪಾಯಿಯಾಗುತ್ತದೆ. 140 ಕೋಟಿ ರೂಪಾಯಿ ಆಸ್ತಿಯನ್ನು ಸರ್ಕಾರ ಕೊಡುವುದಕ್ಕೆ ಅವರು ರೆಕಮಂಡ್ ಮಾಡಿರತಕ್ಕದ್ದು ಇದೆ ಸರ್ಕಾರ ಏನು ಮಾಡುತ್ತದೋ ಏನೋ ಗೊತ್ತಿಲ್ಲ ಅವರು ರೆಕಮಂಡ್ ಮಾಡಿರತಕ್ಕದ್ದು 38 ಕೋಟಿ ರೂಪಾಯಿ. ಮುಖ್ಯಮಂತ್ರಿಗಳು ದಯವಿಟ್ಟು ಗಮನಿಸಬೇಕು ಪತ್ರದಲ್ಲಿ ನಾನು ಬರೆದಿದ್ದೇನೆ. ನಾನು ಬರೆದಿರತಕ್ಕ ಪತ್ರವನ್ನು ತಾವು ಓದಿದ್ದೀರೋ ಏನೋ ಗೊತ್ತಿಲ್ಲ ಅದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. 140 ಕೋಟಿ ರೂಪಾಯಿ ಆಸ್ತಿಯನ್ನು ಕೇವಲ 38 ಕೋಟಿ ರೂಪಾಯಿಗಳಿಗೆ ಮಾರಾಟ ಮಾಡುವುದಕ್ಕೆ ಹೊರಟಿದ್ದಾರೆ. ನಮ್ಮ ಕಡೆ ಹೇಳುತ್ತಾರೆ. ಸೂಜಿ ಹಾಕಿ ದಬ್ಬಳ ಎತ್ತುವುದು ಎಂದು. ಇದು ಅದಲ್ಲ, ಸೂಜಿ ಹಾಕಿ ಬಂಗಾರದ ಬೆಟ್ಟವನ್ನು ಹೊತ್ತುಕೊಂಡು ಹೋಗುವುದು. ನನ್ನ ಪತ್ರದಲ್ಲಿ ತಿಳಿಸಿದ್ದೇನೆ. ಈ ಕೆಲಸಕ್ಕೆ ಕೈ ಹಾಕಬೇಡಿ. ಬೇರೆ ಬೇರೆ ಕಡೆಯಿಂದ ಬರಬಹುದಾದ ಹಣದ ಮೂಲ ಇದೆ. ಇವತ್ತು ಎನ್‌ಜಿಇಎಫ್ ಷೇರು ಬಂಡವಾಳ ಬೇರೆ ಕಾರ್ಖಾನೆಗಳಲ್ಲಿದೆ. ಎಇಜಿಯಲ್ಲಿ ಎನ್‌ಜಿಇಎಫ್ ಕಾರ್ಖಾನೆಯದು ಇದೆ. ಪತ್ರದಲ್ಲಿ ನಾನು ಬರೆದಿದ್ದೇನೆ. ಅದರ ಬಗ್ಗೆ ಸೂಕ್ಷ್ಮವಾಗಿ ಸಭೆಯ ಗಮನಕ್ಕೆ ತರುವುದಾದರೆ,

"NGEF holds about 75% of the equity in Karnataka Telecom Ltd."

ಟೆಲಿಕಾಮ್‌ನಲ್ಲಿ ಏನು ನಡೆಯುತ್ತಿದೆ ಎಂಬುದರ ಬಗ್ಗೆ ಹೇಳಬೇಕಾಗಿದೆ. ಹೋದವರ್ಷ ಇದು ಲಾಭದಾಯಕವಾಗಿತ್ತು. ಈಗಾಗಲೇ ಕೆ.ಟಿ.ಎಲ್.ನ ಲಾಭ ಕಡಿಮೆಯಾಗುತ್ತಾ ಇದೆ. ಕಾರಣವೇನೆಂದರೆ, ಈ ಟೆಲಿಕಾಮ್ ವ್ಯವಸ್ಥೆಗೆ ಅಂತರರಾಷ್ಟ್ರೀಯ ಸಮಸ್ಯೆಗಳೆಲ್ಲಾ ಬಂದಿವೆ. ಎ.ಟಿ. ಅಂಟನಿ ಎನ್ನತಕ್ಕಂಥ ಅಮೇರಿಕಾದ ಸಂಸ್ಥೆ ಬಂದಿದೆ. ಜಪಾನ್‌ನಿಂದ ಒಂದು ದೊಡ್ಡ ಕಂಪನಿ ಬಂದಿದೆ. ಅದೇ ರೀತಿ ಫ್ರಾನ್ಸ್‌ನಿಂದ ಒಂದು ದೊಡ್ಡ ಕಂಪನಿ ಬಂದಿದೆ. ಇದು ಯಾವುದರ ಮುಂದೆಯೂ ನಿಮ್ಮ ಕೆ.ಟಿ.ಎಲ್. ನಿಲ್ಲುವುದಕ್ಕೆ ಸಾಧ್ಯವಿಲ್ಲ. ಇವತ್ತು ಭಾರತ ದೇಶದ ಎಲ್ಲಾ ದ್ವಾರಗಳನ್ನು ತೆಗೆದುಹಾಕಿದ್ದೀರಿ. ಬಹುರಾಷ್ಟ್ರೀಯ ಸಂಸ್ಥೆಗಳು ಬಹುರಾಷ್ಟ್ರೀಯ ಕಂಪನಿಗಳು ಇಲ್ಲಿ ಬಂದು ವ್ಯಾಪಾರ ಮಾಡಬಹುದು, [illegible] ಎನ್ನುವುದಕ್ಕೆ ನೀವು ಮುಕ್ತದ್ವಾರಗಳನ್ನು ಕೊಟ್ಟಿದ್ದೀರಿ. ಆದ್ದರಿಂದ, ನಿಮ್ಮ ಈ ಕೆ.ಟಿ.ಎಲ್.ಎನ್ನುವಂತಾದ್ದು ಒಂದು ಸಣ್ಣ it is not even a fry ಇದು ಸುಟ್ಟು ಬೂದಿಯಾಗುತ್ತದೆ. ಆದ್ದರಿಂದಲೇ ನಾನು ಇವತ್ತು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಅದರಲ್ಲಿರತಕ್ಕ ಎನ್.ಜಿ.ಇ.ಎಫ್. ಷೇರು ಏನಿದೆ, ಅದನ್ನು ಮಾರಾಟ ಮಾಡಿದರೆ, ಸುಮಾರು ನಾಲ್ಕುವರೆಯಿಂದ, ಐದು ಕೋಟಿ ರೂಪಾಯಿಗಳ ಹಣ ಸಿಗುತ್ತದೆ. ಅದೇ ರೀತಿಯಲ್ಲಿ ಇವತ್ತಿನದಿವಸ ಅನಾವಶ್ಯಕವಾದ ಕೆಲವು ಇವೆ. ಮೈಸೂರು ಲ್ಯಾಂಪ್ಸ್ ವರ್ಕ್ಸ್‌ನಲ್ಲೂ ಎನ್‌ಜಿಇಎಫ್

ಷೇರ್ಸ್ ಇದೆ. ಅದನ್ನು ವಾಪಸ್ ತೆಗೆದುಕೊಂಡರೆ, 38.28 ಲಕ್ಷ ರೂಪಾಯಿ ಆಗುತ್ತದೆ. ಅದೇ ರೀತಿಯಲ್ಲಿ ಸ್ಟೇಲ್ ಎನ್ನತಕ್ಕಂಥ ಸಂಸ್ಥೆ ಇದೆ. ಈ ಸ್ಟೇಲ್ ಸಂಸ್ಥೆಗೂ ಸಹ 27.50 ಲಕ್ಷ ರೂಪಾಯಿ ಎನ್‌ಜಿಇಎಫ್ ಷೇರು ಇದೆ. ಅದೇ ರೀತಿಯಲ್ಲಿ ನಾನು ಆಗಲೇ ಹೇಳಿದಹಾಗೆ, ಎನ್‌ಜಿಇಎಫ್, ಎ.ಇ.ಜಿ.ಯಲ್ಲಿ ಶೇಕಡ 50ರಷ್ಟು ಷೇರು ಇದೆ. ಇದನ್ನು ವಾಪಸ್ ತೆಗೆದುಕೊಂಡರೆ, ಅದು ಫೇಸ್ ವ್ಯಾಲ್ಯೂ ಇರತಕ್ಕಂತಾದ್ದು 68 ಲಕ್ಷ ರೂಪಾಯಿ. ಆದರೆ, ಅದನ್ನು ಮಾರಾಟ ಮಾಡಿದರೆ, 6ಕೋಟಿ ರೂಪಾಯಿ ಹಣ ಸಿಗುತ್ತದೆ. ಅದೇ ರೀತಿಯಲ್ಲಿ, ಎ.ಇ.ಜಿ. ಸಂಸ್ಥೆಯೂ ಸಹ,ಇದರಲ್ಲಿ ಹೆಚ್ಚಿನ ಹಣವನ್ನು ಹಾಕುವುದಕ್ಕೂ ಕೂಡ ಉತ್ಸಾಹವಾಗಿದೆ. ನಾನು ಪತ್ರದಲ್ಲಿ ಎಲ್ಲವನ್ನೂ ವಿವರವಾಗಿ ತಿಳಿಸಿದ್ದೇನೆ. ಇಲ್ಲಿಯೂ ಕೂಡ ವಿವರವಾಗಿ ಹೇಳಬೇಕೆಂದಿದ್ದೆ. ಆದರೆ ಮುಖ್ಯಮಂತ್ರಿಗಳು ವಿಮಾನದಲ್ಲಿ ಹಾರುವವರಿದ್ದಾರೆ. ಅವರ ವಿಮಾನದ ವೇಗಕ್ಕೆ ನಾನು ಭಾಷಣ ಮಾಡುವುದಕ್ಕಾಗುವುದಿಲ್ಲ. ವಿಮಾನದ ವೇಗಕ್ಕೆ ಹೊಂದಿಕೊಳ್ಳುವುದಕ್ಕೆ ನನ್ನ ಕೈಲಿ ಸಾಧ್ಯವಾಗುತ್ತಾ ಇಲ್ಲ. ಇದೆಲ್ಲವನ್ನೂ ಕೂಡ ಪತ್ರದ ಮುಖೇನ ತಿಳಿಸಿದ್ದೇನೆ. ಆದ್ದರಿಂದ, ಇದರ ಮೇಲೆ ನಿಮ್ಮ ಗುರುತರವಾದಂಥ ಆರೋಪ ಬರುತ್ತದೆ. ನೀವೇನಾದರೂ ಕೂಡ ಎ.ಡಿ.ಡಿ.ಗೆ ಇದರ ಷೇರನ್ನು ಮಾರಾಟ ಮಾಡತಕ್ಕ ಒಂದು ಸಂಚಿಗೆ ನೀವು ಒಳಪಟ್ಟರೆ, ನೀವು ಬಹಳ ಗುರುತರವಾದಂಥ ಆರೋಪವನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ, ದಯವಿಟ್ಟು ನೀವು ಇದನ್ನು ಮಾಡಬೇಡಿ ಮತ್ತು ನನ್ನ ಸಲಹೆ ಏನಿದೆ. ನಾನು ಪತ್ರದ ಮುಖೇನ ತಿಳಿಸಿದ್ದೇನೆ. ಇದನ್ನು ನೀವು ಯಾವ ಆರ್ಥಿಕ ತಜ್ಞರಿಗಾದರೂ ಕಳುಹಿಸಿಕೊಡಿ. ಅವರ ಮೂಲಕ, ಇದು ಸರಿ ಅಥವಾ ಇಲ್ಲ ಎನ್ನುವುದನ್ನು ಖಾತರಿಪಡಿಸಿಕೊಳ್ಳಿ. ಇಷ್ಟನ್ನು ಹೇಳುತ್ತಾ, ನೀವು ಬಹಳ ಬುದ್ಧಿವಂತರು. ದಕ್ಷಿಣ ಕನ್ನಡದವರು ಬಹಳ ಬುದ್ಧಿವಂತರು. ನಿಮ್ಮ ಬುದ್ಧಿ ಎಲ್ಲವೂ ದಕ್ಷಿಣ ಕನ್ನಡದವರ ಮೇಲೆಯೇ ಇರುತ್ತದೆ. ಈಗ ಕೆ.ಟಿ.ಎಲ್.ಗೆ ಒಬ್ಬರು ಸಿಎಂಡಿ ಮಾಡಿದ್ದೀರಿ. ನನಗೆ ಎಷ್ಟು ಆಶ್ಚರ್ಯವಾಗುತ್ತದೆಂದರೆ, ಇವರು ನಿವೃತ್ತಿಯಾಗುತ್ತಾರೆ, ಯಾವಾಗ ನಿವೃತ್ತಿಯಾಗುತ್ತಿದ್ದಾರೆ, 6-3-94ರಂದು ನಿವೃತ್ತಿಯಾಗುತ್ತಿದ್ದಾರೆ. ಯಾವಾಗ ನಿವೃತ್ತಿಯಾಗುತ್ತಿದ್ದಾರೆ, 6-3-94ರಂದು ನಿವೃತ್ತಿಯಾಗುತ್ತಾರೆ. ಶ್ರೀ ಎಸ್. ನಾರಾಯಣಶೆಟ್ಟಿ ಎನ್ನತಕ್ಕವರು ಹಾಲಿ ಕೆಟಿಎಲ್ ನಲ್ಲಿರತಕ್ಕವರು. ಇವರೂ ಕೂಡ ಎನ್.ಜಿ.ಇ.ಎಫ್.ನಲ್ಲಿದ್ದರು. ಇವರ ಕತೆಯೂ ಕೂಡ ಗೊತ್ತಿದೆ. ಆದರೆ, ನಾನು ಹೇಳುವುದಕ್ಕೆ ಕಾಲದ ಅಭಾವದಿಂದ ಹೋಗಲಿಲ್ಲ. ಇವರು ಇದ್ದಂಥ ಕಾಲದಲ್ಲಿ ಏನೇನು ನಡೆಯಿತು ಎನ್ನುವುದನ್ನು ಹೇಳುವುದಕ್ಕೆ ಹೋಗಲಿಲ್ಲ, ಅವರು, ಅಲ್ಲಿ ನಿವೃತ್ತಿಯಾದ ಮೇಲೆ, ಇಲ್ಲಿ ತಂದು ಮರಿ ಹಾಕಿದರು. ಅಲ್ಲಿ ಸಾಲದು ಎಂದು ಹೇಳಿ, ಕೆಟಿಎಲ್‌ಗೆ ತಂದು ಹಾಕಿದರು. ಇವರನ್ನು ಕಾಂಟ್ರಾಕ್ಟ್‌ಆಧಾರದ ಮೇಲೆ ನೇಮಿಸಿಕೊಂಡಿದ್ದೀರಿ. ಅವರ ಕಾಂಟ್ರಾಕ್ಟ್ ಮುಗಿಯತಕ್ಕ ಅವಧಿ 6-3-94ರಂದು. ಇವರನ್ನು ಪುನರ್ ನೇಮಕ ಮಾಡಲು ಆಜ್ಞೆ, ತಾ: 6-1-94ರಲ್ಲಿ ನೀವು ಪತ್ರ ಬರೆದಿದ್ದೀರಿ. ಕಂಪನಿ ಕಾರ್ಯದರ್ಶಿಗಳು, ಟೆಲಿಕಾಮ್ ನಿಯಮಿತ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು ಇವರಿಗೆ ಪತ್ರ, ಸಿಐ 251 ಸಿಸಿಎಲ್ 93.

ಈ ಪತ್ರದ ಮುಖಾಂತರ ತಾವು ಎಲ್ಲಿಯವರೆಗೂ ಅಂದ್ರೆ ಇನ್ನೂ ಅವರ ಅವಧಿ ಮುಗಿಯುವ ಹಾಗೆ ಇಲ್ಲ ಆಗಲೇ ಇವರಿಗೆ ಅವಧಿಯನ್ನು ವಿಸ್ತಾರ ಮಾಡಿ ನಿಯಮ 118ರ ಮೇರೆಗೆ ಶ್ರೀ ಎಸ್ ನಾರಾಯಣಶೆಟ್ಟಿ ಇವರನ್ನು ಸದರಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರನ್ನಾಗಿ 7-3-94ರಿಂದ ಅಂದ್ರೆ ಅವರ ಕಂಟ್ರಾಕ್ಟ್ ಅವಧಿ ಮುಗಿಯುತ್ತದೆಯಲ್ಲ ಅಲ್ಲಿಂದ 31-3-97ರವರೆಗೆ ಅಂದ್ರೆ 3 ವರ್ಷಗಳ ಕಾಲ ಇವರು ಇಲ್ಲಿ ಇವರ ಬಗ್ಗೆ ಹೇಳುವುದಕ್ಕೆ ಕಾರಣ ಇದೆ ಸ್ವಲ್ಪ ದಯವಿಟ್ಟು ಕೇಳಬೇಕು. ಸ್ವಾಮಿ ನಾನು ಇವರನ್ನು ಆಗಲೇ ಬುದ್ಧಿವಂತರು ಅಂತ ಹೇಳಿದ್ದು. ಕೆಲವು ದಿನಗಳ ಹಿಂದೆ ಇವರ ಕುರ್ಚಿ ಅಲ್ಲಾಡುತ್ತಿತ್ತು. ನನ್ನ ಕುರ್ಚಿ ಅಲ್ಲಾಡಿದರೂ ಕೂಡ ಚಿಂತೆ

ಇಲ್ಲ ನಮ್ಮವರನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಇವರು ನಮ್ಮ ಜಿಲ್ಲೆಯವರು ನಮಗೆ ಸಂಬಂಧ ಇರುವವರು ಬಹುಶಃ ಇವರ ಕ್ಷೇತ್ರಕ್ಕೆ ಅವರ ಸಂಬಂಧ ಇದೆ ಅಂತ ನನಗನಿಸುತ್ತದೆ. ನನಗೆ ಅಲ್ಲಿಯವರೆಗೂ ಕೂಡ ಮಾಹಿತಿ ಇಲ್ಲ. ನಿಮ್ಮ ಜಿಲ್ಲೆಯವರು ಅಲ್ಲವೇ ಇವರು ಹೋಗಲಿ. ನಾನು ಹೇಳುತ್ತಿರುವುದು ನಿಮ್ಮ ಜಿಲ್ಲೆಯವರು ಅಂತ. ನಾವು ನೀವು ಎಲ್ಲರೂ ಒಂದೇ ರಾಜ್ಯದವರು.

ಶ್ರೀ ಎಂ. ವೀರಪ್ಪಮೊಯ್ಲಿ : ಈಗ ತಾವು ಮಾತನಾಡುವುದಕ್ಕೆ ಏನೂ ಅಡ್ಡಿ ಇಲ್ಲ. ಅಕಸ್ಮಾತ್ತಾಗಿ ಅವರು ನಮ್ಮ ಜಿಲ್ಲೆಯವರು. ಪ್ರಾಮಾಣಿಕವಾಗಿ ಆ ಪ್ರೊಪೋಜಲ್ ಬರುವವರೆಗೂ ಅವರಿಗೆ ಎಕ್ಸ್‌ಟೆಂಷನ್ ಕೊಡುತ್ತಾರೆಂದು ನನನೆ ಗೊತ್ತಿರಲಿಲ್ಲ ಸಾಧಾರಣವಾಗಿ ಈ ಇಲಾಖೆಯನ್ನು ಸನ್ಮಾನ್ಯರಾಜ್ಯಸಚಿವರಾದ ಶ್ರೀ ರಾಮಲಿಂಗರೆಡ್ಡಿಯವರೇ ಮಾಡುತ್ತಾರೆ. ಅವರಿಂದ ಪ್ರೊಪೋಜಲ್ ಬರುವವರೆಗೂ ಕೂಡ ನನಗೆ ಗೊತ್ತಿಲ್ಲ ಈ ಪ್ರೊಪೋಜಲ್ ಕ್ಯಾಬಿನೇಟ್‌ಗೆ ಬಂದಿದೆ ಅಪ್ರೂವಲ್ ಆಗಿದೆ ಮತ್ತೆ ತಮಗೆ ಗೊತ್ತಿದೆ ಒಂದು ವಿಭಾಗದಲ್ಲಿ ಪರಿಣತಿ ಇದ್ದರೆ ಒಂದು ಸಂಸ್ಥೆ ಲಾಭದಾಯಕವಾಗಿ ನಡೆಯುವುದೇ ಕಷ್ಟ. ಒಂದು ಸಂಸ್ಥೆ ಲಾಭದಾಯಕವಾಗಿ ನಡೆಯುತ್ತಾ ಇದೆ ಅಂತ ಹೇಳಿದರೆ ಈಗ ತಾವೇ ಹೇಳುತ್ತೀರಿ ಸರಿಯಾದಂತಹ ಪ್ರೊಫೆಷನಲಿಜಂ ಆಡಳಿತ ಇರಬೇಕು ಅಂತ ಹೇಳಿ ಪ್ರೊಫೆಷನೇಲಿಜಂ ಅಂತ ಅಧಿಕಾರಿಗಳು ಇದ್ದರೆ ಅಂತಹ ಅಧಿಕಾರಿಗಳನ್ನು ಮುಂದುವರಿಸಿಕೊಂಡು ಹೋಗತಕ್ಕಂಥ ಪ್ರಸ್ತಾವನೆ ಬಂದಿದ್ದರಿಂದ ಮಾಡಿದ್ದೇವೆಯೇ ಹೊರತು ಅದರಲ್ಲಿ ನಮ್ಮ ಜಾತಿ ಅಲ್ಲ ನಮ್ಮ ಸಂಬಂಧ ಅಲ್ಲ ನಮ್ಮಕ್ಷೇತ್ರ ಅಲ್ಲ ಯಾವುದೂ ಅಲ್ಲ ದಯಮಾಡಿ ಇದಕ್ಕೆಲ್ಲ ಬಣ್ಣದ ಲೇಪ ಹಚ್ಚಲಿಕ್ಕೆ ಹೋಗಬೇಡಿ ನನಗೆ ಗೊತ್ತಾಯಿತು ತಾವು ಮೊದಲು ಒಂದು ಹೆಸರು ಪ್ರಸ್ತಾಪ ಮಾಡಿದ್ದೀರಿ. ಅದು ಬಹಳ ರೈವಲ್ ಅವರಿಗೂ ಇವರಿಗೂ ಇದ್ದದ್ದನ್ನು ತಾವು ಪಾಪ ಲಾಭ ಮಾಡಿಕೊಂಡು ಈಗ ಇದನ್ನು ಮೊದಲು ತಾವು ಒಂದು ಹೆಸರು ಹೇಳಿದ್ದಿರಲ್ಲ ನಾನು ಆ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ ಆ ಹೆಸರು ಹೇಳಿದ ಕೂಡಲೇ ಗೊತ್ತಿತ್ತು ನನಗೆ ಇದು ಬಂದೇ ಬರುತ್ತದೆ ಅಂತ ಹೇಳಿ ಏಕೆಂದರೆ ಇದೆಲ್ಲಾ ರೈವಲ್ಲರಿ ಇಂಟರ್‌ಫೈಟ್ ರೈವಲ್ಲರಿ ಇದೆಲ್ಲಾ ಅದನ್ನು ದಯಮಾಡಿ ನಾವು ನೀವು ಹಚ್ಚಿಕೊಳ್ಳುವುದು ಬೇಡ ಅವರವರು ಏನಾದರೂ ಮಾಡಿಕೊಳ್ಳಲಿ ನಾವೇಕೆ?

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ ನಾನು ಒಂದು ಹೆಸರು ಹೇಳಿಲ್ಲ ಮೂರು ಹೆಸರು ಹೇಳಿದ್ದೇನೆ. ಅವರಲ್ಲಿ ಒಬ್ಬರನ್ನು ತಾವು ಈಗ ಕಾರ್ಯದರ್ಶಿಗಳನ್ನಾಗಿ ಮಾಡಿಕೊಂಡಿದ್ದೇನೆ. ತಾವು ಅವರ ಬಗ್ಗೆ ಬಹಳ ಪ್ರಶಂಸೆ ಮಾಡಿದ್ದೀರಿ ನಾನು ಪ್ರಶಂಸೆ ಮಾಡಿದ್ದೇನೆ ಅವರನ್ನು ದಾಸ್ ಅವರನ್ನು ಕಾರ್ಯದರ್ಶಿಗಳನ್ನಾಗಿ ಮಾಡಿಕೊಂಡಿದ್ದೀರಿ ಅವರನ್ನು ತಾವು ಪ್ರಶಂಸೆ ಮಾಡಿದ್ದೀರಿ ನಾನು ಪ್ರಶಂಸೆ ಮಾಡಿದ್ದೇನೆ. ಆ ವರದಿಯಲ್ಲಿ ಕೂಡ ನಮೂದು ಆಗಿದೆ.

ಶ್ರೀ ಎಂ. ವೀರಪ್ಪಮೊಯ್ಲಿ : ಮಾನ್ಯ ಅಧ್ಯಕ್ಷರೇ ನಾವು ಇಲ್ಲಿ ಮಾತನಾಡುವಾಗ ಒಂದು ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ದಯಮಾಡಿ ನಾವು ರಾಜಕಾರಣಿಗಳು ಪರಸ್ಪರದೋಷಾರೋಪಣೆಗಳನ್ನು ಮಾಡಿಕೊಳ್ಳುತ್ತೇವೆ. ಸ್ವಲ್ಪ ನಾವು ಕಿಸ್ಕಿನ್ ಆಗಿಬಿಟ್ಟಿದ್ದೇವೆ. ಆದರೆ ಎಲ್ಲರೂ ಹಾಗೆ ಇದ್ದಾರೆಂದು ತಿಳಿದುಕೊಳ್ಳಬೇಡಿ ಏಕೆಂದರೆ ಅನೇಕ ಪ್ರಾಮಾಣಿಕ ಅಧಿಕಾರಿಗಳು ಇರುತ್ತಾರೆ. ಅವರಿಗೂ ಕೂಡ ಪ್ರಾಮಾಣಿಕವಾಗಿ ಬದುಕಬೇಕು ಎನ್ನತಕ್ಕಂಥ ಆಸೆ ಇದೆ. ನಾವು ಇಲ್ಲಿ ಕುಳಿತುಕೊಂಡು ಮಾತನಾಡುವಾಗ ಅವರು ಯಾರ ವಿಚಾರ ಕೂಡ ಮಾತನಾಡಬೇಕಾದರೆ ಸ್ವಲ್ಪ ವಿಚಾರ ಮಾಡಿ ಮಾತನಾಡಿದರೆ ಒಳ್ಳೆಯದು. ನಮಗೇನು ನಮ್ಮ ಊರಿನಿಂದ ಒಬ್ಬರು ಬಂದರು ನಮ್ಮ ಜಾತಿಯಿಂದ ಒಬ್ಬರು ಬಂದರು. ನಿಮ್ಮ ಜಾತಿಯಿಂದ ಒಬ್ಬರು ಬಂದರು ಅಂತ ಹೇಳಿ ಇವತ್ತು ಜಾತಿ ಇಟ್ಟುಕೊಂಡು ವೈಯುಕ್ತಿಕವಾಗಿ ಆ ಮಟ್ಟಕ್ಕೆ ನಾವು ಇಲ್ಲಿ ಚರ್ಚೆ ಮಾಡಿದರೆ ಹೇಗೆ. ನಿಮ್ಮ ಊರು ಜಾತಿ

ಜಿಲ್ಲೆ ಏನು ನಾವು ನಮ್ಮ ಊರಿನಲ್ಲಿ ಹುಟ್ಟಿದ್ದೇ ನಮ್ಮ ಜಿಲ್ಲೆಯಲ್ಲೇ ಹುಟ್ಟಿದ್ದು ಒಂದು ಪಾಪ ಆಗಿಬಿಟ್ಟಿದೆಯೇ? ಅಥವಾ ಕರ್ನಾಟಕ ರಾಜ್ಯಕ್ಕೆ ದಕ್ಷಿಣ ಕನ್ನಡ ಜಿಲ್ಲೆಯವರು ನಾವು ಬಂದದ್ದೇ ಪಾಪಾನಾ? ದಯಮಾಡಿ ತಾವು ಆ ತರಹ ಎಲ್ಲಾ ಮಾತನಾಡಬೇಡಿ. ಜಿಲ್ಲೆ ಇಟ್ಟುಕೊಂಡು ಮಾತನಾಡಬೇಡಿ. ನಾನು ಏನಾದರೂ ತಪ್ಪು ಮಾಡಿದ್ದರೆ ನನ್ನ ಮೇಲೆ ಏನಾದರೂ ಆಪಾದನೆ ಇದ್ದರೆ ಅದನ್ನು ಎತ್ತಿಕೊಂಡು ಮಾತನಾಡಿ. ಆದರೆ ಒಂದು ಜಿಲ್ಲೆಯಿಂದ ಬಂದವರು ಒಂದು ಭಾಷೆ ಮಾತನಾಡುವವರು ಮತ್ತೊಂದು ಮಾತನಾಡಿದರು ಅಂತ ಅದೇ ಒಂದು ಪಾಪ ಅಂತ ಹೇಳಿ ಈ ಪ್ರಪಂಚದಲ್ಲಿ ಸಮಾಜದಲ್ಲಿ ಇದ್ದರೆ ತಾವು ಈ ಮಾತನಾಡುವುದು ಸರಿ. ಆದರೆ ಒಂದೇ ಜಿಲ್ಲೆಯಿಂದ ಬಂದವರು ಎನ್ನುವ ಮಾತ್ರಕ್ಕೆ ತಾವು ಅದನ್ನು ಎತ್ತಿ ಮಾತನಾಡತಕ್ಕ ಪ್ರವೃತ್ತಿ ಏನು ಇದೆ ಅದು ಅಷ್ಟು ತಮ್ಮಂತಹ ಹಿರಿಯರಿಗೆ ಶೋಭೆ ತರುವುದಿಲ್ಲ.

ಶ್ರೀ ಸಿ. ಬೈರೇಗೌಡ : ಈ ಪ್ರಿನ್ಸಿಪಲ್ ಏನು ಇದೆ ಎಲ್ಲದ್ದಕ್ಕೂ ಕೂಡ ನಾನು ಒಪ್ಪುತ್ತೇನೆ. ದಯವಿಟ್ಟು ಕೇಳಿ ಹಾಗಾದರೆ ಈ ವರದಿಗಳಲ್ಲಿ ಕೂಡ ಏನು ಕ್ರಮ ತೆಗೆದುಕೊಂಡಿದ್ದೀರಿ ಸ್ವಾಮಿ. ಹೇಳಿ ನೋಡೋಣ ಏನು ಕಾರಣ ತೆಗೆದುಕೊಳ್ಳದೆ ಇರುವುದಕ್ಕೆ. ನೀವು ಹೇಳಿದಂತಹ ನೀತಿ ಏನು ಇದೆ ಈ ನೀತಿ ಎಲ್ಲಿಗೆ ಹೋಗಿದೆ ಸ್ವಾಮಿ. ಇದು ಎನ್‌ಜಿಇಎಫ್‌ಗೆ ಸಂಬಂಧಪಟ್ಟ ಹಾಗೆ ನಾನು ಆಗಲೇ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದೆ. 41ನೇ ವರದಿ ಮತ್ತು 53ನೇ ವರದಿಗಳಲ್ಲಿ ಏನು ಹೇಳಿದ್ದಾರೆ ಅದರ ಬಗ್ಗೆ ನಾನು ಈ ಹಿಂದೆ ಪತ್ರ ಕೂಡ ಬರೆದಿದ್ದೇನೆ ನೀವು ಏನು ಹೇಳುತ್ತಿರಲ್ಲ ಇದನ್ನು ಟೆಕ್ನೊಕ್ರೈಟ್ಸ್ ಹಾಕಿ ಅಲ್ಲಿಗೆ ಎಕ್ಸಪೀರಿಯನ್ಸ್ ಇರತಕ್ಕಂಥವನ್ನು ಹಾಕಿ ಅಂತ ಹೇಳಿದ್ದೇವೆ. ಇದರಲ್ಲಿ ಕೆಲವರು ಕ್ರಿಮಿನಲ್ ಅಫೆನ್ಸ್‌ಸ್ ಮಾಡಿದ್ದಾರೆ. ಕೆಲವರು ಕ್ರಿಮಿನಲ್ ಆಕ್ಷನ್ ತೆಗೆದುಕೊಳ್ಳಿ ಎನ್ನತಕ್ಕಂಥಾದ್ದು ಈ ವರದಿಯಲ್ಲಿದೆ. ಫ್ರೂಲ್ ಅಂತ ಕರೆದಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎನ್ನತಕ್ಕಂಥ ಪತ್ರ ಬರೆದಿದ್ದೇನೆ. ಏಕೆ ಈ ನಿಯಮ ಇಷ್ಟುಹೊತ್ತು ಹೇಳಿದ್ದೀರಲ್ಲ ಈ ನೀತಿಯನ್ನು ಏಕೆ ನಾನು ಪತ್ರ ಬರೆದಂತಹ ಸಂದರ್ಭದಲ್ಲಿ ಅನುಸರಿಸಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ : ತಾವು ಪತ್ರ ಬರೆದಿದ್ದರ ಬಗ್ಗೆ ಇಂತಿಷ್ಟು ಪೇಜು ಅಂತ ಕೂಡ ನಾನು ಹೇಳಿದ್ದೇನೆ. ಆದ್ದರಿಂದ ನಿಮ್ಮ ಪತ್ರಕ್ಕೆ ಸಾಕಷ್ಟು ಗಮನ ಕೊಟ್ಟಿದ್ದೇನೆ. ತಾವು ಈ ಕೆಡಿಬಿ ಬಗ್ಗೆ ಏನು ಹೇಳಿದ್ದೀರಿ ಅದರ ಬಗ್ಗೆ ಕೂಡ ಅಷ್ಟು ಪ್ರಾಮಾಣಿಕವಾಗಿ ಹೇಳುವುದಿದ್ದರೆ ಏನು ಅವರವರ ಸ್ವಾಯತ್ತತೆ ಬಗ್ಗೆ ನಾನು ಅಷ್ಟು ಹೆಚ್ಚಾಗಿ ಇಂಟರ್‌ಫಿಯರ್ ಮಾಡುವುದಿಲ್ಲ. ಆ ಕೈಗಾರಿಕೆ ಏನು ಇದೆ ಅದನ್ನು ಆಡಳಿತ ಮಂಡಲಿಯವರು ತೆಗೆದುಕೊಂಡಿದ್ದಾರೆ. ಆಡಳಿತ ಮಂಡಲಿಯವರು ತೆಗೆದುಕೊಳ್ಳತಕ್ಕಂಥ ನಿರ್ಣಯದ ಬಗ್ಗೆ ನಾವು ಏನಾದರೂ ಹಸ್ತಕ್ಷೇಪ ಎಂದಾದರೂ ಮಾಡಿದ್ದರೆ ಪ್ರಾಮಾಣಿಕವಾಗಿ ಹೇಳುವುದಾದರೆ ನಾನು ಮಾಡೇ ಇಲ್ಲ. ನಿರ್ಣಯ ತೆಗೆದುಕೊಂಡು ಆ ಪ್ರಸ್ತಾವನೆ ನಮ್ಮ ಸರ್ಕಾರಕ್ಕೆ• ಬಂದ ಮೇಲೆ ನನಗೆ ಗೊತ್ತಾಯಿತು. ನಾವು ನಮ್ಮ ಪ್ರೊಫೆಷನಲ್ ತೀರ್ಮಾನ ತೆಗೆದುಕೊಂಡಿದ್ದೇವೆ. ಆದರೆ ಅದು ನಮ್ಮ ಕರ್ನಾಟಕ ರಾಜ್ಯದ ಒಟ್ಟಾರೆ ಹಿತದೃಷ್ಟಿಯಿಂದ ಕೈಗಾರಿಕೋದ್ಯಮದ ದೃಷ್ಟಿಯಿಂದ ಸರಿಯಾಗಿದೆಯೇ ಇಲ್ಲವೇ ಎಂದು ನಾವು ಕರ್ನಾಟಕ ಸರ್ಕಾರದಿಂದ ಪರಿಶೀಲನೆ ಮಾಡುತ್ತಿದ್ದೇವೆ. ಸರ್ಕಾರದ ನಿರ್ಣಯ ನಾವು ಇನ್ನೂ ತೆಗೆದುಕೊಂಡಿಲ್ಲ. ಅನಿರ್ಣಯ ಆಡಳಿತ ಮಂಡಳಿ ಮಾಡಿದ್ದು ವಿ ಆರ್ ಟೇಕ್ ಓವರ್. ಅದು ಡಿಸಿಗ್ರೇಟ್ ಮಾಡತಕ್ಕಂಥಾದ್ದು ಅದು ಸರಿಯಾಗಿಯೋ ಇಲ್ಲವೋ ಎನ್ನುವ ವಿಮರ್ಶೆ ಇನ್ನೂ ನಡೆಯುತ್ತಾ ಇದೆ. ಪೊಲಿಟಿಕಲ್ ಅಫೇರ್ಸ್‌ಕಮಿಟಿ ಕೂಡ ಮೊನ್ನೆ ತಾನೇ ಚರ್ಚೆಮಾಡಿದ್ದೇವೆ. ಅದನ್ನು ಡಿಫರ್ ಮಾಡಿದ್ದೇವೆ ಏಕೆಂದರೆ ಅದು ಏಕೆಂದರೆ ಸಾಕಷ್ಟು ಮಾಹಿತಿ ಸಂಗ್ರಹ ಮಾಡಬೇಕಾಗುತ್ತದೆ. ತಾವು ಹೇಳಿದಂತಹ ವಿಚಾರಗಳನ್ನು ಕೂಡ ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಎಲ್ಲಾ ವಿಚಾರಗಳನ್ನು ಗಮನಕ್ಕೆ

ತೆಗೆದುಕೊಂಡೇ ನಿರ್ಣಯ ತೆಗೆದುಕೊಳ್ಳಬೇಕೆ ಹೊರತು ನಾವು ಇನ್ನೂ ಏನೂ ನಿರ್ಣಯ ತೆಗೆದುಕೊಂಡಿಲ್ಲ ಹಾಗೆ ಇಟ್ಟಿದ್ದೇವೆ. ತಾವು ಈಗ ಏನೆಲ್ಲಾ ಪ್ರಸ್ತಾಪ ಮಾಡಿದ್ದೀರಿ ಅದನ್ನೆಲ್ಲಾ ಸಂಪೂರ್ಣವಾಗಿ ಗಂಭೀರವಾಗಿ ಪರಿಶೀಲನೆ ಮಾಡಿ ನಾವು ಮುಂದುವರೆಯುತ್ತೇವೆಯೇ ಹೊರತು ನಾವು ಯಾವುದೇ ರೀತಿಯಾದಂತಹ ಯಾರ ಪ್ರಭಾವಕ್ಕೆ ಒಳಗಾಗಿ ನಿರ್ಣಯ ತೆಗೆದುಕೊಳ್ಳುವ ಅಪೇಕ್ಷೆ ಇಲ್ಲ. ಇಚ್ಛೆ ಇಲ್ಲ. ಮತ್ತೆ ಯಾರಾದರೂ ಈ ಸಂಸ್ಥೆಯನ್ನು ಕಬಳಿಸಬೇಕು ಎನ್ನುವ ಉದ್ದೇಶದಿಂದ ಮಾಡಬೇಕು ಅಂತ ಹೇಳಿದರೆ ನಾವು ಸರ್ವತಾ ಅದಕ್ಕೆ ಮನ್ನಣೆ ಕೊಡುವುದಿಲ್ಲ.

ಶ್ರೀ ಸಿ. ಬೈರೇಗೌಡ : ಸ್ವಾಮಿ ತಾವು ಒಂದಕ್ಕೆ ಒಂದೊಂದು ನೀತಿಯನ್ನು ಅನುಸರಿಸಬೇಡಿ. ತಾವು ಏನು ಹೇಳಿದಿರಿ. ಅಲ್ಲಿರತಕ್ಕಂಥ ಆಡಳಿತ ಮಂಡಳಿಯಲ್ಲಿ ನಾವು ಹಸ್ತಕ್ಷೇಪ ಮಾಡತಕ್ಕಂಥಾದ್ದು ಸರಿಯಲ್ಲ ಅಂತೇ ಹೇಳಿದಿರಿ. ಇವತ್ತು ಈ ವರದಿಯಲ್ಲೇ ಹೇಳಿದ್ದಾರೆ ಸ್ವಾಮಿ ಇದು 41 ಮತ್ತು 53ನೇ ವರದಿಗಳಲ್ಲ ಹೇಳಿದ್ದಾರೆ. ನಿಮ್ಮ ಕಾರ್ಯದರ್ಶಿಗಳಾಗಿರತಕ್ಕಂಥವರು ಯಾವ ರೀತಿಯಲ್ಲಿ ಪತ್ರ ಬರೆದಿದ್ದಾರೆ. ತಾವು ಇದನ್ನು ಸ್ವಲ್ಪ ದಯವಿಟ್ಟು ತರಿಸಿ ಓದಿ. ಈಗಲೇ ಕಳುಹಿಸಿ. ತಮ್ಮ ಕಾರ್ಯದರ್ಶಿಗಳಾಗಿರತಕ್ಕಂಥವರು. ಸರ್ಕಾರದ ಕಾರ್ಯದರ್ಶಿಗಳು.

ಶ್ರೀ ಎಂ. ವೀರಪ್ಪಮೊಯಿಲಿ : ಯಾವ ವರ್ಷ?

ಶ್ರೀ ಸಿ. ಬೈರೇಗೌಡ : ನಿಮ್ಮ ಸರ್ಕಾರದಲ್ಲಿ ಕಾರ್ಯದರ್ಶಿಗಳಾಗಿದ್ದವರು. ಅಂದಿನ ಸರ್ಕಾರದಲ್ಲಿ ನೀವು ಮಂತ್ರಿಗಳಾಗಿದ್ದಿರಿ. ನೀವು ಸಹ ಮಂತ್ರಿಮಂಡಲದಲ್ಲಿ ಇದ್ದಿರಿ. ಅಂದು ನಿಮ್ಮ ಕಾರ್ಯದರ್ಶಿ ಅಂದ್ರೆ ಸರ್ಕಾರದ ಕಾರ್ಯದರ್ಶಿಗಳು. ನಾನು ಅವರ ಹೆಸರುಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ನಿಮ್ಮ ಅಲೆಗ್ಸಾಂಡರ್‌ರವರು ಮತ್ತೇ ನಿಮ್ಮ ಗೋಪಾಲರೆಡ್ಡಿಯವರು ಏನೇನು ಪತ್ರ ಬರೆದಿದ್ದಾರೆ ಓದುವುದಕ್ಕೆ ಸಾಧ್ಯ ಇದೆಯೇ ಸ್ವಾಮಿ. ಯಾರಾದರೂ ಕಿಂಚಿತ್ತು ಪರಿಜ್ಞಾನ ಇರತಕ್ಕಂಥವರು ಇಂತಹ ಪತ್ರಗಳನ್ನು ಸೆಕ್ರಟರಿಯೇಟ್‌ನಲ್ಲಿ ಕುಳಿತುಕೊಂಡು ಅಲ್ಲಿನ ಸಿಎಂಡಿಯವರಿಗೆ ಬರೆಯುತ್ತಾರಲ್ಲ. ಅದನ್ನು ಓದಿದರೆ ಮೈಯಲ್ಲೆ ಉರಿಯುತ್ತದೆ. ಮಾನ್ಯ ಮುಖ್ಯಮಂತ್ರಿಗಳೇ ಅಷ್ಟು ಇಂಟರ್‌ಫಿಯರೆನ್ಸ್ ನಿಮ್ಮ ಸರ್ಕಾರದಿಂದ ಆಗಿದೆ. ನೀವು ಇವತ್ತಿನದಿವಸ ನಾವು ಇಂಟರ್‌ಫಿಯರೆನ್ಸ್ ಆಗುವುದಿಲ್ಲ ಅಂತ ಹೇಳುತ್ತಾ ಇದ್ದೀರಿ. ಅದನ್ನು ನಾನು ಓದಬೇಕಾ? ಸರ್ಕಾರ ಅಂದ್ರೆ ಯಾರು ಸರ್ಕಾರದ ಕಾರ್ಯದರ್ಶಿಗಳು ಅಲ್ಲವೇ?

ಶ್ರೀ ಎಂ. ವೀರಪ್ಪಮೊಯ್ಲಿ : ಯಾವ ವರ್ಷ? ನಾನು ಮುಖ್ಯಮಂತ್ರಿಯಾದ ಮೇಲೆ ಯಾವುದಾದರೂ ಹಸ್ತಕ್ಷೇಪ ಮಾಡಿರತಕ್ಕಂಥಾದ್ದು ಪ್ರಕರಣ ಇದ್ದರೆ ದಾಖಲೆ ಇದ್ದರೆ ಸದನಕ್ಕೆ ಒಪ್ಪಿಸಿ.

ಶ್ರೀ ವಾಟಾಳ್ ನಾಗರಾಜ್ : ಅನೇಕ ಭಾರಿ ನೀವು ಸರ್ಕಾರ ಎಲ್ಲಾ ನಮ್ಮದೇ ಅಂತ ಹೇಳುತ್ತಿದ್ದಿರಿ. ಇವತ್ತು ಏಕೆ ಬೇರೆ ಅಂತ ಹೇಳುತ್ತಿದ್ದೀರಿ.

ಶ್ರೀ ಎಂ.ವೀರಪ್ಪಮೊಯ್ಲಿ : ಅದು ನಮ್ಮ ಸರ್ಕಾರವೇ ಇಲ್ಲ ಅಂತ ಯಾರು ಹೇಳಿದರು.

ಶ್ರೀ ವಾಟಾಳ್ ನಾಗರಾಜ್ : ಬಂಗಾರಪ್ಪ ಸರ್ಕಾರವನ್ನು ನಿಮ್ಮ ಸರ್ಕಾರದ್ದೋ ಅಲ್ಲವೋ ವೀರೇಂದ್ರ ಪಾಟೀಲ್ ಸರ್ಕಾರವನ್ನು ನಿಮ್ಮ ಸರ್ಕಾರ ಅಲ್ಲವೋ ಕಾಂಗ್ರೆಸ್ಸು ಸರ್ಕಾರ ನಿಮ್ಮ ಸರ್ಕಾರ ಅಲ್ಲವೋ?

ಶ್ರೀ ಎಂ. ವೀರಪ್ಪಮೊಯಿಲಿ : 3 ಸರ್ಕಾರ ನಮ್ಮ ಸರ್ಕಾರ. ಜನತಾ ದಳ ಇದ್ದ ಸರ್ಕಾರ ಬೈರೇಗೌಡರು ಇದ್ದ ಸರ್ಕಾರ. ನಮ್ಮ ಸರ್ಕಾರ. ನಮ್ಮ ಅಲೆಗ್ಸಾಂಡರ್ ಅವರ ಅಲೆಗ್ಸಾಂಡರ್ ಅವರ ಅಲೆಗ್ಸಾಂಡರ್ ನಮ್ಮ ಅಲೆಗ್ಸಾಂಡರ್ ಅಷ್ಟೇ. ಆದರೆ ಇದರಲ್ಲಿ ಎಲ್ಲ ನಾವು ಆ ವಿಚಾರವಾಗಿ ಏನು ನಿರ್ಣಯ ತೆಗೆದುಕೊಳ್ಳಬೇಕು

ನೀತಿ ವಿಷಯದಲ್ಲಿ ಒಬ್ಬೊಬ್ಬರು ಮುಖ್ಯಮಂತ್ರಿಯಾದ ಮೇಲೆ ಒಂದೊಂದು ಸರ್ಕಾರದಲ್ಲಿ ನಿರ್ಣಯ ತೆಗೆದುಕೊಳ್ಳುತ್ತಾರೆ. ನಿಮ್ಮ ನಿರ್ಣಯದಲ್ಲಿ ಈ ವರ್ಷ ಏಕೆಂದರೆ ತಾವು ಈ ವರ್ಷದ ರಾಜ್ಯಪಾಲರ ನಿರ್ಣಯದ ಬಗ್ಗೆ ಮಾತನಾಡುತ್ತಿದ್ದೀರಿ ರಾಜ್ಯಪಾಲರ ಭಾಷಣದ ಈ ಅವಧಿಯಲ್ಲಿ ನಾವು ಏನಾದರೂ ತಪ್ಪು ಮಾಡಿದ್ದರೆ ದಯಮಾಡಿ ಹೇಳಿ ತಾವು ಹೇಳಿದಿರಿ ಪಬ್ಲಿಕ್ ಸೆಕ್ಟಾರ್ ಬಗ್ಗೆ ಆ ವರದಿಯಲ್ಲಿ ಏನಾದರೂ ಹೇಳಿದ್ದರೆ ಅದರ ಬಗ್ಗೆ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ ನಾನು ಓದಿಬಿಡುತ್ತೇನೆ. ಸರ್ಕಾರ ನಾವು ಇಂಟರ್ ಪಿಯರ್ ಆಗುವುದಿಲ್ಲ ಎನ್ನುವುದಕ್ಕೆ ಮಾನ್ಯ ಅಧ್ಯಕ್ಷರೆ ತಾವು ಹೇಳಿದರೆ ಓದೇ ಬಿಡುತ್ತೇನೆ ಎಷ್ಟರಮಟ್ಟಿಗೆ ಹೆಜ್ಜೆ ಹೆಜ್ಜೆಗೂ ಸರ್ಕಾರದ ಇಂಟರ್‌ವಿನ್‌ಷನ್ ಇರತಕ್ಕಂಥಾದ್ದನ್ನು ವರದಿಯಲ್ಲಿದೆ. ಹೆಜ್ಜೆ ಹೆಜ್ಜೆಗೂ ಕೂಡ ಮಾಡಿದ್ದಾರೆ. ಹೆಜ್ಜೆ ಹೆಜ್ಜೆಗೂ ಕೂಡ ಪತ್ರ ಹೋಗುತ್ತದೆ ಇಲ್ಲಿಂದ. ಅದೂ ಒಂದೇ ರೀತಿಯಲ್ಲಿರತಕ್ಕಂಥ ಪತ್ರವನ್ನು ಇಬ್ಬರು ಕಾರ್ಯದರ್ಶಿಗಳು ಬರೆಯುತ್ತಾರೆ.

ಉಪಾಧ್ಯಕ್ಷರು : ತಾವು ಚರ್ಚೆಮುಂದುವರಿಸಿ.

4.30 ಪಿ.ಎಂ.

ಶ್ರೀ ಸಿ. ಬೈರೇಗೌಡ : ಒಂದೊಂದಕ್ಕೆ ಒಂದೊಂದು ನೀತಿಯನ್ನು ನೀವು ಅಳವಡಿಸಬೇಡಿರಿ. ಎಲ್ಲಾದಕ್ಕೂ ಒಂದೇ ನೀತಿ ಇರಲಿ. ಹಾಗಾದರೆ ಈ ಸಮಿತಿ ವರದಿಯಲ್ಲಿ ಈ ಕಾರ್ಯದರ್ಶಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಇದೆ. ತೆಗೆದುಕೊಳ್ಳುತ್ತೀರಾ ಸ್ವಾಮಿ? ನಾನು ಇವತ್ತು ಈ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ಇರಲಿಲ್ಲ. ಏಕೆಂದರೆ ಬಿಐಎಫ್‌ಆರ್ ಮುಂದೆ ಇವರು ಹೋಗಬೇಕಾಗಿದೆ 38 ಕೋಟಿ ರೂ. ಎಬಿಬಿ ಇಂದ ಪಡೆದ ಮೇಲೂ ಸಹ

ಶ್ರೀ ವಾಟಾಳ್ ನಾಗರಾಜ್ : ತಾವು ಸುಧೀರ್ಘವಾಗಿ ಆಳವಾಗಿ ಅಭ್ಯಾಸ ಮಾಡಿ ಮಾತನಾಡುತ್ತಿದ್ದೀರಿ. ನನ್ನದು ಎರಡೇ ಪ್ರಶ್ನೆ ಸ್ವಾಮಿ. ಈ ಸರ್ಕಾರಿ ನೂತನ ಕಾರ್ಖಾನೆಯನ್ನು ಖಾಸಗಿಯವರಿಗೆ ಮಾರುತ್ತೀರಾ ಇಲ್ಲವೇ? ಇದು ಸುತ್ತಿಬಳಸಿ ಇಲ್ಲದೆ ನಿಮ್ಮನ್ನೇ ಕೇಳುತ್ತಿದ್ದೇನೆ? ಸರ್ಕಾರಿ ನೂತನ ಕಾರ್ಖಾನೆ ಅದೊಂದು ಒಳ್ಳೆಯ ಕಾರ್ಖಾನೆ, ಬಹಳ ಚೆನ್ನಾಗಿ ಬೆಳೆದಂತಹ ಕಾರ್ಖಾನೆ. ತಾವು ಆ ಶೇರುಗಳನ್ನು ಬೇರೆಯವರಿಗೆ ಮಾರುತ್ತೀರಾ? ಆ ಕಾರ್ಖಾನೆಯನ್ನು ಬೇರೆಯವರಿಗೆ ಮಾರುತ್ತೀರಾ? ಆ ಕಾರ್ಖಾನೆ ತಮ್ಮ ಕೈಯಲ್ಲೇ ನೂರಕ್ಕೆ ನೂರು ಉಳಿಯುತ್ತದಾ ಅಂತ ಹೇಳಿಬಿಟ್ಟರೆ.....

ಉಪಾಧ್ಯಕ್ಷರು : ರಾಜ್ಯಪಾಲರ ಭಾಷಣದ ಮೇಲೆ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಹೇಳುತ್ತಾರೆ ಬೈರೇಗೌಡರೇ ಮುಂದುವರೆಸಿ.

ಶ್ರೀ ಸಿ. ಬೈರೇಗೌಡ : ಅಧ್ಯಕ್ಷರೇ ಈ 38 ಕೋಟಿ ರೂ ಹಣ ಪಡೆದ ಮೇಲೂ ಸಹ ಎಬಿಬಿ ಸಲಹೆ ಮೇರೆಗೇ ಅದು ಪುನಃ ಬಿಐಎಫ್‌ಆರ್ ಮುಂದೆ ಹೋಗಬೇಕಾಗಿದ . ಬಿಐಎಫ್‌ಆರ್ ಮುಂದೆ ಒಂದು ಸಾರಿ ಹೋದರೆ ಆ ಕಂಪೆನಿ ನಮ್ಮದಾಗುವುದಿಲ್ಲ ಅವರು ಯಾರಿಗೆ ಬೇಕಾದರೂ ಕೊಟ್ಟುಬಿಡಬಹುದು ಇವತ್ತು ದಾರಿಗೆ ಹೋಗುವವರನ್ನು ಕರೆದು ನೀವು ಇಂತಹ ಕಂಡಿಶನ್ಸ್ ಹಾಕಿ ಈ ಕಂಪೆನಿಯನ್ನು ಮ್ಯಾನೇಜ್ ಮಾಡಿಕೊಳ್ಳಿ ಎಂದು ಯಾರಿಗೆ ಬೇಕಾದರೂ ಕೊಡುವಂತಹ ಅಪಾಯ ಇದೆ. ನನ್ನ ಸಲಹೆಗಳನ್ನು ನೀವು ಜಾರಿಗೆ ಕೊಡುವುದಾದರೆ ಬಿಐಎಫ್‌ಆರ್ ಮುಂದೆ ಹೋಗಬೇಕಾಗಿಲ್ಲ. ಆದ್ದರಿಂದ ಯಾವುದೇ ಪರಿಸ್ಥಿತಿ ಬಂದರೂ ಸಹ, ಇವರು ಪುನಃ ಬಹಳ ಬುದ್ಧಿವಂತಿಕೆ ಮಾಡುತ್ತಾರೆ ಏಕೆಂದರೆ ಶೇಕಡ 51ರಷ್ಟು ಶೇರಿದ್ದರೆ ಅದು ಸರ್ಕಾರಿ ಕಂಪೆನಿಯಾಗುತ್ತದೆ. ಅದನ್ನು ಉಳಿಸಿಕೊಳ್ಳುತ್ತಿದ್ದಾರೆ. ಅವರದೂ

ಕೂಡ ಉಳಿಸಿಕೊಳ್ಳಬೇಕೂಂತ.ಆದರೆ ಅದು ಉಳಿಯಲು ಸಾಧ್ಯವಿಲ್ಲ. ಎಣಜಿದು ಇವತ್ತಾಗಲೇ 22.34 ಇದೆ, ಅದರ ಶೇರ್ ಕ್ಯಾಪಿಟಲ್ ಜಾಸ್ತಿ ಮಾಡಿದರೆ ಅದು 14ಕ್ಕೆ ಬರುತ್ತದೆ. ಅವರಿಗೆ 49 ಆಗುತ್ತದೆ. 49 ಆದರೂ ಸರ್ಕಾರಿ ಸ್ವಾಮ್ಯದ ಕಂಪನಿಯಾಗಿಯೇ ಉಳಿಯುತ್ತದೆ ಎಂದು ಇವರು ಹೇಳುತ್ತಾರೆ. ಸ್ವಾಮಿ ಎಬಿಬಿಗೆ ನೀವೇನಾದರೂ ಕೊಟ್ಟರೆ

ಎಣಜಿ ಮತ್ತು ಎಬಿಬಿ ಪ್ರಪಂಚದಲ್ಲೆಲ್ಲ ಕಾಂಪಿಟಿಟರ್ಸ್, ಒಬ್ಬರಿಗೊಬ್ಬರು ಸ್ಪರ್ಧೆ ನಡೆಯುತ್ತದೆ. ಎಣಜಿ ಒಂದು ನಿಮಿಷ ಕಂಪನಿಯಲ್ಲಿರುವುದಿಲ್ಲ ಅವರು ಹೊರಟುಹೋಗುತ್ತಾರೆ. ಬಹುಶಃ ಎಬಿಬಿಗೇ ಆ ಶೇರ್ಸನ್ನು ಮಾರಾಟ ಮಾಡಿ, ಏಕೆಂದರೆ ಟೆಕ್ನಲಾಜಿಕಲಾಗಿ ಪ್ರಪಂಚದಲ್ಲೇ ಆ ವಿಷಯದಲ್ಲಿ ಕಾಂಪೀಟ್ ಮಾಡುತ್ತಿದ್ದಾರೆ. ಆ ಕಾರಣದಿಂದ ಒಬ್ಬರಿಗೊಬ್ಬರು ಕಾಂಪಿಟೆಟರಾಗಿ ಒಂದೇ ಕಡೆ ಕೆಲಸ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಎಣಜಿ ತನ್ನ ಶೇರ್ಸನ್ನು ಮಾರಾಟ ಮಾಡುತ್ತಾರೆ ಪುನಃ ಅದು ಪೂರ್ತಿ ಎಬಿಬಿಗೆ ಹೋಗುತ್ತದೆ ಇವತ್ತು ನೀವು 51 ಎಂದು ಉಳಿಸಿಕೊಂಡಿದ್ದೀರಿ, 49 ಎಬಿಬಿ ಆಗುತ್ತದೆ. ನಮ್ಮ ಅಧಿಕಾರಿಗಳು ಆಗಲೇ ಹೇಳಿದೆನಲ್ಲ ಕೆಲವರದೆಲ್ಲ ಕ್ರಿಮಿನಲ್ಸ್, ಮೈಂಡ್ಸ್. ಅಂತಹವರನ್ನೆಲ್ಲ ಅಲ್ಲಿ ಹಾಕುತ್ತಾರೆ. ಇಲ್ಲಿ ನಡೆಸುವವರೂ ಸರಿಯಾಗಿ ನಡೆಸುತ್ತಾರೆಂಬ ನಂಬಿಕೆ ನನಗೆ ಇಲ್ಲ. ಇವತ್ತಲ್ಲ ನಾಳೆ ಈ ಸರ್ಕಾರಿ ಸ್ವಾಮ್ಯದ ಕಂಪೆನಿ ಖಾಸಗಿಯವರಿಗೆ ಹೋಗುತ್ತದೆ. ಆಗಲೇ ಹೇಳಿದಂತೆ ಸೂಜಿ ಹಾಕಿ ಬಂಗಾರದ ಬೆಟ್ಟವನ್ನೇ ಹೊತ್ತುಕೊಂಡು ಹೋಗುವಂತಹ ಪವಣಿಕೆ ಇವತ್ತು ನಡೆಯುತ್ತಿದೆ. ಹಾಗಾಗಿ ಈ ಕಂಪೆನಿ ಎಬಿಬಿ ವಶಕ್ಕೆ ಹೋಗುತ್ತದೆ. ಅಂತಹ ಕೆಲಸವನ್ನು ಈ ರಾಜ್ಯದ ಹಿತದಿಂದ ದಯವಿಟ್ಟು ಮಾಡುವುದಕ್ಕೆ ಹೋಗಬೇಡಿ. ನೀವು ಕ್ಯಾಟಗರಿಕಲಾಗಿ ಹೇಳಬೇಕಾಗುತ್ತದೆ. ಈಗಿರುವ ನಿಮ್ಮ ಶೇರ್ಸ್ 77.40 ಏನಿದೆ ಅದಕ್ಕಿಂತ ಯಾವುದೇ ಕಾರಣಕ್ಕೂ ನಾವು ಕಡಿಮೆ ಮಾಡುವುದಿಲ್ಲ. ಯಾವುದೇ ಪರಿಸ್ಥಿತಿಯಲ್ಲಿ ಖಾಸಗಿಯವರಿಗೆ ಇದನ್ನು ವಹಿಸಿ ಕೊಡುವಂತಹ ಕೆಲಸಕ್ಕೆ ಸರ್ಕಾರ ತೀರ್ಮಾನ ಮಾಡುವುದಿಲ್ಲ ಎಂದು ಈ ಸದನದ ಮೂಲಕ ರಾಜ್ಯದ ಜನತೆಗೆ ಆಶ್ವಾಸನೆ ಕೊಡಬೇಕೆಂದು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಇಲ್ಲಿಗೆ ರಾಜ್ಯಪಾಲ ಭಾಷಣದ ಮೇಲಿನ ಚರ್ಚೆ ಮುಕ್ತಾಯವಾಯಿತು. ಈಗ ಮುಖ್ಯಮಂತ್ರಿಗಳಿಂದ ಉತ್ತರ.

+ ಶ್ರೀ ಎಂ. ವೀರಪ್ಪ ಮೊಯ್ಲಿ : ಸನ್ಮಾನ್ಯ ಉಪಾಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ಬಹಳ ವ್ಯಾಪಕವಾದ ಚರ್ಚೆ ಇವತ್ತಾಗಿದೆ. ಈ ಚರ್ಚೆಯಲ್ಲಿ ಭಾಗವಹಿಸಿದಂತಹ ವಿರೋಧಪಕ್ಷದ ನಾಯಕರು, ಇತರ ನಾಯಕರು, ಈ ಕಡೆಯ ಸದಸ್ಯರು ಎಲ್ಲರಿಗೂ ವಿಶೇಷವಾದ ವಂದನೆಯನ್ನು ನಾನು ಸಮರ್ಪಿಸುತ್ತಿದ್ದೇನೆ. ಎಲ್ಲರೂ ಅನೇಕ ಹೊಸ ವಿಚಾರ ಆಲೋಚನೆಗಳನ್ನು ಇಲ್ಲಿ ನೀಡಿದ್ದಾರೆ ಅದನ್ನು ಸಂಪೂರ್ಣವಾಗಿ ಸರ್ಕಾರ ಗ್ರಹಿಸಿ ಮುಂದಿನ ವರ್ಷದ ನಮ್ಮ ಆಡಳಿತದ ಪ್ರಕ್ರಿಯೆಯಲ್ಲಿ ಆ ಸಲಹೆಗಳನ್ನು ಉಪಯೋಗ ಮಾಡಿಕೊಂಡು ನಮ್ಮ ಆಡಳಿತವನ್ನು ಸರಿಯಾಗಿ ಸಜ್ಜುಗೊಳಿಸಲಿಕ್ಕೆ ಎಲ್ಲ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ ಮತ್ತು ಯಾವುದೇ ಒಂದು ಟೀಕೆ ರಚನಾತ್ಮಕವಾಗಿದೆ ಆ ಬಗ್ಗೆ ನಾನು ವಿಶೇಷವಾಗಿ ಮೆಚ್ಚುಗೆಯನ್ನು ಸೂಚಿಸುತ್ತೇನೆ. ಸನ್ಮಾನ್ಯ ಬೈರೇಗೌಡರು ಬಹಳ ಅಧ್ಯಯನ ಮಾಡಿದ್ದಾರೆ ಮುಖ್ಯವಾಗಿ ಸಾರ್ವಜನಿಕ ರಂಗದ ಬಗ್ಗೆ ಏಕೆಂದರೆ ಸಾರ್ವಜನಿಕರಲ್ಲಿ ಏನು ಶಂಕೆ ಇದೆ ಅದನ್ನು ತಾವು ಪ್ರತಿನಿಧಿಸಿದ್ದೀರಿ, ಅದರಲ್ಲೇನೂ ತಪ್ಪಲ್ಲ ಏಕೆಂದರೆ ನಿಮ್ಮ ಎಲ್ಲ ಪತ್ರಗಳನ್ನೂ ನಾನು ಕೂಲಂಕಷವಾಗಿ ಓದಿದ್ದೇನೆ ಅದಕ್ಕೆ ನಿಮ್ಮ ಕೊನೆಯ ಪತ್ರದಲ್ಲಿ ಇಷ್ಟು ಪುಟಗಳಿತ್ತು ಎಂದು ಹೇಳಿದೆ. ನಿಮ್ಮ ಪತ್ರಗಳಿಗೆ ಎಷ್ಟು ಪ್ರಾಮುಖ್ಯತೆ ಕೊಟ್ಟಿದ್ದೇನೆ ಎಂದರೆ ಪೊಲಿಟಿಕಲ್ ಅಫೇರ್ಸ್ ಕಮಿಟಿ ನಡೆದಾಗ ಆ ಪತ್ರಗಳನ್ನೇ ನಾನು

ಎದುರಿಟ್ಟು ಅನೇಕ ವಿಚಾರಗಳ ಬಗ್ಗೆ ವಿಶ್ಲೇಷಣೆ ಕೂಡ ಮಾಡಿದ್ದೇನೆ. ಆ ವಿವರಕ್ಕೆ ಆಮೇಲೆ ಬರುತ್ತೇನೆ. ತಮ್ಮ ಯಾವುದೇ ಟೀಕೆಗಳನ್ನು ಪ್ರಾಮಾಣಿಕವಾಗಿ ಗ್ರಹಿಸುತ್ತೇವೆ, ರಚನಾತ್ಮಕವಾಗಿವೆ, ಒಳ್ಳೆಯ ಸೂಚನೆ ಕೊಟ್ಟಿದ್ದೀರಿ ಅದಕ್ಕೆ ಧನ್ಯವಾದಗಳು. ಈ ವರ್ಷದ ರಾಜ್ಯಪಾಲರ ಭಾಷಣ, ಹೋದವರ್ಷ ಬಹಳ ಚಿಕ್ಕದಾಗಿತ್ತು, ಈ ಸಾರಿ ಬಹಳ ದೊಡ್ಡದಾಯಿತು ಅಂತ, ಹೋದ ವರ್ಷ ನನ್ನ ಮುಖ್ಯಮಂತ್ರಿ ಪದವಿಯಲ್ಲಿ ಬಂದದ್ದು, ಆಗ ಚಿಕ್ಕದಾಗಿರುತ್ತದೆ. ಈಗ ಎರಡನೇ ವರ್ಷದ್ದು ಬಂದಿದೆ ದೊಡ್ಡದಾಗಿರುತ್ತದೆ ಅಷ್ಟೇ ಹೊರತು ಬೇರೆ ಅದಕ್ಕೆ ವಿಶೇಷ ಮಹತ್ವ ಏನೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಇವರು ಆ ಕಡೆ ಹೋದರೂ ಇಲ್ಲೇ ಕುಳಿತಿರುತ್ತೇವೆ, ನೀವು ಈ ಕಡೆ ಬಂದರೂ ಇಲ್ಲೇ ಕುಳಿತಿರುತ್ತೇವೆ ನಾವು.

ಶ್ರೀ ಎಂ. ವೀರಪ್ಪ ಮೊಯ್ಲಿ : ತಾವು ಎಲ್ಲಿ ಕೂತುಕೊಂಡರೂ ಸಹ ತಮ್ಮ ಸಲಹೆಸೂಚನೆಗಳು ಇಲ್ಲಿರುವವರಿಗೆ ಬಹಳ ಸೂಚ್ಯವಾಗಿರುತ್ತವೆ ಮತ್ತು ಗಮನಾರ್ಹವಾಗಿರುತ್ತವೆ ಅಷ್ಟು ಹೇಳಬಹುದು. ಈ ಬಾರಿ ಕೆಲವು ವಿಶೇಷ ಪ್ರಯತ್ನಗಳ ಬಗ್ಗೆ ತಿಳಿಸಲಿಕ್ಕೆ ರಾಜ್ಯಪಾಲರು ಪ್ರಯತ್ನ ಪಟ್ಟಿದ್ದರಿಂದ ಭಾಷಣ ದೊಡ್ಡದಾಗಿದೆ ಮತ್ತು ಕಳೆದ ವರ್ಷ ಅನುಷ್ಠಾನ ಮಾಡಿದ್ದ ಕಾರ್ಯಕ್ರಮಗಳ ಬಗ್ಗೆ ಜನತೆಗೆ ಮುಟ್ಟಿಸುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡಿದ್ದೇವೆ. ಮತ್ತು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕೂಡ ಈ ಒಂದು ಮಾತು ಪೊಳ್ಳು ಭರವಸೆ ಪೊಳ್ಳು ಎಂಬ ಮಾತುಗಳನ್ನಾಡುತ್ತಿದ್ದಾರೆ. ಇದರ ಬಗ್ಗೆ ಒಂದು ಅಸ್ಪಷ್ಟವಾದ ಆರೋಪ ಮಾಡಿದ್ದೀರಿ. ಎಲ್ಲಿ ಪೊಳ್ಳು ಆರೋಪಗಳು ಇದೆ ಆ ಆರೋಪವನ್ನು ಮಾಡತಕ್ಕಂತಹ ಸದಸ್ಯರು ನಿರ್ದಿಷ್ಟವಾದ ವಿಚಾರಗಳನ್ನು ಹೇಳಿಲ್ಲ. ಆದರೂ ಕೂಡ ಪ್ರಾಮಿಸ್ ಅಂಡ್ ಫರ್‌ಫಾರ್ಮೆನ್ಸ್, ಭರವಸೆಗಳು ಸಾಧನೆ ಇದರ ಬಗ್ಗೆ ನಾನು ಅದನ್ನು ಪಟ್ಟಿ ಮಾಡಿ ಸ್ವಲ್ಪ ಆದಷ್ಟು ಪ್ರಾಮಾಣಿಕವಾಗಿ ಈ ಸದನದ ಮುಂದಿಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಆದರೆ ಇದರ ತೀರ್ಮಾನ ತಮಗೇ ಬಿಟ್ಟದ್ದು. ಪೊಳ್ಳು ಮತ್ತು ನಿಜವಾದ ಭರವಸೆಗಳು, ಸಾಧನೆ ಮಾಡಿದಂತಹ ಭರವಸೆಗಳೇನು ಎಂಬುದನ್ನು ನಿಮ್ಮ ತರ್ಕಕ್ಕೆ ತಮಗೇ ಬಿಟ್ಟಿದ್ದೇನೆ. ಅದರ ಬಗ್ಗೆ ವಿಮರ್ಶೆ ಮತ್ತು ಏನಾದರೂ ಹೇಳುವುದಕ್ಕೆ ಬಯಸುವುದಿಲ್ಲ. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರ ಹಿಂದುಳಿದವರ ಬಗ್ಗೆ ನಾವು ಯಾವುದೂ ಕಾರ್ಯಕ್ರಮ ಹಾಕಿಲ್ಲವೆಂದು ತಾವು ಹೇಳಿದ್ದೀರಿ. ಈ ಬಗ್ಗೆ ಸ್ಪಷ್ಟವಾಗಿ ರಾಜ್ಯಪಾಲರ ಭಾಷಣದಲ್ಲಿ ನಾವು ತಿಳಿಸಿದ್ದೇವೆ. ಏನು ಹೇಳಿದ್ದೇವೆ ಇದು ಭರವಸೆ ಅಲ್ಲ. ಸಾಧನೆ. ಎಲ್ಲಾ ಇಲಾಖೆಗಳಲ್ಲಿ ಪರಿಶಿಷ್ಟ ಜಾತಿ ವರ್ಗಗಳಿಗೆ ಮೀಸಲಿಟ್ಟಿದ್ದ ಖಾಲಿ ಸ್ಥಾನಗಳ ಬ್ಯಾಕಲಾಗ್‌ಅನ್ನು ಭರ್ತಿ ಮಾಡುವ ಉದ್ದೇಶಕ್ಕೊಂದು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳಿಗೆ ಸೇರಿದ ಅಭ್ಯರ್ಥಿಗಳನ್ನು ನೇಮಕ ಮಾಡುವಾಗ ಇದ್ದಂತಹ ನಿರ್ಬಂಧಗಳನ್ನು ಸಂಪೂರ್ಣವಾಗಿ ತೆಗೆದು ಹಾಕಿದ್ದೇವೆ. ಬಹುಶಃ ಸುಮಾರು 12-13 ವರ್ಷಗಳ ನಂತರ ಒಂದು ದಶಕದ ನಂತರ ಪೂರ್ಣ ನಿರ್ಬಂಧವನ್ನು ತೆಗೆದು ಹಾಕುವಂತಹ ಕೆಲಸವನ್ನು ನಾವು ಮಾಡಿದ್ದೇವೆ. ಇದು ಪೊಳ್ಳು ಭರವಸೆಯೇನು? ಒಂದು ದಶಕದ ಮೇಲೆ ನಿರ್ಬಂಧ ಇತ್ತು. ಬ್ಯಾಕಲಾಗ್ ರೆಕ್ರೂಟ್‌ಮೆಂಟಿಗೆ ಅದನ್ನು ತೆಗೆದು ಹಾಕಿದ್ದೇವೆ.

31-3-94ರ ಒಳಗೆ ಈ ನೇಮಕಗಳನ್ನು ಪೂರ್ಣಗೊಳಿಸಲಿಕ್ಕೆ ಎಲ್ಲ ರೀತಿಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಇದಕ್ಕಿಂತ ದೊಡ್ಡ ಸಾಧನೆ ಯಾವುದು ಇದೆ. ಪರ್ಟಿಕ್ಯುಲರ್‌ಲೀ ರೆಕ್ರೂಟ್‌ಮೆಂಟಿನಲ್ಲಿ ಕೆಲವು ವಿವರ ಕೊಡಲಿಕ್ಕೆ ಸಿದ್ಧನಿದ್ದೇನೆ. ಕೆಲವು ವಿವರಗಳನ್ನು ಮಾತ್ರ ಕೊಡುತ್ತೇನೆ. ಪರಿಶಿಷ್ಟ ಜಾತಿ, ವರ್ಗಗಳ ಪಂಗಡಗಳು ತಮ್ಮ ಅಗತ್ಯಗಳಿಗೆ ಬೇಕಾದ ಸೌಲಭ್ಯಗಳನ್ನು ಪಡೆಯಲು ಅನುಕೂಲವಾಗುವಂತೆ ಅವರನ್ನು ಸಹಕಾರ ಸಂಘಗಳ ಸದಸ್ಯರನ್ನಾಗಿ ಮಾಡಿಕೊಳ್ಳಲು ಸರಕಾರ ವಿಶೇಷ ಕಾರ್ಯಕ್ರಮ

ಹಾಕಿಕೊಂಡಿದೆ. ಇದು ನಮ್ಮ ಸರಕಾರದ ವಿಶೇಷ ಕಾರ್ಯಕ್ರಮ. ಸರಕಾರವು ಸಧ್ಯದಲ್ಲಿ ಅರ್ಥ ಶಾಸ್ತ್ರಜ್ಞರನ್ನೊಳಗೊಂಡಂತೆ ತಜ್ಞ ಸಮಿತಿಯನ್ನು ರಚಿಸಲಿದ್ದು ಅದು ಪರಿಶಿಷ್ಟ ಜಾತಿಗಳು ಮತ್ತು ಪಂಗಡಗಳು ಹಿಂದುಳಿದ ವರ್ಗಗಳು ಮತ್ತು ದುರ್ಬಲ ವರ್ಗಗಳಿಗೆ ಸೇರಿದ ಜನರು ಹೊಸ ಉದಾರ ಆರ್ಥಿಕ ನೀತಿಯ ಅಡಿಯಲ್ಲಿ ಕಲ್ಪಿಸಲಾದ ಅವಕಾಶಗಳ ಪ್ರಯೋಜನವನ್ನು ಪಡೆಯಲು ಸಾಧ್ಯವಾಗುವ ಹಾಗೆ ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದೇವೆ. ಒಂದು ಕಡೆ ಕೈಗಾರಿಕೆ ಸಮಾಜ ಮುಂದುವರಿದ ಹಾಗೆ, ಕೈಗಾರಿಕೆ ಮುಂದುವರಿದ ಹಾಗೆ ಈ ವರ್ಗದ ಜನ ಕೂಡ ಆ ಮುಖ್ಯ ವಾಹಿನಿಯಲ್ಲಿ ಸೇರಬೇಕೆಂದು ವಿಶೇಷವಾದ ಪ್ರಯತ್ನ ನಾವು ಮಾಡಿದ್ದೇವೆ. ನಾವು ಮುಂದೆ ಹೋದ ಮೇಲೆ ಹಿಂದೆ ನೋಡುವುದು ಅಲ್ಲ. ಅವರು ಹಿಂದೆ ನಡೆಯುವುದಲ್ಲ. ನಾವು ಮುಂದೆ ಹೋಗುವಾಗ ಅವರನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗುವ ಅವರೂ ಜೊತೆಯಲ್ಲಿರಲಿ ಎನ್ನುವ ಪ್ರಕ್ರಿಯೆಯನ್ನು ರಾಜ್ಯಪಾಲರ ಭಾಷಣದಲ್ಲಿ ಕಾಣಿಸಿದ್ದೇವೆ. ಇದೊಂದು ಮೈಲಿಗಲ್ಲು ಎಂದರೆ ಅದು ಅತಿಶಯೋಕ್ತಿಯಾಗುವುದಿಲ್ಲ. ಸಹಕಾರ ಸಂಘ ಆಡಳಿತ ಸಮಿತಿಗಳಲ್ಲಿ ಪರಿಶಿಷ್ಟ ಜಾತಿ ಪಂಗಡಗಳಿಗೆ, ಹಿಂದುಳಿದ ವರ್ಗದವರಿಗೆ ಮೀಸಲಾತಿ ಸೌಲಭ್ಯವನ್ನು ಮಾಡಲಿಕ್ಕೆ ಇವತ್ತು ಅಧಿನಿಯಮ, ಈ ಪ್ರಕ್ರಿಯೆ ಕೂಡ ಮಾಡುತ್ತಿದ್ದೇವೆ. ಬರೀ ಸದಸ್ಯರನ್ನು ಸೇರಿಸಿದರೆ ಸಾಲದು ಏನು ಸಹಕಾರ ಸಂಘಗಳು ಇವೆ ಅವುಗಳು, ಇವತ್ತು ನಮ್ಮ ಕಾರ್ಯಕ್ರಮವು ಜನರ ಜೀವನದಲ್ಲಿ ಆರ್ಥಿಕವಾಗಿ ಬದಲಾವಣೆಯನ್ನು ತರತಕ್ಕಂತಹ ಉತ್ತಮ ಸಾಧನೆ ಎಂದು ಹೇಳುತ್ತೇವೆ. ಅದರಲ್ಲೂ ದುರ್ಬಲ ವರ್ಗದವರಿಗೆ ಇವತ್ತು ಆಡಳಿತ ಮಾಡತಕ್ಕಂತಹ ಒಂದು ಶಕ್ತಿ ಅವಕಾಶಗಳು ಇಲ್ಲದೇ ಇದ್ದಲ್ಲಿ ಅವು ಕೆಳಸ್ತರದ ಜನರಿಗೆ ಸಹಾಯ ಮಾಡಲಿಕ್ಕಾಗುವುದಿಲ್ಲ. ನಮ್ಮ ಉದ್ದೇಶ ಆಡಳಿತ ಮಂಡಲಿಯ ಬರೀ ಜಾಬ್ ಮೀಸಲಾತಿಯಲ್ಲಿ ಏನು ಮೀಸಲಾತಿ ಮಾಡುತ್ತೇವೆ ಅದು ಬರೀ ಮೇಲಿನ ಪದರಿಗೆ ಮಾತ್ರ ಬದಲಾವಣೆ ಮುಟ್ಟುತ್ತದೆ. ಕೆಳಗಿನ ಪದರಿಗೂ ಅಲ್ಲಿರುವ ಇಂತಹ ವರ್ಗಗಳನ್ನು ಮೇಲಕ್ಕೆ ಎತ್ತಬೇಕಾದರೆ ಇಂತಹ ಪಾರ್ಟಿಸಿಪೇಷನ್ in economic reforms ಅಗತ್ಯ. ಅಥವಾ ಇಂತಹ ಆರ್ಥಿಕ ಸಂಸ್ಥೆಗಳಿಗೆ ಇಲ್ಲದಿದ್ದರೆ ಅದು ಯಾವ ರೀತಿಯ ಮೀಸಲಾತಿ ಇಟ್ಟರೂ ಕೂಡ ಕೆಲವರಿಗೆ ಅಂದರೆ ಸ್ವಲ್ಪ ಕಲಿತವರಿಗೆ ಉದ್ಯೋಗ ಕೊಡಬಹುದೇ ಹೊರತು ಕಲಿಯದೇ ಇರತಕ್ಕಂತಹ ಗ್ರಾಮಾಂತರ ಜನರ ಆತ್ಮ ವಿಶ್ವಾಸವನ್ನು ಅವರಲ್ಲಿ ಹುಟ್ಟಿಸದಿದ್ದರೆ ಯಾವುದೇ ಬದಲಾವಣೆಯಾಗಲೀ ಅದು ಕ್ಷಣಿಕವಾಗುತ್ತದೆ ಅದು ತಾತ್ಕಾಲಿಕವಾಗುತ್ತದೆ, ನೀವು ಸ್ವಲ್ಪ ಕಲಿತವರಿಗೆ ಉದ್ಯೋಗವನ್ನೇ ಕೊಡಬಹುದೇ ಹೊರತು ಕಲಿಯದೇ ಇರತಕ್ಕಂಥ ಗ್ರಾಮಾಂತರ ಜನರಿಗೂ ಕೂಡ ಒಂದು ರೀತಿಯ ಆತ್ಮವಿಶ್ವಾಸ ಅವರಲ್ಲಿ ಹುಟ್ಟಿಸದಿದ್ದರೆ ಯಾವುದೇ ಬದಲಾವಣೆ ಅದು ಕ್ಷಣಿಕವಾಗುತ್ತದೆ. ತಾತ್ಕಾಲಿಕ ಮತ್ತು ಈ ಬದಲಾವಣೆಗಳಿಂದ ಇಡೀ ಸಮಾಜ ಪಾಲುಗೊಳ್ಳುವಿಕೆಗೆ ಅದು ಸಹಕಾರಿಯಾಗುತ್ತದೆ. ಈ ದೃಷ್ಟಿಯಿಂದ ಇವತ್ತು ಪಂಚಾಯತ್ ವ್ಯವಸ್ಥೆಯಲ್ಲಿ ಮಾಡಿದ್ದೇವೆ. ಇವತ್ತು ಪ್ರಧಾನರು, ಉಪಪ್ರಧಾನರು, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು ಅಥವಾ ಜಿಲ್ಲಾ ಪರಿಷತ್ ಅಧ್ಯಕ್ಷರು ಇಲ್ಲೆಲ್ಲ ಮೀಸಲಾತಿ ಇದ್ದರೆ ಅಲ್ಲಿಗೆ ನಿಲ್ಲಬಾರದು. ಈ ಪ್ರಕ್ರಿಯೆ ಎಲ್ಲ ಹಂತದಲ್ಲಿ ನಡೆಯಬೇಕಾಗುತ್ತದೆ. ಸಹಕಾರ ಸಂಘಗಳಲ್ಲಿ ನಡೆಯಬೇಕಾಗುತ್ತದೆ. ಅಥವಾ ಇವತ್ತು ವಿದ್ಯಾಸಂಸ್ಥೆಗಳಲ್ಲಿ ನಡೆಯಬೇಕಾಗುತ್ತದೆ. ಈ ನಮ್ಮ ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಈ ರೀತಿಯ ಪಾರ್ಟಿಸಿಪೇಷನ್ ಇದ್ದಾಗ ಮಾತ್ರ the cycle of democracy will have a full circle. ಇಲ್ಲದಿದ್ದರೆ ಅದು distortion ಆಗುತ್ತದೆ. ವಿಕೃತ ಆಗುತ್ತದೆ. ಸಮಾಜ ಮುಂದೆ ಬರಲಿಕ್ಕೆ ಅದರಿಂದ ಸಾಧ್ಯವಾಗುವುದಿಲ್ಲ. ಇದು ಬಹಳ ಪ್ರಮುಖವಾದಂಥ ಹೆಜ್ಜೆ. ಬಹುಶಃ ಇದು ಪ್ರಥಮವಾಗಿ ಈ ಹೆಜ್ಜೆಯನ್ನು ಇವತ್ತು ನಾವು ತೆಗೆದುಕೊಳ್ಳುತ್ತಿದ್ದೇವೆ, ತೆಗೆದುಕೊಂಡಿದ್ದೇವೆ. ಇನ್ನು ಈ ಶೇಕಡ ಸೀಗಡಿ ಮೀನುಗಾರರ ಸಹಕಾರ ಸಂಘಗಳಿಗೆ

ಗುತ್ತಿಗೆ ನೀಡಲು ಸರ್ಕಾರ ನಾವು ಜಾರಿಗೆ ತಂದಿದ್ದೇವೆ. ಅದರಲ್ಲಿ 18 ರಷ್ಟನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಸೇರಲಿಕ್ಕೆ ಇವತ್ತು ನಾವು ನಿರ್ಣಯವನ್ನು ಮಾಡಿದ್ದೇವೆ. ಆದ್ದರಿಂದ ಇವತ್ತು ಈ ಪರಿಶಿಷ್ಟ ವರ್ಗ, ಹಿಂದುಳಿದ ವರ್ಗಗಳಿಗೆ ಜಾತಿಗಳಿಗೆ ವಿಶೇಷವಾದ ಆರ್ಥಿಕ ಕಾರ್ಯಕ್ರಮಗಳನ್ನು ಹಮ್ಮಿಕ್ಕೊಳ್ಳತಕ್ಕಂಥ ರೀತಿಯಲ್ಲಿ ಒಂದು ಹೊಸ ಮಜಲು ಏನು ಪ್ರವೇಶ ಮಾಡಬೇಕು ಎಂದು ಹೇಳಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಒಂದನ್ನು ಹೇಳಿದ್ದಾರೆ, ಇದು ಬಹುಶಃ ಇದೊಂದು ಬಹುಶಃ ಈ ರಾಷ್ಟ್ರದ ಒಂದು ಯಾವುದೇ ರಾಜ್ಯದ ಇತಿಹಾಸದಲ್ಲಿ ಅದು ಪ್ರಥಮ ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಿಕ್ಕಿಲ್ಲ. ಇದಕ್ಕೆ ಖಂಡಿತವಾಗಿಯೂ ಮೆಚ್ಚುಗೆ ಸೂಚಿಸುತ್ತಾರೆ, ಅದರ ಬಗ್ಗೆ ಟೀಕೆ ಮಾಡದೇ ಇದ್ದದ್ದರಿಂದ ಅದಕ್ಕೆ ಮೆಚ್ಚುಗೆ ಸೂಚಿಸಿದ್ದಾರೆ ಎಂದು ಹೇಳಿ ನಾನು ವಿಶ್ವಾಸವನ್ನು ಇವತ್ತು ಹೊಂದಿದ್ದೇನೆ. ಇನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಬಗ್ಗೆ ನಾವು ಕೆಲವು ವಿಚಾರಗಳನ್ನು ಈಗಾಗಲೇ ಹೇಳಿದ್ದೇವೆ. ನಾವು ಫಸ್ಟ್ ಟೈಮ್ ಒಂದು ಪರಿಶಿಷ್ಟ ವರ್ಗದವರಿಗೆ ಮತ್ತು ಪಂಗಡದವರ ವಿಚಾರದಲ್ಲಿ ತಮಗೆ ಗೊತ್ತಿದೆ, ನಾನು ಕೂಡ 82ರ ಬಜೆಟ್ ಭಾಷಣದಲ್ಲಿ ಇದನ್ನು ಹೇಳಿದ್ದೇನೆ. ಯಾರು ಯೂನಿವರ್ಸಿಟಿಯಲ್ಲಿ ಮೆರಿಟ್ ಸ್ಟೂಡೆಂಟ್ಸ್ ಎಂದು ಹೇಳಿ ಎಸ್‌ಸಿ ಮತ್ತು ಎಸ್‌ಟಿ ಇದ್ದಾರೆ, ಅವರ ಬಗ್ಗೆ ಅವರನ್ನು ನಾವು ನೇಮಕ ಮಾಡಬೇಕು ಎಂದು ನಿರ್ಣಯವನ್ನು ನಾನು ಘೋಷಣೆ ಮಾಡಿದ್ದೆ. ಆದರೆ ನಮ್ಮ ಸರ್ಕಾರ ಹೋಯಿತು. ತಮ್ಮ ಸರ್ಕಾರ ಬಂತು. ತಮ್ಮ ಸರ್ಕಾರ ಕೂಡ ಕ್ರಮ ತೆಗೆದುಕೊಂಡ್ರಿ. ತೆಗೆದುಕೊಳ್ಳಲಿಲ್ಲ ಎಂದು ನಾನು ಹೇಳುವುದಿಲ್ಲ. 82-83ರಿಂದ ಇದನ್ನು ಮಾಡುತ್ತೇವೆ ಎಂದು ತಾವು ಹೇಳಿದ್ದೀರಿ. ಆದರೆ ಏನಾಯಿತು, ಅದರ ನಿಯಮಾವಳಿ ಬಹಳ ಬಿಗಿ ಇತ್ತು. ಆಯ್ಕೆ ಸಮಿತಿ ಮಾಡಬೇಕು, ಆಯ್ಕೆ ಸಮಿತಿಯಿಂದ ಅದರ ಬಗ್ಗೆ ಚುನಾವಣೆ ಮಾಡಬೇಕು, ಆಯ್ಕೆ ಮಾಡಬೇಕು ಎಂದು ಹೇಳಿ ತಾವು ಹೊರಟಿರಿ. ಅದು ಕೆಎಟಿಯಲ್ಲಿ ಸ್ಟೇ ಆಯಿತು. ಹೈಕೋರ್ಟಿನಲ್ಲಿ ಸ್ಟೇ ಆಯಿತು. ಆದರೆ ಮೊನ್ನೆ ಮೊನ್ನೆವರೆಗೆ ಕೂಡ 82-83ರಿಂದ ಜಾರಿಗೊಳಿಸಬೇಕು ಎಂದು ಹೇಳಿ ಏನು ಹಂಬಲ ತಮಗಿತ್ತು, ಒಂದು ದಶಕದವರೆಗೂ ಕೂಡ ಯಾವುದೇ ಒಂದು ನೇಮಕಾತಿ ಕೂಡ ತಮಗೆ ಮಾಡಲಿಕ್ಕೆ ಆಗಲಿಲ್ಲ. ಯಾರಿಗೂ ಮಾಡಲಿಕ್ಕಾಗಲಿಲ್ಲ. ಇದರ ಬಗ್ಗೆ ನಾವು ನಿಯಮವನ್ನು ಸಡಿಲಿಸಿ ಆಯ್ಕೆ ಸಮಿತಿ ಬೇಕಾಗಿಲ್ಲ, ನೇರವಾಗಿ ನೇಮಕಾತಿ ನೀವು ಮಾಡಬೇಕು ಎಂದು ಈಗಾಗಲೇ ಮಾಡಿ ಸುಮಾರು 82-83ನೇ ಸಾಲಿನ 44 ಜನರಿಗೆ ಇವತ್ತು ನೇರವಾಗಿ ಎ ಮತ್ತು ಬಿ ಕ್ಯಾಟೆಗೊರಿಯಲ್ಲಿ ನೇಮಕಾತಿಯನ್ನು ಕೊಡತಕ್ಕಂಥ ಪ್ರಕ್ರಿಯೆ ಇವತ್ತು ನಾವು ಪ್ರಥಮವಾಗಿ 93ನೇ ಇಸವಿಯಲ್ಲಿ ಮಾಡಿದ್ದೇವೆ. 83-84ರಲ್ಲಿ 7 ಜನರ ನೇಮಕಾತಿ ಏಕೆಂದರೆ ಅದು ರಿಸರ್ವೇಷನ್ ಅಷ್ಟೇ ಇದ್ದದ್ದರಿಂದ ಆಯಿತು. ಇವತ್ತು 84-85 ರಿಂದ 92-93ರವರೆಗೆ ಅದಕ್ಕೆ ಟೈಮ್ ಬೌಂಡ್ ಪ್ರೋಗ್ರಾಮ್ ಇಟ್ಟು ಈ ಪರಿಶಿಷ್ಟ ವರ್ಗ ಮತ್ತು ಪಂಗಡದವರಿಗೆ ನೇರ ನೇಮಕಾತಿಯನ್ನು ಆಯ್ಕೆ ಸಮಿತಿಯಿಲ್ಲದೆ ಅವರ ಮೆರಿಟ್ ಮೇಲೆ ಇವತ್ತು ಮಾಡಬೇಕು ಎಂದು ಹೇಳಿ ನಿರ್ಣಯವನ್ನು ತೆಗೆದುಕೊಂಡು ಆ ನಿಯಮಾವಳಿಗಳನ್ನು ಸಡಿಲಿಸಿ ಅಂತಿಮವಾದಂಥ ಪ್ರಕಟಣೆಯನ್ನು ಕೊಟ್ಟ ಮೇಲೆ 44 ಮತ್ತು 7 ಇವತ್ತು 51 ಜನರ ನೇಮಕಾತಿಯನ್ನು ಮಾಡಿದ್ದು ನಾವು ಪ್ರಥಮ. ಈಗ ನಾನು ಹೇಳಲಾ. ನೀವೆಲ್ಲಾ ಭರವಸೆ ಕೊಟ್ಟೆ ಬಂದಿದ್ದೀರಿ ಒಂದು ದಶಕದಿಂದ. ನಾವು ಸಾಧನೆ ಮಾಡಿದ್ದೇವೆ ಎಂದು ಹೇಳಿದರೆ ಭರವಸೆ ಹತ್ತು ವರ್ಷ ಆ ರೀತಿಯಾಗಿ ಆದರೆ ನೀವು ಏಳೆಂಟು ವರ್ಷ ಎಲ್ಲಿಗೆ ಹೋದ್ರಿ? ಆಮೇಲೆ ಒಂದೆರಡು ವರ್ಷ ನಾವೇ ಇರಬಹುದು. ಆದರೆ ಭರವಸೆ ಕೊಟ್ಟ ಸರ್ಕಾರ ಯಾವುದು? ಇವತ್ತು ಆ ಸಾಧನೆಯನ್ನು ಅನುಷ್ಠಾನ ಮಾಡಿದಂಥ ಸರ್ಕಾರ ಯಾವುದು ಇದನ್ನು ತಮ್ಮ ವಿಮರ್ಶೆಗೆ ಬಿಟ್ಟಿದ್ದೇನೆ.

ಇವತ್ತು ಸಾಧನೆ ಅನುಷ್ಠಾನ ಮಾಡಿದ ಸರ್ಕಾರ ಯಾವುದು? ಅದನ್ನು ಇವತ್ತು ನಾನು ತಮ್ಮ ವಿಮರ್ಶೆಗೆ ಬಿಟ್ಟಿದ್ದೇನೆ. ಏಕೆಂದರೆ ವ್ಯವಹರಿಕವಾಗಿ ನಿಯಮಾವಳಿಗಳನ್ನು ಮಾಡಿ, ಇವತ್ತು ಬಹಳ ಸುಲಭವಾಗಿ ನಾವು ಪರಿಶಿಷ್ಟ ವರ್ಗದವರಿಗೆ ಸಹಾಯ ಮಾಡುತ್ತೇವೆ. ಆದರೆ ಎಲ್ಲಿಯವರೆಗೆ ಅನುಷ್ಠಾನ ಆಗಬೇಕು, ಅಲ್ಲಿಯುವರೆಗೆ ನಾವು ಯಾವುದೇ ರೀತಿಯ ಮಾತುಗಳನ್ನು ಆಡಿದ್ದರೂ ಕೂಡ ಅದನ್ನು ವಿಶೇಷವಾಗಿ ಗಮನಕ್ಕೆ ತರುವುದಕ್ಕೆ ಆಗುವುದಿಲ್ಲವೆಂದು ಅದಕ್ಕೆ ಸಾಕ್ಷಿ ಎಂದು ಹೇಳುವುದಕ್ಕೆ ನಾನು ಅಪೇಕ್ಷೆಪಡುತ್ತೇನೆ. ಆದುದರಿಂದ ಇವತ್ತು ಏನು ಭರವಸೆಗಳನ್ನು ಮಾತ್ರ ಕೊಡುತ್ತಿದ್ದೀರಿ, ಸಾಧನೆಗಳನ್ನು ತಾವು ಮಾಡುತ್ತಿಲ್ಲವೆಂದು ಏನು ಆಪಾದನೆ ಮಾಡಿದ್ದೀರಿ ಅದರಲ್ಲಿ ಪೂರ್ತಿ ಸತ್ಯಾಂಶ ಇಲ್ಲ. ಕೆಲವು ಕಡೆ ಸತ್ಯಾಂಶ ಎಂದು ನಾವು ಹುಡುಕಿದರೂ ತಾವು ಹೇಳಿದಂತ ವಿಷಯದಲ್ಲಿ ಪೂರ್ತಿ ಸತ್ಯಾಂಶ ಇಲ್ಲವೆಂದು ಹೇಳುವುದಕ್ಕೆ ಅಪೇಕ್ಷೆಪಡುತ್ತಿದ್ದೇನೆ. ಪ್ಲಾನ್ ಔಟ್‌ಲೇ ಬಗ್ಗೆ ನಾನು ಹೆಚ್ಚು ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಸನ್ಮಾನ್ಯರಾದ ಬನ್ನಿಕೋಡು, ದೇಶಪಾಂಡೆ, ಎಡಿಯೂರಪ್ಪ, ರಾಮಯ್ಯ ಅವರು ಮತ್ತು ಅನೇಕ ಸನ್ಮಾನ್ಯ ಸದಸ್ಯರು ಈ ಬಗ್ಗೆ ಆಕ್ಷೇಪಣೆ ವ್ಯಕ್ತ ಮಾಡಿದ್ದಾರೆ. ಈಗ ಮೇಜರ್ ಪ್ರಾಜೆಕ್ಟ್ ಮತ್ತು ಮೇಜರ್ ಸೆಕ್ಟಾರ್‌ಗಳಿಗೆ ಸರಿಯಾಗಿ ಹಣ ಕೊಟ್ಟಿಲ್ಲವೆಂದು ಹೇಳಿದ್ದಾರೆ. ಇದನ್ನು ನಾನು ವಿಸ್ತಾರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಮಾರ್ಚ್ ತಿಂಗಳಲ್ಲಿ ಈ ಬಗ್ಗೆ ಪುನಃ ಚರ್ಚೆ ಬರುವುದರಿಂದ ಇಲ್ಲಿ ಹೇಳುವುದಕ್ಕೆ ಅರ್ಥ ಕೂಡ ಇಲ್ಲ. ತಾವು ವಿವರಗಳನ್ನು ನೋಡಬೇಕು. ಈ ವರ್ಷ ದೊಡ್ಡ ಗಾತ್ರದ ಪ್ಲಾನ್ ಮಾಡಿ ಆರ್ಥಿಕ ವರ್ಷದಲ್ಲಿ ಕಷ್ಟ ನಮಗೆ ಏನು ಬಂತು ಎಂದು ಈ ಬಗ್ಗೆ ಸಾಕಷ್ಟು ವಿವರಗಳನ್ನು ನಾನು ಈಗಾಗಲೇ ಒದಗಿಸಿದ್ದೇನೆ. ಆದರೆ ಇವತ್ತು ಒಂದೇ ವಿವರ ಕೊಡುವುದು ಇದ್ದರೆ ಜಿಲ್ಲಾ ಪರಿಷತ್ತಿಗೆ 92-93ರಲ್ಲಿ 1226 ಕೋಟಿ ರೂಪಾಯಿ ಅಲೋಕೇಷನ್ ಇದ್ದರೆ ಅದು ಜನವರಿ 1993ರವರೆಗೆ, ಅಲೆಕ್ಕ ನೋಡಿದರೆ 961 ಕೋಟಿ ರೂಪಾಯಿ ಮಾತ್ರ ಖರ್ಚಾಗಿದೆ. ಬಡ್ಜೆಟ್ ಎಸ್ಟಿಮೇಟ್ 93-94ರದ್ದು 1114 ಕೋಟಿ ರೂಪಾಯಿ ಇದ್ದರೆ 1085 ಕೋಟಿ ರೂಪಾಯಿ ರಿಲೀಸಸ್ ಆಗಿದೆ. ಅದೇ ಪ್ರಕಾರ ಹೌಸಿಂಗ್ ಕಾರ್ಯಕ್ರಮದಲ್ಲಿ ಕೂಡ 92-93ರಲ್ಲಿ 83 ಕೋಟಿ ರೂಪಾಯಿ ಅಲೋಕೇಷನ್ ಇದೆ. ನಾನು 2-3 ವಿಚಾರ ಮೇಜರ್ ಸೆಕ್ಟಾರ್‌ನಲ್ಲಿ ಹೇಳುತ್ತೇನೆ, ವಿವರವನ್ನು ಬಡ್ಜೆಟ್ ಅಧಿವೇಶನದಲ್ಲಿ ಹೇಳುತ್ತೇನೆ. ಉದಾಹರಣೆಗೆ ಆಶ್ರಯ ಯೋಜನೆ, ಬಡ್ಜೆಟ್ ಎಸ್ಟಿಮೇಟ್ 92-93ಕ್ಕೆ 82 ಕೋಟಿ ರೂಪಾಯಿ ಇದ್ದರೆ ಜನವರಿ 1993ರವರೆಗೆ ಬಿಡುಗಡೆ ಆದದ್ದು 25 ಕೋಟಿ ರೂಪಾಯಿ. 1993-94ರಲ್ಲಿ 201ಕೋಟಿ ರೂಪಾಯಿ ಬಡ್ಜೆಟ್ ಎಸ್ಟಿಮೇಟ್ ಇದ್ದರೆ ನಾವು ರಿಲೀಸ್ ಮಾಡಿದ್ದು 95 ಕೋಟಿ ರೂಪಾಯಿ. ಇಷ್ಟೇ ಆಲೋಚನೆ ಮಾಡಿ, 25 ಕೋಟಿ ಎಲ್ಲಿ 95ಕೋಟಿ ಎಲ್ಲಿ? That includes 37 crores of the SCP. ಆದುದರಿಂದ ಇವತ್ತು ಇದೇ ರೀತಿಯಲ್ಲಿ ಎಲ್ಲ ಐಟಂನಲ್ಲೂ ಕೂಡ ಇದೆ. ಇರಿಗೇಷನ್‌ನಲ್ಲೂ ಸಹ 92-93ರಲ್ಲಿ 557 ಕೋಟಿ ರೂಪಾಯಿ ಎಸ್ಟಿಮೇಟ್ ಇದ್ದರೆ ರಿಲೀಸಸ್ ಜನವರಿ 1993ರವರೆಗೆ 360 ಕೋಟಿ ರೂಪಾಯಿ ಆಗಿದೆ. ಬಡ್ಜೆಟ್ ಎಸ್ಟಿಮೇಟ್ 93-94ಕ್ಕೆ 821 ಕೋಟಿ ರೂಪಾಯಿ ಇದ್ದರೆ ರಿಲೀಸಸ್ ಜನವರಿ 1994ರವರೆಗೆ 427 ಕೋಟಿ ರೂಪಾಯಿ ಆಗಿದೆ. ನೀವು ಹೇಳಬಹುದು, ಇನ್ನು ಒಂದೆರಡು ತಿಂಗಳು ಇದೆ, ಎಲ್ಲಿ ಮಾಡುತ್ತೀರಿ ಎಂದು. ಇದು ಜನವರಿಯವರೆಗೆ ಮಾತ್ರ. ಫೆಬ್ರವರಿ ಮತ್ತು ಮಾರ್ಚ್‌ನಲ್ಲಿ ಹೆಚ್ಚು ಖರ್ಚು ಮಾಡುತ್ತೇವೆ. ನಮ್ಮ ಉದ್ದೇಶ ಏನೆಂದರೆ, ವೈ.ಕೆ. ರಾಮಯ್ಯನವರು ಇಲ್ಲ, ಅವರು ಅಲ್ಲಿ ಚೇಂಬರ್‌ನಲ್ಲಿ ಹೇಳುತ್ತಿದ್ದರು. ನಮ್ಮ ಉದ್ದೇಶ ಏನೆಂದರೆ ಈ ಪ್ಲಾನ್ ಕಂಪ್ಲೀಟ್ ಮಾಡಬೇಕೆಂಬ

ಉದ್ದೇಶ ಇದೆ. ಯಾವಾಗಲೂ ಕೂಡ ಅಷ್ಟೆ. ಡಿಸೆಂಬರ್- ಜನವರಿಯವರೆಗೆ ಹೆಚ್ಚು ಆಗುವುದಿಲ್ಲ. ಇದನ್ನೇ ಕಂಪೇರ್ ಮಾಡಿ, ಇನ್ನೂ ಹೆಚ್ಚಾಗುತ್ತದೆ. ಮುಖ್ಯವಾಗಿ ಇರಿಗೇಷನ್ ಮೇಜರ್ ಸೆಕ್ಟಾರ್‌ನಲ್ಲಿ ಸಂಪೂರ್ಣವಾಗಿ ಇದನ್ನು ಅನುಷ್ಠಾನ ಮಾಡಬೇಕು. ನಮ್ಮ ಟಾರ್ಗೆಟ್ ಕಂಪ್ಲೀಟ್ ಮಾಡಬೇಕೆಂದು ಎಲ್ಲ ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ.

SRI D.B. CHANDREGOWDA : There is a secret circular.

SRI M. VEERAPPA MOILY : I have answered it. You have shown it but, we have denied it.

ಶ್ರೀ ಆರ್.ವಿ. ದೇಶಪಾಂಡೆ : In Januaruy 820 crores of rupees, ಈಗ ತಾವು ಹೇಳಿದ್ದೀರಿ: 406 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇನ್ನು ಬರುವ ಎರಡು ತಿಂಗಳುಗಳಲ್ಲಿ 4 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇನ್ನು ಬರುವ ಎರಡು ತಿಂಗಳುಗಳಲ್ಲಿ 4 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದಾಗಿ ಹೇಳಿದಿರಿ, ತುಂಬಾ ಸಂತೋಷ. ಗುರಿ ಮುಟ್ಟಬೇಕು, ನಮ್ಮದೂ ಅದೇ ಸದಿಚ್ಛೆಯಾಗಿದೆ. ಆದರೆ, ಹಣ ಬಿಡುಗಡೆಯಾದರೆ ಕೆಲಸವಾಗಬೇಕಲ್ಲ. 1 ಲಕ್ಷ 27 ಸಾವಿರ ಹೆಕ್ಟೇರ್ ಭೂಮಿ ಪ್ರದೇಶದಲ್ಲಿ ನೀರಾವರಿಗಾಗಿ ಖರ್ಚು ಮಾಡುತ್ತೇವೆಂದು 1993-94ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಹೇಳಿದ್ದೀರಿ. ಆದರೆ, ಡಿಸೆಂಬರ್ ತನಕ ನೀರಾವರಿಯಾಗಿದ್ದು 30 ಸಾವಿರ ಹೆಕ್ಟೇರ್‌ಗೂ ಮೀರಿಲ್ಲ. ಈಗ ಹಣ ಬಿಡುಗಡೆಯಾಗಿದ್ದರೂ ನೀರಾವರಿಗೆಂದು ಏನು ಗುರಿ ಹಾಕಿಕೊಂಡಿದ್ದೀರಿ, ಅದನ್ನು ಮುಟ್ಟಲು ಸಾಧ್ಯವೇ? ನಾನು ಕೇಳುತ್ತಿದ್ದೇನೆ: ಹಣವನ್ನು ಏನು ಬಿಡುಗಡೆ ಮಾಡುತ್ತೀರಿ, ಅದು ಪೋಲಾಗಬಾರದು, ಅದು ಸದುಪಯೋಗವಾಗಬೇಕು. ಇದರ ಬಗ್ಗೆ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಇಷ್ಟು ಹೆಕ್ಟೇರ್ ಪ್ರದೇಶದವರೆಗೆ ನೀರಾವರಿ ಮಾಡಬೇಕೆಂಬುದರ ಬಗ್ಗೆ ವಿವರ ಇದೆ. ವಿಷಯವಿಷ್ಟೆ. ಏಕೆಂದರೆ, ಸಾಧನೆ you have to compare to the last year percentage of increase ಅದನ್ನು ಕೂಡ ತಾವು ದಯವಿಟ್ಟು ನೋಡಬೇಕಾಗುತ್ತದೆ. ಸರ್ಕ್ಯುಲರ್ ಬಗ್ಗೆ ಏನು ಹೇಳಿದ್ದೇವೆ, ಅದನ್ನು ನಾವು ಹಣಕಾಸು ಇಲಾಖೆಯಿಂದ ಕೊಟ್ಟಿಲ್ಲ, ಆದರೆ, ಸ್ವಲ್ಪ ಡಿಸಿಪ್ಲಿನ್ ಮಾಡಿದ್ದೇವೆ. ಇವೊತ್ತು ಎಕ್ಸ್‌ಟ್ರಾ ಎಕ್ಸ್‌ಪೆಂಡಿಚರ್ ಅನ್ನು ಬುಕ್ ಮಾಡತಕ್ಕಂಥ ಅದು ಆಥರೈಸ್ಡ್ ಆಗಲಿ, ಅನ್‌ಆಥರೈಸ್ಡ್ ಆಗಲಿ ಮಾಡತಕ್ಕಂಥ ಪ್ರವೃತ್ತಿಯನ್ನು ನಿಲ್ಲಿಸಿದ್ದೇವೆ. ಅದಕ್ಕಾಗಿ ಅನೇಕ ಕಡೆ ಹಾಹಾಕಾರ ಏಳುತ್ತದೆ. When you want to inject discipline all these things will come. ಡಿಸಿಪ್ಲಿನ್ ಇಲ್ಲದೆ ಮಾಡಿ ಎಂದು ಹೇಳಿದರೆ ಸಂತೋಷವಾಗುತ್ತದೆ. ಅದನ್ನು ಹಾಗೆ ನಾವು ಮಾಡಲಿಲ್ಲ. ಯಾವುದೇ ನಯಾ ಪೈಸೆಯನ್ನು ಕೂಡ ನೀರಾವರಿಯಲ್ಲಿ ಕೊಡುವುದಿದ್ದರೆ ಮುಂದೆ ನೀರು ಹೋಗತಕ್ಕಂಥ ಪ್ರವೃತ್ತಿ ಇರಬೇಕಾಗುತ್ತದೆ. ಯಾವುದೋ ಕೆಲವು ರೀಚ್‌ನಲ್ಲಿ ಖರ್ಚು ಮಾಡುವುದಲ್ಲ. Immediately results should be seen ಈ ದೃಷ್ಟಿಯಿಂದ ಇದನ್ನು ಮಾಡುತ್ತಿದ್ದೇವೆ. ಆದುದರಿಂದ, ಮಾನ್ಯ ಸದಸ್ಯರಾದ ರಾಮಯ್ಯನವರಿಗೆ ಹೇಳುವುದಾದರೆ ಕಾವೇರಿಗಾಗಲಿ, ಕೃಷ್ಣಾಗಾಗಲಿ ನಾವು ಆರ್ಥಿಕ ಮತ್ತು ಭೌತಿಕ ಗುರಿ ಏನು ಇಟ್ಟುಕೊಂಡಿದ್ದೇವೆ, ಅದನ್ನು ಪೂರ್ಣಗೊಳಿಸುವ ದಿಸೆಯಲ್ಲಿ ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಅನಂತರ, ಮೊಬಲೈಜೇಷನ್ ಆಫ್ ರಿಸೌರ್ಸಸ್ ಬಗ್ಗೆ ಸಾಕಷ್ಟು ಹೇಳಿದ್ದೇನೆ. ಎಂಟು ತಿಂಗಳೊಳಗೆ ಏನು ಎಕ್ಸ್‌ಪೆಂಡಿಚರ್ ಆಗಿದೆ. ಅದು ಹಣಕಾಸಿನ ವರ್ಷದಲ್ಲಿ 1,127 ಕೋಟಿ ರೂಪಾಯಿ as against the sum of Rs. 942 crores for the corresponding

period during 1992-93. ಅದನ್ನು ನಾವು ಕೊಟ್ಟಿದ್ದೇವೆ. ಮೇಜರ್ ಸೆಕ್ಟರ್‌ನಲ್ಲಿ ಅದರ ಬಗ್ಗೆ ಈಗಾಗಲೇ ವಿವರ ಏನು ಕೊಟ್ಟಿದ್ದೇವೆ, ಈ ಕುರಿತು ಹೆಚ್ಚು ವಿಚಾರ ಹೇಳುವುದಕ್ಕೆ ಅಪೇಕ್ಷಿಸುವುದಿಲ್ಲ. ಹಾಗೆಯೇ ಅಬಕಾರಿ ಮತ್ತು ವಾಣಿಜ್ಯ ತೆರಿಗೆ ಇಲಾಖೆಗಳ ಬಗ್ಗೆ ಈಗಾಗಲೇ ಸಾಕಷ್ಟು ವಿವರಗಳನ್ನು ಕೊಡಲಾಗಿದೆ. ಅಲ್ಲದೆ, ಸಪ್ಲಿಮೆಂಟರಿ ಬಜೆಟ್‌ನಲ್ಲೂ ವಿವರ ಕೊಟ್ಟಿದ್ದೇವೆ. Please wait for the Budget. Wait for another one month. ಇನ್ನೊಂದು ತಿಂಗಳೊಳಗಾಗಿ ಬಜೆಟ್ ಮಂಡಿಸಲಿದ್ದೇವೆ. ಇದರ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಇನ್ನು ಪೊಲೀಸ್ ಹುದ್ದೆಗಳ ನೇಮಕಾತಿ ಬಗ್ಗೆ ಕೂಡ ಇಲ್ಲಿ ಪ್ರಸ್ತಾಪವಾಗಿ ಚರ್ಚೆಯಾಗಿದೆ. 1993-94ನೇ ಸಾಲಿನಲ್ಲಿ ಕರ್ನಾಟಕ ಸರ್ಕಾರ ಒಟ್ಟು 9,000 ವಿವಿಧ ದರ್ಜೆ ಪೊಲೀಸ್ ಅಧಿಕಾರಿಗಳ ಹಾಗೂ ಪೊಲೀಸ್ ಸಿಬ್ಬಂದಿಗಳ ಹುದ್ದೆಗಳಿಗೆ ಮಂಜೂರಾತಿ ನೀಡಿದೆ. ಇಷ್ಟೊಂದು ದೊಡ್ಡ ಗಾತ್ರದಲ್ಲಿ ಹುದ್ದೆಗಳ ಮಂಜೂರಾತಿಯನ್ನು ಯಾವಾಗಲೂ ನೀಡಿಲ್ಲ. You will agree with us on concrete terms. ಇದು ಆಶ್ವಾಸನೆಯಲ್ಲ. ಇದುವರೆಗೆ 4,755 ಪೊಲೀಸ್ ಕಾನ್‌ಸ್ಟೇಬಲ್‌ಗಳನ್ನು ಹಾಗೂ 88ಫಾಲೋವರ್ಸ್‌ಗಳನ್ನು ಕೂಡ ನೇಮಕ ಮಾಡಿಕೊಳ್ಳಲಾಗಿದೆ. ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಇಷ್ಟು ದೊಡ್ಡ ಗಾತ್ರದಲ್ಲಿ ಹುದ್ದೆಗಳ ಮಂಜೂರಾತಿಯಾಗಿರುವುದಿಲ್ಲವೆಂದರೆ ಅದು ಅತಿಶಯೋಕ್ತಿಯಾಗಲಾರದು. ನಮ್ಮಲ್ಲಿ ಬಹಳ ಬಿಕ್ಕಟ್ಟು ಇದೆ, ನಮ್ಮಲ್ಲಿ ಸಂಪನ್ಮೂಲವಿಲ್ಲ, ಖರ್ಚು ಮಾಡುವುದಕ್ಕೆ ಹಣವಿಲ್ಲ, ನೀವು ಭರವಸೆ ಮಾತ್ರ ಕೊಡುತ್ತಿದ್ದೀರಿ, ಸಾಧನೆ ಮಾಡುತ್ತಿಲ್ಲವೆಂದು ನೀವು ಹೇಳಿದಿರಿ. ಹಾಗಾದರೆ, ಈ ನೇಮಕಾತಿಗಳು ಹೇಗೆ ಆಗುತ್ತದೆ? ಮಂಜೂರಾತಿ ಹೇಗೆ ಕೊಡುತ್ತಿದ್ದೇವೆ? ದಿನಾಂಕ 1.1.93 ರಿಂದ 31.1.94ರವರೆಗೆ ಸ್ಟಾಫ್ ಸ್ಯಾಂಕ್ಷನ್ ಮಾಡಿ. ನೇಮಕವಾಗಿರುವ ಎಲ್ಲಾ ವಿವರಗಳಿವೆ. ಹುದ್ದೆಗಳನ್ನು ಮಂಜೂರು ಮಾಡಿರುವುದರಲ್ಲಿ ಎಸ್‌ಪಿ, ಡಿವೈಎಸ್‌ಪಿ, ಸಬ್‌ಇನ್ಸ್‌ಪೆಕ್ಟರ್, ಪಿಎಸ್‌ಐ, ಎಎಸ್‌ಐ, ಹೆಚ್‌ಸಿ, ಪಿಸಿ ಇತರ ಹುದ್ದೆಗಳಿವೆ. ಪೊಲೀಸ್ ಇಲಾಖೆಯ ಸುಧಾರಣೆಗಾಗಿ ನೇಮಿಸಲಾಗಿದ್ದ ಧರ್ಮವೀರ ಆಯೋಗ ಏನಿದೆ, ಮತ್ತು ಅವರು ಏನು ಶಿಫಾರಸ್ಸುಗಳನ್ನು ಮಾಡಿದ್ದಾರೆ, ನಾವು ಇವೊತ್ತಿನವರೆಗೆ ಮಾಡಿರುವ ಸಾಧನೆಗಳಿಂದ ಇಡೀ ರಾಷ್ಟ್ರದಲ್ಲಿಯೇ ಇವೊತ್ತು ಫುಲ್ ಕಾಂಪ್ಲಿಮೆಂಟ್ ಪೊಲೀಸ್ ವ್ಯವಸ್ಥೆ ಮಾಡಿರುವುದರಲ್ಲಿ ನಾವು (ಕರ್ನಾಟಕ ರಾಜ್ಯ) ಪ್ರಥಮರಾಗಿದ್ದೇವೆ. ಎರಡು ವರ್ಷದೊಳಗೆ ಧರ್ಮವೀರ ಆಯೋಗದವರು ಕೊಟ್ಟಂಥ ವರದಿಯ ಅನುಸಾರವಾಗಿ ನೂರಕ್ಕೆ ತೊಂಭತ್ತೊಂಭತ್ತರಷ್ಟು ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತಂದಿದ್ದರಲ್ಲಿ ಪ್ರಪ್ರಥಮ ರಾಜ್ಯ ನಮ್ಮದಾಗುತ್ತದೆ. ಆ ದೃಷ್ಟಿಯಲ್ಲಿ ಎಲ್ಲಾ ರೀತಿಯಲ್ಲು ಪೊಲೀಸ್ ಠಾಣೆಗಳನ್ನು ಸಜ್ಜುಗೊಳಿಸುತ್ತಿದ್ದೇವೆ. ಅನಂತರ ಒಬ್ಬರು ಮಹಿಳಾ ಐ.ಪಿ.ಎಸ್. ಅಧಿಕಾರಿಯನ್ನು ಎಸ್.ಪಿ. ಇನ್ ಚಾರಜ್ Dowry cell ನಲ್ಲಿ ಆ್ಯಂಟಿ ಡೌರಿ ಸೆಲ್‌ನ್ನು ಮಾಡುತ್ತಿದ್ದೇವೆ. ಬೆಂಗಳೂರಿನಲ್ಲಿ ಮಹಿಳೆಯರೇ ಇರುವಂಥ ಪೊಲೀಸ್ ಠಾಣೆಯನ್ನು ತೆರೆಯಲು ಈಗಾಗಲೇ ಮಂಜೂರಾತಿಯನ್ನು ಕೊಟ್ಟಿದ್ದೇವೆ ಅದೇ ರೀತಿಯಲ್ಲಿ, ಹುಬ್ಬಳ್ಳಿ, ಧಾರವಾಡ, ಮೈಸೂರು, ಮಂಗಳೂರು, ದಾವಣಗೆರೆ, ಗುಲ್ಬರ್ಗ, ಬೆಳಗಾಂನಲ್ಲಿ ಸಹ ಮಹಿಳಾ ಪೇದೆಗಳೇ ಇರುವ ಪೊಲೀಸ್ ಠಾಣೆಯನ್ನು ತೆರೆದು ಹೆಣ್ಣುಮಕ್ಕಳಿಗೆ ಆಗುವ ತೊಂದರೆಯನ್ನು ಪ್ರತ್ಯೇಕವಾಗಿ ನೋಡಿಕೊಳ್ಳಲು ಮಾಡುತ್ತಿದ್ದೇವೆ. ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಸಹ ಅಂಥ ಮಹಿಳಾ ಪೊಲೀಸರೆ ಇರುವ ಠಾಣೆಗಳನ್ನು ತೆರೆಯಬೇಕೆಂಬುದು ನಮ್ಮ ಉದ್ದೇಶವಾಗಿದೆ. ಆ ದಿಸೆಯಲ್ಲಿ ಮೇಲೆ ಹೇಳಿದ ಸ್ಥಳಗಳಲ್ಲಿ ಬರುವ ವರ್ಷ ಮಹಿಳಾ ಪೊಲೀಸ್ ಠಾಣೆಯನ್ನು ಪ್ರಾರಂಭ ಮಾಡುತ್ತೇವೆ. ಅನಂತರ ಮಹಿಳೆಯರ ವಿಚಾರದಲ್ಲಿ ಪ್ರತಿಯೊಂದು ಜಿಲ್ಲಾ ಕೇಂದ್ರಗಳಲ್ಲಿ ಗ್ರಿವೆನ್ಸ್ ಸೆಲ್ಸ್‌ನ್ನು ಮಾಡಬೇಕು, ಮತ್ತು ಸಿಟಿ ಪೊಲೀಸ್ ಕಮಿಷನರ್ ಕಛೇರಿಯಲ್ಲಿ ಸಹ ಅದನ್ನು ಮಾಡಬೇಕೆಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಒಂದೊಂದು ಸೆಲ್‌ನಲ್ಲು ಸಹ ಮಹಿಳಾ ಪೊಲೀಸ್‌ಅಧಿಕಾರಿ ಇರುತ್ತಾರೆ, and

there will be councellers from the Social Welfare Department. ಮತ್ತು ಎಲ್ಲೆಲ್ಲಿ ಪೊಲೀಸರ ಸಹಾಯ ಬೇಕೋ ಅಲ್ಲಿ ಪೋಲೀಸರ ಸಹಾಯವನ್ನು ಇಂಥ ಗ್ರಿವೆನ್ಸ್ ಸೆಲ್‌ಗೆ ಒದಗಿಸಲು ಎಲ್ಲಾ ರೀತಿಯಲ್ಲು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಈಗ suffering on women and atrocities against women ಬಗ್ಗೆ ಹೇಳುವುದಾದರೆ ಇದರ ಬಗ್ಗೆ ನಾವು ಪ್ರತ್ಯೇಕವಾಗಿ ಹೆಣ್ಣುಮಕ್ಕಳ, ಮಹಿಳೆಯರ ಸಮಸ್ಯೆ ಮತ್ತು ಅವರ ಮೇಲೆ ಆಗತಕ್ಕ ಅಕ್ರಮ ಮತ್ತು ಅತ್ಯಾಚಾರಗಳ ವಿಚಾರದಲ್ಲಿ ಸೂಕ್ಷ್ಮವಾದಂಥ ರೀತಿಯಲ್ಲಿ ಮತ್ತು ವಿಶೇಷ ಗಮನವನ್ನು ಕೊಟ್ಟು ಪೋಲೀಸ್ ಕಾಂಪೊನೆಂಟ್ಸ್‌ಗಳಿಗೆ, ಮತ್ತು ಪೋಲೀಸ್ ಅಧಿಕಾರಿಗಳಿಗೆ ತರಬೇತಿಯನ್ನು ಕೊಡುವ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ.

ಮತ್ತು ವರದಕ್ಷಿಣೆ ನಿರೋಧದ ದಳವು ಸಿಓಡಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅದರಲ್ಲಿ 13 ಇನ್ಸ್‌ಪೆಕ್ಟರ್‌ಗಳ ಮತ್ತು ಅದಕ್ಕೆ ಸಂಬಂಧಪಟ್ಟ ಸಿಬ್ಬಂದಿಗಳು ಇರುತ್ತಾರೆ. ಇದರ ಬಗ್ಗೆ ಈಗಾಗಲೇ ಸಾಕಷ್ಟು ಸುತ್ತೋಲೆಗಳನ್ನು ಇಶ್ಯೂ ಮಾಡಿದ್ದೇವೆ. ಇನ್ನು ಪಂಚಾಯತಿ ರಾಜ್ಯ ವಿಷಯದ ಬಗ್ಗೆ ನಾನು ವಿಶೇಷವಾಗಿ ಹೇಳಬೇಕಾದ ಅವಶ್ಯಕತೆ ಇಲ್ಲ. ಅದರ ಬಗ್ಗೆ ಈಗಾಗಲೇ ಗ್ರಾಮೀಣಾಭಿವೃದ್ಧಿ ಸಚಿವರು ಹೇಳಿದ್ದಾರೆ. ಬಹುಶಃ ಇಡೀ ರಾಷ್ಟ್ರದಲ್ಲಿ ಸಂವಿಧಾನದ ಬದಲಾವಣೆಗೆ ತಿದ್ದುಪಡಿಯಾದ ನಂತರ ಪ್ರಪ್ರಥಮವಾಗಿ ಪಂಚಾಯಿತಿ ರಾಜ್‌ನ ಆ್ಯಕ್ಟ್‌ನ್ನು ಜಾರಿಗೆ ಮಾಡಿದ ಕೀರ್ತಿ ಮತ್ತು ಪಂಚಾಯಿತಿ ರಾಜ್ಯ ಮಸೂದೆಯನ್ನು ಮಂಜೂರು ಮಾಡಿದ ಕೀರ್ತಿ ನಮಗೆ ಸಲ್ಲುತ್ತದೆ. ಅದಕ್ಕೆ ತಾವೆಲ್ಲರೂ ಸಹ ಸಹಕಾರವನ್ನು ಕೊಟ್ಟಿದ್ದೀರಿ. ಅದರ ಜೊತೆಗೆ, ಈಗಾಗಲೇ ಮಂಡಲದ ಪ್ರಧಾನರನ್ನು ಹಾಗು ಉಪ-ಪ್ರಧಾನರನ್ನು ಆಯ್ಕೆ ಮಾಡುವುದಕ್ಕೆ ಸುತ್ತೋಲೆಯನ್ನು ಹೊರಡಿಸಲಾಗಿದೆ. ಬಹುಶಃ ಮುಂದಿನ ಮಾರ್ಚ್ ಒಂದನೇ ತಾರೀಖಿನಿಂದ 15ನೇ ತಾರೀಖಿನೊಳಗೆ ಆ ಪ್ರಕ್ರಿಯೆ ಆಗುತ್ತದೆ. ಅದರ ಬಗ್ಗೆ ಈಗಾಗಲೇ ಸಾಕಷ್ಟು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಇನ್ನು ಜವಹರ್ ರೋಜ್‌ಗಾರ ಯೋಜನೆಯ ಬಗ್ಗೆ ಸಹ ಮತ್ತು ಅದನ್ನು ಅನುಷ್ಠಾನ ಮಾಡುವಲ್ಲಿ ನಾವು ಸಾಕಷ್ಟು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಆ ಯೋಜನೆಯ ಅಡಿಯಲ್ಲಿ ಇದೇ ಜನವರಿ 31, 1994ಕ್ಕೆ ಆದ ಖರ್ಚು 96.31ಕೋಟಿ ರೂಪಾಯಿಗಳನ್ನು. ಜವಹರ್‌ರೋಜ್‌ಗಾರ್ ಯೋಜನೆಯ ಹಣವು ಲ್ಯಾಪ್ಸ್ ಆಗಬಾರದೆನ್ನುವ ದೃಷ್ಟಿಯಿಂದ, ಕಳೆದ ವರ್ಷದ ಆ ಯೋಜನೆಯ ಸಫಲತೆಯಲ್ಲಿ ಎಲ್ಲೆಲ್ಲಿ ದೋಷವಿತ್ತು. ಎಲ್ಲಿಲ್ಲಿ ಕಾರ್ಯಕ್ರಮವನ್ನು ಮಾಡುವಲ್ಲಿ ಕೊರತೆ ಇತ್ತೋ ಅದನ್ನು ಸರಿಪಡಿಸಿಕೊಂಡು, ಆ ಯೋಜನೆಯ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜಾರಿಮಾಡಲು ನಾವು ವಿಶೇಷವಾದ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಜವಹರ್ ರೋಜ್‌ಗಾರ ಯೋಜನೆಯ ಇಂಟೆನ್‌ಸಿವ್ ಪ್ರೋಗ್ರಾಮ್ ಏನು ಇದೆ ಅದಕ್ಕೆ ಒಟ್ಟಾರೆ ಅಲೋಕೇಷನ್ 47.15 ಕೋಟಿ ರೂಪಾಯಿಗಳು ಅದನ್ನು ಕೇಂದ್ರ ಸರ್ಕಾರ ಕೊಡುತ್ತದೆ. ಅದರ ಪ್ರಥಮ ಕಂತು 16.85 ಕೋಟಿ. ಅದರಲ್ಲಿ ಈಗಾಗಲೆ 9 ಕೋಟಿ ರೂಪಾಯಿಗಳು ಖರ್ಚಾಗಿದೆ. ಅದಲ್ಲದೆ ಉದ್ಯೋಗದ ಭರವಸೆಯ ಕಾರ್ಯಕ್ರಮವನ್ನು ಕೂಡ ಈಗಾಗಲೇ ಅನುಷ್ಠಾನಕ್ಕೆ ತಂದಿದ್ದೇವೆ. ನಮ್ಮ ಅನೇಕ ಯೋಜನೆಗಳಲ್ಲಿ, ಅದರಲ್ಲು ಮುಖ್ಯವಾಗಿ ಗ್ರಾಮೀಣ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಇದುವರೆಗೆ ಸಾಧಿಸಿರತಕ್ಕಂಥ ಸಾಧನೆಯ ಅನೇಕ ಕಾರ್ಯಕ್ರಮಗಳ ಬಗ್ಗೆ ಈಗಾಗಲೇ ಅನೇಕ ಬಾರಿ ಪ್ರಶ್ನೋತ್ತರ ಕಾಲದಲ್ಲಿ ಬಂದಿದೆ. ಮತ್ತು ಆ ಕಾಲದಲ್ಲಿ ಇದರ ಬಗ್ಗೆ ಚರ್ಚೆಯ ಸಹ ಆಗಿದೆ. ಆದ್ದರಿಂದ ಅದರ ಬಗ್ಗೆ ಪುನಃ ಹೇಳಲು ನಾನು ಅಪೇಕ್ಷೆ ಪಡುವುದಿಲ್ಲ.

5.00 ಪಿ.ಎಂ.

ಅದನ್ನು ನಾನು ಪುನಃ ಹೇಳಲಿಕ್ಕೆ ಅಪೇಕ್ಷೆ ಪಡುವುದಿಲ್ಲ. ಆದರೆ ಅದರಲ್ಲಿ 1993-94ರಲ್ಲಿ ಸಮಗ್ರ ಗ್ರಾಮೀಣ ಯೋಜನೆಯ ಆರ್ಥಿಕ ವಾರ್ಷಿಕ ಅನುದಾನ 56.50 ಕೋಟಿ ರೂ.ಗಳು ಇದೆ. ಇವತ್ತು ನಾವು ಈಗಾಗಲೇ ಆ ಹಣವನ್ನು

ಬಿಡುಗಡೆ ಮಾಡುತ್ತಲೇ ಇದ್ದೇವೆ. ಅಲ್ಲಿ ಯಾವುದೇ ರೀತಿಯ ಕೊರತೆ ಬಾರದ ಹಾಗೆ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಇನ್ನು ಯುಟಿಲೈಸೇಷನ್ ಇನ್ ಕೃಷ್ಣಾ ಮತ್ತು ಕಾವೇರಿ ಜಲಾನಯನದ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೀರಿ. ನಾವು ಈಗಾಗಲೇ ಬಚಾವತ್ ನ್ಯಾಯಾಧೀಕರಣದ ತೀರ್ಪಿನ ಅನುಸಾರ ಕರ್ನಾಟಕಕ್ಕೆ ಕೃಷ್ಣ ಕೊಳದಲ್ಲಿ ಲಭ್ಯವಿರುವ 734 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳಲಿಕ್ಕೆ ತಯಾರಿಸುವ ಸಮಗ್ರ ಯೋಜನೆಯ ಅನುಸಾರ ಪ್ರಸ್ತುತ ನಿರ್ಮಾಣದ ವಿವಿಧ ಹಂತದಲ್ಲಿರುವ ಹಾಗೂ ಇನ್ನೂ ಕೈಗೊಳ್ಳಬೇಕಾದ ಎಲ್ಲಾ ಯೋಜನೆಗಳನ್ನು ಕ್ರಿ.ಶ. 2000 ಇಸವಿಯ ವೇಳೆಗೆ ಪೂರ್ಣಗೊಳಿಸುವ ವಿಚಾರದಲ್ಲಿ ......

ಶ್ರೀ ಡಿ.ಬಿ. ಚಂದ್ರೇಗೌಡ : ಸದಸ್ಯರು ಏಕೋ ಒಂದೇ ಸಮನೆ ವಾಕ್‌ಔಟ್ ಮಾಡುತ್ತಿದ್ದಾರೆ.

ಒಬ್ಬ ಮಾನ್ಯ ಸದಸ್ಯರು : ಚುನಾವಣೆಯ ಕಾರಣ ಹಾಗೆ ಆಗಿದೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಶ್ರೀ ರಾಜಶೇಖರಮೂರ್ತಿಯವರು ರಾಜ್ಯಸಭೆಗೆ ಆಯ್ಕೆ ಆಗಿದ್ದಾರೆ. ನಮಗೆ ಸಂತೋಷ, ಅವರಿಗೆ ಅಭಿನಂದನೆಯನ್ನು ಸಲ್ಲಿಸೋಣ. ಏಕೆಂದರೆ ಅವರು ಮತ್ತೆ ಇಲ್ಲಿ ಕುಳಿತುಕೊಳ್ಳುವುದಿಲ್ಲ. ಅವರು ಎದ್ದು ಹೋಗುವುದಕ್ಕೆ ಮುಂಚೆ ಹೇಳಿಬಿಟ್ಟರೆ ಒಳ್ಳೆಯದು ಎಂದು ಹೇಳುತ್ತಿದ್ದೇನೆ. ನಿಮ್ಮ ದಿಲ್ಲಿಯ ಯಾತ್ರೆ ಮತ್ತು ದಿಲ್ಲಿಯಲ್ಲಿ ನೀವು ಕಳೆಯುವಂತಹ 6 ವರ್ಷಗಳ ಅವಧಿಯಲ್ಲಿ ರಾಜ್ಯಕ್ಕೆ ಅನುಕೂಲವಾಗಲಿ ಎಂದು ಅವರಿಗೆ ಹೇಳುತ್ತೇನೆ. ನನ್ನ ದೃಷ್ಟಿಯಲ್ಲಿ ತಮ್ಮ ಪಕ್ಷದವರು ಒಪ್ಪುತ್ತಾರೋ ಇಲ್ಲವೋ ಗೊತ್ತಿಲ್ಲ. ಒಬ್ಬ ಸಮರ್ತ ಮಂತ್ರಿಗಳು ರಾಜ್ಯಕ್ಕೆ ಇಲ್ಲವಾದರು ಎಂಬ ದುಃಖವನ್ನು ಈ ಮೂಲಕ ವ್ಯಕ್ತಪಡಿಸಿ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ರಾಜ್ಯದ ಸಮರ್ಥ ವ್ಯಕ್ತಿಯಾಗಿದ್ದರು. ಅಲ್ಲಿ ಹೋದರೂ ಅವರು ಸಮರ್ಥ ಮಂತ್ರಿಯಾಗುತ್ತಾರೆ ಎಂಬ ವಿಶ್ವಾಸ ನಮಗಿದೆ. ಹಾಗೆ ಆಗಲಿ ಎಂಬುದು ನಮ್ಮ ಸದ್ ಇಚ್ಛೆ. ಆದಷ್ಟು ಬೇಗ ಸಮರ್ಥ ಮಂತ್ರಿಯಾಗುತ್ತಾರೆ ಎಂಬ ವಿಶ್ವಾಸ ನಮಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಹೇಳಿದ ಉದ್ದೇಶವೇನೆಂದರೆ ವಾಕ್‌ಔಟ್ ಜೊತೆಗೆ ಅವರು ಆಗಲೇ ಎದಿದ್ದರು. ನಾನು ಹೇಳಿದ್ದ ಸತ್ತ ಶಿಶುವಿಗೆ ಜೀವ ಬರಬಹುದು ಅದು ಏನು ಬರುವುದು ಬೇಡ. ದೆಹಲಿಯಲ್ಲಿ ಕೆಲಸ ಮಾಡಲಿ ಎಂದು ನಾವು ಕೂರಿಸಿದ್ದು, ಆ ಕಾರಣಕ್ಕಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ತಾವು ಇಲ್ಲಿ ಗಮನಿಸಬೇಕು. ವಿರೋಧ ಪಕ್ಷದ ನಾಯಕರು ರಾಜ್ಯಪಾಲರ ಭಾಷಣದ ಬಗ್ಗೆ ಭಾಷಣ ಮಾಡುವಾಗ, ಅಧಿಕಾರಿಗಳು ಒಬ್ಬರೂ ಇರಲಿಲ್ಲ; ಕೊನೆಯಲ್ಲಿ ತಾವಿಬ್ಬರೂ ಬಂದಿರಿ. ಬಹುತೇಕ ಶಾಸಕರೂ ಸಹಿತ ಇರಲಿಲ್ಲ, ಇವತ್ತೂ ಸಹ ತಾವು ಭಾಷಣ ಮಾಡುವಾಗ ನಿಮ್ಮ ಭಾಷಣವೇ ಒಂದು ದಿಕ್ಕಿಗೆ ಹೋಗುತ್ತಿತ್ತು, ಅವರ ವ್ಯವಹಾರ ಮಾತುಕತೆಗಳು ಒಂದು ದಿಕ್ಕಿಗೆ ಹೋಗುತ್ತಿದ್ದವು. ಮಾನ್ಯ ರಾಜಶೇಖರ ಮೂರ್ತಿಯವರೇ ದಯವಿಟ್ಟು ಇದ್ಯಾಕೆ ಹೀಗೆ ನೀವು ಹೋಗುತ್ತಿದ್ದೀರಿ ನೀವು ಬನ್ನಿ ಸ್ವಲ್ಪ. ನಾವು ನಿಮ್ಮನ್ನು ಇಲ್ಲಿರಿಸಿಕೊಂಡು ನಾಲ್ಕು ಮಾತುಗಳನ್ನಾಡೋಣ ಎಂದರೆ ನೀವು ನಿಮ್ಮ ಸಹವಾಸ ಬೇಡ ಎಂದು ಹೋಗುತ್ತಿದ್ದೀರಲ್ಲ, ಏನಿದು? ಹೀಗಾದರೆ ಸರಿಯಿಲ್ಲ. ನಿಮಗೂ ಕಾಂಗ್ರೆಸ್‌ನವರಿಗೂ ಜಿಜ್ಞಾಸೆ ಇದ್ದರೂ, ನಾವೇನು ಮಾಡಿದ್ದೇವೆ ನಿಮಗೆ, ನಾವೇನೂ ಮಾಡಿಲ್ಲ. ಆದ್ದರಿಂದ ನಿಮಗೆ ಒಳ್ಳೆಯದಾಗಲಿ, ನೀವು ಕೇಂದ್ರಕ್ಕೆ ಹೋಗುವುದರಿಂದ

ನಮ್ಮ ರಾಜ್ಯಕ್ಕೆ ಅನುಕೂಲವಾಗಲಿ, ನಿಮ್ಮೆಲ್ಲರ ಒತ್ತಡ ಮತ್ತು ಹೆಚ್ಚಿನ ಶ್ರಮದಿಂದ ನಮ್ಮ ರಾಜ್ಯಕ್ಕೆ ಶಕ್ತಿ ಬರಲಿ ಎಂದು ನಾವೆಲ್ಲರೂ ಅಭಿನಂದನೆ ಸಲ್ಲಿಸುತ್ತೇವೆ, ನಿಮ್ಮ ಬಗ್ಗೆ ಒಳ್ಳೆಯ ಅಭಿಪ್ರಾಯ ಇಟ್ಟುಕೊಂಡಿದ್ದೇವೆ. ಅದೇ ರೀತಿ ನಿಮಗೆ ರಾಜ್ಯಸಭೆಗೆ ನೀವು ಮತ್ತು ಮುಖ್ಯ ಮಂತ್ರಿಗಳು ಸೇರಿದರೆ ಬರುವ ದೃಶ್ಯ ಇದೆಯಲ್ಲಾ ಅದು ನಿಜವಾಗಿಯೂ ಬಹಳ ಸಂತೋಷದ ದೃಷ್ಯ ಎಂದು ಹೇಳಿ ನಾನು ಅತ್ಯಂತ ಸಂತೋಷವಾಗಿ ಅಭಿನಂದಿಸುತ್ತೇನೆ. ಏಕೆಂದರೆ ಮೊನ್ನೆ ನಮ್ಮ ಅಧ್ಯಕ್ಷರ ಕೊಠಡಿಯಲ್ಲಿ ಇಬ್ಬರೂ ಕುಳಿತಿರುವುದನ್ನು ನೋಡಿ ನನಗೆ ಬಹಳ ಆನಂದವಾಯಿತು. ಆರು ತಿಂಗಳು ನಿಮ್ಮ ಮುಖ ಅವರು ನೋಡುವುದಿಲ್ಲ, ಅವರ ಮುಖ ನೀವು ನೋಡುವುದಿಲ್ಲ ಅನ್ನುವ ಮಟ್ಟದಲ್ಲಿದ್ದರಲ್ಲಾ ಆ ದೈವ ನಿಮ್ಮಿಬ್ಬರನ್ನೂ ತಂದು ಒಂದು ಕಡೆ ಸೇರಿಸಿತಲ್ಲಾ ಅದು ಈ ರಾಜ್ಯದ ಹಿತ ದೃಷ್ಟಿಯಿಂದ ಒಳ್ಳೆಯದಾಗಲಿ, ಕೇಂದ್ರದಲ್ಲಿ ಏನೋ ಮಂತ್ರಿಮಂಡಲ ರಚನೆಯಾಗುತ್ತೆ ಅನ್ನುವ ಸುದ್ದಿ ಇದೆ. ಆ ಸುದ್ದಿಯ ಪ್ರಕಾರ ನಿಮ್ಮ ಹೆಸರು ಮಂತ್ರಿಮಂಡಲದಲ್ಲಿ ಸೇರಿದರೆ, ನಮಗೆಲ್ಲರಿಗೂ ಅನುಕೂಲ ಮತ್ತು ರಾಜ್ಯಕ್ಕೂ ಅನುಕೂಲ ಅಂತ ಹೇಳಿ ಈಗ ಚುನಾಯಿತರಾಗಿರತಕ್ಕಂಥವರ ನಿಮಗೆ ಮತ್ತು ಇನ್ನುಳಿದ ಮೂವರಿಗೆ ನಾಲ್ಕು ಜನರಿಗೂ ಒಳ್ಳೆಯದಾಗಲಿ ಅಂತ ಹೇಳಿ, ಮುಂದಿನ ಆಯವ್ಯಯದಲ್ಲಿ ತಾವು ಆಗಮಿಸಬೇಕೆಂದು ಹೇಳಿ, ಮತ್ತು ನಮ್ಮ ಮುಖ್ಯ ಮಂತ್ರಿಗಳು ಇನ್ನು 9 ತಿಂಗಳು ಇವರು ರಾಜ್ಯಭಾರ ಆಳಬೇಕಾಗಿದೆ ನವೆಂಬರ್‌ವರೆಗೆ 12 ಕಾಲಿನ ಸೂತ್ರವನ್ನು ಕೊಟ್ಟಿದ್ದೀರಿ ಆ ಸೂತ್ರದಲ್ಲಿ ಏನೂ ತೊಂದರೆ ಆಗದ ರೀತಿ ನಾವೆಲ್ಲರೂ ನೋಡಿಕೊಂಡು ಹೋಗಬೇಕೆಂದು ಹೇಳುತ್ತೇವೆ.

ಆ ಸೂತ್ರದಲ್ಲಿ ಅವರಿಗೆ ಏನೂ ತೊಂದರೆ ಆಗದ ರೀತಿಯಲ್ಲಿ ತಾವು ಎಲ್ಲರೂ ನೋಡಿಕೊಂಡು ಹೋಗಬೇಕು ಎಂದು ನಾವು ಹೇಳುತ್ತಿದ್ದೇವೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೇ, ಈ ಸದನದಲ್ಲಿ ನಾನು ಅತ್ಯಂತ ಗೌರವ ಇಟ್ಟುಕೊಂಡಿರತಕ್ಕಂಥವರಲ್ಲಿ ಮಾನ್ಯ ರಾಜಶೇಖರ ಮೂರ್ತಿಯವರು ಮತ್ತು ಮಾನ್ಯ ಕೆ.ಹೆಚ್. ರಂಗನಾಥ್‌ರವರು. ಇವತ್ತು ನಾನು ಯಾವ ಮೇಲೆ ಹೆಚ್ಚಾಗಿ ಅಪಾರವಾದಂತಹ ಗೌರವ ಇಟ್ಟಿದ್ದೆನೋ ಅವರು ದೆಹಲಿಗೆ ಹೋಗುತ್ತಿದ್ದಾರೆ. ಇಲ್ಲಿ ಅನೇಕ ಸಂದರ್ಭದಲ್ಲಿ ಎಷ್ಟು ನಿಷ್ಠೂರವಾಗಿ ರಾಜ್ಯದ ಅಭಿವೃದ್ಧಿ ಬಗ್ಗೆ ತಾವು ಇಲ್ಲಿಯವರೆಗೆ ನಡೆದುಕೊಂಡು ಬಂದಿದ್ದೀರೋ, ಇದ್ದದ್ದನ್ನು ಇದ್ದ ಹಾಗೆ ನೇರವಾಗಿ ನೇರವಾಗಿ ಕೂಡ ತಾವು ಹೇಳಿದ್ದೀರಿ. ಅದೇ ದೃಷ್ಟಿಯಿಂದ ಮುಂದೆ ಕೂಡ ತಾವು ರಾಜ್ಯದ ಹಿತವನ್ನು ಕಾಪಾಡುವುದರಲ್ಲಿ ಇನ್ನು ನಿಷ್ಠುರವಾಗಿ ನಿಮ್ಮಿಂದ ನಮ್ಮ ರಾಜ್ಯಕ್ಕೆ ಯಾರಿಂದಲೂ ಆಗದೇ ಇರುವಂತಹ ಕೆಲಸವಾಗಲಿ ಎನ್ನುವಂತಹ ಸದಾಶಯವನ್ನು ನಾನು ವ್ಯಕ್ತಪಡಿಸಿ ಮತ್ತೊಮ್ಮೆ ತಮಗೆ ಅಭಿನಂದಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಉಪಾಧ್ಯಕ್ಷರೇ, ತಾವು, ಮಾನ್ಯ ವಾಟಾಳ್‌ನಾಗರಾಜ್‌ರವರು, ಮಾನ್ಯ ಬೈರೇಗೌಡರವರು ನಮ್ಮ ಪಕ್ಷದವರ ಬಗ್ಗೆ ವ್ಯಕ್ತಪಡಿಸಿದಂತಹ ಆ ಒಳ್ಳೆಯ ಭಾವನೆಗಳಿಗೆ ನನ್ನ ಧನ್ಯವಾದಗಳು.

ಶ್ರೀ ವಾಟಾಳ್ ನಾಗರಾಜ್ : ಪಕ್ಷದ ಬಗ್ಗೆ ಅಲ್ಲ ಸ್ವಾಮಿ, ನಿಮ್ಮ ಬಗ್ಗೆ ಮತ್ತು ನಿಮ್ಮ ರಾಜಶೇಖರ್ ಮೂರ್ತಿಯವರ ಬಗ್ಗೆ ಕರುಣೆ.

ಶ್ರೀ ಆರ್.ವಿ. ದೇಶಪಾಂಡೆ : ನಿಮ್ಮ 12 ಸೂತ್ರದ ಬಗ್ಗೆ ಅವರು ಹೇಳುತ್ತಿದ್ದಾರೆ, ಸರಿಯಾಗಿ ನಡೆಸಿಕೊಳ್ಳಿರಿ ಎಂದು.

ಶ್ರೀ ವಾಟಾಳ್ ನಾಗರಾಜ್ : ನಾನು ಏನು ಹೇಳಿದೆ ಎಂದರೆ ನಿಮ್ಮ ಸೂತ್ರದಿಂದ ಇವರಿಗೆ ತೊಂದರೆ ಕೊಡಬೇಡಿ ಎಂದು ಹೇಳಿದ್ದೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ವಾಟಾಳ್ ಅವರು ತಮ್ಮ ಬಗ್ಗೆ ಕನಿಕರದ ಮಾತನ್ನು ಹೇಳಿದರು ಅಷ್ಟೇ.

ಶ್ರೀ ಎಂ. ವೀರಪ್ಪ ಮೊಯಿಲಿ : ಏನಾದರೂ ಕಾಂಗ್ರೆಸ್‌ನಲ್ಲಿ ಇರುವಷ್ಟು ಒಗ್ಗಟ್ಟು ಈ ದೇಶದಲ್ಲಿ ಯಾವ ಪಕ್ಷದಲ್ಲೂ ಇಲ್ಲ ಎಂದು ಇವತ್ತು ಸಿದ್ಧಪಡಿಸಿಯಾಗಿದೆ ಅಲ್ಲ.

ಶ್ರೀ ವಾಟಾಳ್ ನಾಗರಾಜ್ : ಅದಕ್ಕೆ ಒಂದು ಗಾದೇನೆ ಇದೆ ಸ್ವಾಮಿ. ಅದನ್ನು ಹೇಳಿದರೆ ಬಹುಶಃ ಸಂಸದೀಯ ಭಾಷೆ ಅಲ್ಲ ಎಂದು ಹೇಳಿ ದೊಡ್ಡ ರಂಪ ಆಗಬಹುದು ಎಂದು ಹೇಳಿ ಇಲ್ಲಿ ಬೇಕಾಗಿಲ್ಲ. ಹಾಗಾದರೆ 6 ತಿಂಗಳಿನಿಂದ ನೀವಿಬ್ಬರೂ ಏನೇನು ಮಾತನಾಡಿದಿರಿ ಅದೆಲ್ಲಾ ಏನು? ಅದು ಏನೂ ಇಲ್ಲವಾ ಹಾಗಾದರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸಂಸಾರ ಎಂದರೆ ಇದೆಲ್ಲಾ ನಡೆಯುತ್ತದೆ. ತಾವು ಏಕೆ ಗಾಬರಿ ಮಾಡಿಕೊಳ್ಳುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಸಂಸಾರ ಸುಖವಾಗಿ ನಡೆಯಲಿ ಎಂದು ಆಶೀರ್ವಾದ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ : ಇದೆಲ್ಲಾ ನಿಮ್ಮ ದೇವರ ದಯೇ ನೋಡಿ.

ಶ್ರೀ ಎಂ.ವೀರಪ್ಪ ಮೊಯಿಲಿ : ಬಾಲಾಜಿ ಪ್ರಸಾದ್ ಅವರು ಒಂದು ಸ್ಟೇಟಸ್ ಪೇಪರ್‌ನ್ನು ಈಗಾಗಲೇ ತಯಾರಿಸಿದ್ದಾರೆ. ಅವರ ಸ್ಟೇಟಸ ಪತ್ರದ ಅಧ್ಯಯನ ನಡೆಸಿ ಒಂದು ಸಂಕ್ಷೀಪ್ತ ವರದಿಯನ್ನು ತರಿಸುವ ಸಲುವಾಗಿ ಪ್ರಧಾನ ಇಂಜಿನಿಯರ್ ಹಾಗೂ ಯೋಜನಾ ಸಮನ್ವಯದ ಅಧಿಕಾರಿ ಕೃಷ್ಣಾ ಜಲಾನಯನ ಯೋಜನೆ ಅಲಮಟ್ಟಿ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಲಾಗಿದೆ. ಆ ಸಮಿತಿ ತಯಾರಿಸುವ ಈ ಸಂಕ್ಷಿಪ್ತ ವರದಿಯನ್ನು ಸದನದ ಮುಂದೆ ಇಡುತ್ತೇವೆ. ಆದುದರಿಂದ ಈ ಬಗ್ಗೆ ನಾವು ನಿಗದಿತವಾದಂತಹ ಸಮಯದಲ್ಲಿ ಕೃಷ್ಣಾ ಜಲಾನಯದ ನಮ್ಮ ಸೀಮಿತವಾದಂತಹ ಹಕ್ಕಿನ ನೀರನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ನಾವು ಪ್ರತಿ ವರ್ಷ ಇಂತಿಷ್ಟು ಹಣ ಖರ್ಚುಮಾಡಬೇಕು ಇಂತಿಷ್ಟು ಭೌತಿಕ ಸಾಧನೆ ಮಾಡಬೇಕು ಎಂದು ಹೇಳಿ ಆ ದಿಸೆಯಲ್ಲಿ ನಾವು ಸಾಧನೆ ಮಾಡಿ ತೋರಿಸಿದ್ದೇವೆ. ಅದರ ವಿವರವನ್ನು ನಾವು ಮುಂದೆ ಬರತಕ್ಕಂತಹ ಬಜೆಟ್ ಅಧಿವೇಶನದಲ್ಲಿ ತೋರಿಸುತ್ತೇವೆ.

ಶ್ರೀ ವೈ.ಕೆ. ರಾಮಯ್ಯ : ಈ ಹಂತದಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ನನಗೆ ಇಷ್ಟ ಇಲ್ಲ. ನಾವು ಮಾತನಾಡುವಾಗ ನೀವು ಇರುವುದಿಲ್ಲ. ನಿಮ್ಮ ಮನಸ್ಸಿಗೆ ಸ್ವಲ್ಪನೂ ಕಳಕಳಿ ಬರಲಿ, ನೋವು, ಕಣ್ಣೀರು ಬರಲಿ ಎಂದು ಒಂದು ಮಾತು ಹೇಳುತ್ತೇನೆ. ಒಂದು ದಶಕದಲ್ಲಿ ಈ ರಾಜ್ಯದಲ್ಲಿ ಎಲ್ಲಾ ಸರ್ಕಾರಗಳು ಆಡಳಿತ ಮಾಡಿ ನೀರಾವರಿಯಲ್ಲಿ ಹೆಚ್ಚಳ ಮಾಡಿರುವುದು ಕೇವಲ ಶೇಕಡ ಒಂದೇ ಒಂದು ಭಾಗ. ಮುಖ್ಯಮಂತ್ರಿಗಳಿಗೆ ನಾವು ಪ್ರಶ್ನೆ ಕೇಳುತ್ತಿರುತ್ತೇವೆ ನೀವು ಅದನ್ನೇ ಉತ್ತರ ಸೈಕ್ಲೋಸ್ಟೈಲ್ ಮಾಡಿಕೊಂಡು ಪ್ರತಿಸಾರಿ ಓದುತ್ತಿರುತ್ತೀರಿ. ಅಂತಹ ಉತ್ತರಗಳು ನಮಗೆ ಪ್ರಯೋಜನ ಇಲ್ಲ. ಪ್ರಾಮಾಣಿಕವಾದಂತಹ, ಯಾವುದಾದರೂ ವಿಶೇಷವಾದಂತಹ ಪರಿಸ್ಥಿತಿ ಮಾಡಿ, ರಾಜ್ಯದ ಜನರಿಗೆ ನೀರು ಕೊಡುವಂತಹ ಪರಿಸ್ಥಿತಿ ಇದ್ದರೆ ಓದಿ. ಇಷ್ಟೆಲ್ಲಾ ನೀವು ಹೇಳುತ್ತಿದ್ದೀರಲ್ಲ, ನಾವು ಪ್ರತಿ ವರ್ಷ ಮಾಡಿದ್ದೇವೆ, ಮಾಡಿದ್ದೇವೆ ಎಂದು. ನಮ್ಮ ಸರ್ಕಾರನೂ ಸೇರಿಸಿಕೊಂಡು ನಿಮ್ಮ ಸರ್ಕಾರನೂ ಸೇರಿಸಿಕೊಂಡು ಈ ದಶಕದಲ್ಲಿ ನಾವು ಮಾಡಿರುವಂತಹ ಸಾಧನೆ ಒಂದೇ ಒಂದು ಪರ್ಸೆಂಟ್. ಆದುದರಿಂದ ಇದನ್ನು 68 ರ ಕೆಳಗಡೆ ಕೂಡಾ ನಾನು ತಂದಿದ್ದೇನೆ. ನೀವು ಒಂದು ಉತ್ತರ ಓದಿಕೊಂಡು ಹೋಗುತ್ತಿದ್ದೀರಿ. ಇದರಿಂದ ಈ ರಾಜ್ಯದ ಜನರ ನೀರಿನ ಭವಣೆಯನ್ನು ತೀರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ನಿಮ್ಮ ಕಾಲದಲ್ಲಿ ಏನಾದರೂ ನೀವು ಅದಕ್ಕೆ ವಿಶೇಷ ಕಾರ್ಯಕ್ರಮವನ್ನು ಹಾಕಿಕೊಂಡಿದ್ದರೆ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ಬಗ್ಗೆ ನಾವು ಈ ಸಂದರ್ಭದಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ಅದನ್ನು ವಿವರವಾಗಿ ಬಜೆಟ್ ಭಾಷಣದಲ್ಲಿ ನಾವು ತಿಳಿಸುತ್ತೇವೆ. ನಾವು ಎಷ್ಟು ಎಕರೆ ಮಾಡಿದ್ದೇವೆ, ಎಷ್ಟು ಸಾಧನೆ ಮಾಡಿದ್ದೇವೆ. ಕಳೆದ ನಾಲ್ಕು ವರ್ಷಗಳಲ್ಲಿ ಸರಾಸರಿ ಕೃಷ್ಣಾ ಜಲಾನಯನ ಯೋಜನೆಗೆ 80 ಕೋಟಿ ರೂಪಾಯಿ ಒದಗಿಸಿದ್ದಿದ್ದರೆ, ಈ ಒಂದೇ ವರ್ಷದಲ್ಲಿ ನಾವು ಸುಮಾರು 4 ನೂರು ಕೋಟಿ ರೂಪಾಯಿಯವರೆಗೆ ಕೂಡ ಖರ್ಚು ಮಾಡತಕ್ಕಂತಹ ಒಂದು ವಿವರ. ಅದನ್ನು ನಾನು ಕೊಡುತ್ತೇನೆ. ಈಗ ಒಟ್ಟು ಅನುದಾನ ಇರತಕ್ಕಂಥಾದ್ದು 979 ಕೋಟಿ ರೂಪಾಯಿ. ಇದರ ಬಗ್ಗೆ ತಾವು ಆಲೋಚನೆ ಮಾಡಿ. ಅಷ್ಟು ಅನುದಾನ ಇದ್ದರೆ 516 ಕೋಟಿ ರೂಪಾಯಿ ಜನವರಿಯಿಂದ ಖರ್ಚು ಮಾಡಿದ್ದೇವೆ.

Rs.568 crores we have already spent upto January, 1994. ಇನ್ನು ಆಶ್ರಯ ಮನೆಗಳ ಬಗ್ಗೆ ಕೆಲವು ವಿವರಗಳನ್ನು ನಾನು ಈಗಾಗಲೇ ಕೊಟ್ಟಿದ್ದೇನೆ. ಆಶ್ರಯ ಹೌಸಿಂಗ್ ಸ್ಕೀಂನಲ್ಲಿ ಬೇರೆ ಬೇರೆ ರೀತಿಯಲ್ಲಿ ನಾವು ಈಗಾಗಲೇ ಹಣವನ್ನು ಬಿಡುಗಡೆ ಮಾಡಿದ ವಿಚಾರವನ್ನು ತಿಳಿಸಿದ್ದೇನೆ. ನಾನು ನವೆಂಬರ್ 92ರಲ್ಲಿ ಅಧಿಕಾರಕ್ಕೆ ಬಂದಾಗ ನನಗೆ ಅದು ಒಂದು ಹೊಸ ಪ್ರಯೋಗವಾಗಿತ್ತು. ನಾನೂ ಕೂಡ ಹಿಂದೆ ಸರ್ಕಾರದಲ್ಲಿ ಸಚಿವ ಆಗಿದ್ದುದರಿಂದ ನಾನು ಕೂಡ ಅದರಲ್ಲಿ ಭಾಗಿ. ಆದರೆ ಆ ಪ್ರಯೋಗ ನಡೆಯಲಿಲ್ಲ. ಕಾಂಟ್ರ್ಯಾಕ್ಟರ್‌ಗೆ ಕೊಡುವುದರಲ್ಲಿ ಫೇಲ್ ಆಯಿತು. ಒಬ್ಬ ಕಂಟ್ರ್ಯಾಕ್ಟರ್ ಇನ್ನೊಬ್ಬನಿಗೆ ಸಬ್ ಕಂಟ್ರ್ಯಾಕ್ಟ ಕೊಟ್ಟ, ಅವನು ಇನ್ನೊಬ್ಬನಿಗೆ ಕೊಟ್ಟ, ಆಮೇಲೆ ಆ ಕಂಟ್ರ್ಯಾಕ್ಟರ್‌ನೂ ಇಲ್ಲ, ಮನೆಯೂ ಇಲ್ಲ, ಕೊನೆಗೆ ಹಣವೂ ಕೂಡ ಇಲ್ಲ. ಆಗ ಈ ಪರಿಸ್ಥಿತಿ ನಮಗೆ ಬಂತು. ಹಿಂದಿನ ಆ ವ್ಯವಸ್ಥೆಯನ್ನು ಬಿಟ್ಟು ಈಗ ಜಿಲ್ಲಾಧಿಕಾರಿಯವರ ಮುಖಾಂತರ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಮಾಡಿ, ಈಗಾಗಲೇ ನಮ್ಮ ಫೈನಾನ್ಷಿಯಲ್ ಟಾರ್ಗೆಟ್‌ನ್ನು ಎಷ್ಟು ಸಾಧನೆ ಮಾಡಿದ್ದೇವೆಂಬುದನ್ನು ನಾನು ಹೇಳಿದ್ದೇನೆ. ಮಾರ್ಚಿ 94ರೊಳಗೆ ಸುಮಾರು 80ಸಾವಿರ ಮನೆಗಳನ್ನು ಕಟ್ಟಿಸಿಕೊಡುವ ವ್ಯವಸ್ಥೆಯನ್ನು ಎಲ್ಲ ರೀತಿಯಿಂದಲೂ ಕೈಗೊಂಡಿದ್ದೇವೆ. ಆ ಸಾಧ್ಯತೆ ನಮಗೆ ಕಾಣಿಸುತ್ತಿದೆ. ಆಗಾಗ್ಗೆ ಈ ವಿಚಾರ ನಮ್ಮ ಈ ಸದನದಲ್ಲಿ ಚರ್ಚೆಗೆ ಬಂದಿದೆ. ಭರವಸೆ ಮತ್ತು ಸಾಧನೆಯ ಬಗ್ಗೆ ಹೇಳುವುದಾದರೆ, ಇವತ್ತು ಅಂಬೇಡ್ಕರ್ ಮನೆಗಳಿಗೋಸ್ಕರ ಸುಮಾರು 48 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆ. ಆ ಹಣ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಹತ್ತಿರ ಇದೆ. ಅವರು ಸೈಟುಗಳನ್ನು ಗುರ್ತಿಸಿ ಕೆಲವು ಕಡೆ ಮನೆಗಳನ್ನೂ ಕೂಡ ಕಟ್ಟಿಸಿದ್ದಾರೆ. ಡಾ: ಅಂಬೇಡ್ಕರ್ ಮನೆಗಳನ್ನು ಎಸ್.ಸಿ.ಪಿ. ಹಣದಿಂದ ಕಟ್ಟಿಸಿಕೊಡುತ್ತೇವೆಂದು ಕಳೆದ 3-4 ವರ್ಷಗಳಿಂದ ಇಲ್ಲಿ ಭಾಷಣ ಮಾಡುತ್ತಲೇ ಇದ್ದೇವೆ. ಅಂಬೇಡ್ಕರ್ ಭವನಗಳನ್ನು ಕಟ್ಟಿಸುತ್ತೇವೆಂದು ಹೇಳುತ್ತಿದ್ದೇವೆ. ಅಂಬೇಡ್ಕರ್ ಭವನಕ್ಕೆ ಈಗಾಗಲೇ ಸುಮಾರು 58 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದೇವೆ. ಬೆಂಗಳೂರಿನಲ್ಲಿ ಈಗಾಗಲೇ ಈ ಭವನದ ಕೆಲಸ ಪ್ರಗತಿಯಲ್ಲಿದೆ. ಇದಕ್ಕಾಗಿ ಬರುವ ಮಾರ್ಚಿಯೊಳಗೆ 1.25 ಕೋಟಿ ರೂ.ಗಳನ್ನು ಖರ್ಚುಮಾಡುವ ಗುರಿ ಇಟ್ಟುಕೊಂಡಿದ್ದೇವೆ. ಸಾಮಾನ್ಯವಾಗಿ ಮೊದಲೇ ಫೌಂಡೇಷನ್ ಸ್ಟೋನ್‌ಗಳನ್ನು ಹಾಕಿಬಿಡುತ್ತೇವೆ. ಯಾವುದೇ ಕೆಲಸಕ್ಕಾಗಲಿ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಇಲ್ಲದೆ, ಸಾಕಷ್ಟು ಹಣ ಇಲ್ಲದಿದ್ದರೆ ಯಾವುದೇ ಫೌಂಡೇಷನ್ ಸ್ಟೋನನ್ನೂ ಹಾಕಬಾರದೆಂದು ಈಗಾಗಲೇ ನಾವು ಎಲ್ಲರಿಗೂ ತಿಳಿಸಿದ್ದೇವೆ. ಕಾವೇರಿ ಜಲಾನಯನದ ಬಗ್ಗೆ ಪ್ರತ್ಯೇಕವಾಗಿ ನಾನು ಮಾನ್ಯ ರಾಮಯ್ಯನವರನ್ನು ಕರೆದು ಹೇಳಬಹುದು. ಆದರೆ ನಿಜವಾಗಿ ಹೇಳುವುದಾದರೆ ಕಳೆದ 10 ತಿಂಗಳಲ್ಲಿ ಏನೇನು ಅಭಿವೃದ್ಧಿ ಕೆಲಸವಾಗಿದೆ ಅದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಪುನಃ ಅದನ್ನು ಇಲ್ಲಿ ಹೇಳುವುದು ಸರಿಯಲ್ಲ. ಈಗ ನಾನು ಅದನ್ನು ಮತ್ತೆ ಹೇಳಿದರೆ ಅದು ಟ್ರಿಬ್ಯುನಲ್‌ನಲ್ಲಿ ಬಂದುಬಿಡುತ್ತದೆ. ಆದ್ದರಿಂದ ಹೇಳುವುದಕ್ಕೆ ಹೋಗುವುದಿಲ್ಲ. ಪತ್ರಿಕೆಯವರು ಅದನ್ನು ಬರೆಯಬಾರದೆಂದು ನಾನು ಹೇಳಿದ್ದೇನೆ. ಈಗಾಗಲೇ ಸಾಕಷ್ಟು ಪ್ರಗತಿಯಾಗಿದೆ.

ನಾವಿಬ್ಬರೂ ಹೋಗಿ ನೋಡಿದ್ದೇವೆ. ಕೆಲವು ಕಡೆ ಕೆಲವು ಕೋಟಿ ರೂ.ಗಳನ್ನು ಖರ್ಚು ಮಾಡಿದರೆ ಲಕ್ಷಾಂತರ ಎಕರೆ ಜಮೀನು ನೀರಾವರಿಗೆ ಒಳಪಡುವಂಥ ಅನುಕೂಲತೆ ಇದ್ದರೂ ಕೂಡ ನಮ್ಮ ಕೆಲವು ಅಧ್ಯಕ್ಷತೆಯಿಂದ, ನಿರ್ಣಯಗಳನ್ನು ತೆಗೆದುಕೊಳ್ಳದೇ ಇದ್ದುದರಿಂದ, ಎಲ್ಲಿಗೆ ಎಷ್ಟು ಹಣವನ್ನು ಕೊಡಬೇಕೋ ಅಷ್ಟು ಹಣವನ್ನು ಕೊಡದೇ ಇದ್ದುದರಿಂದ ನಮ್ಮ ಅನೇಕ ಕಾರ್ಯಕ್ರಮಗಳು ಸ್ಥಗಿತವಾಗಿವೆ. ಇಂಥ ಗುಣದೋಷಗಳನ್ನು ನಾವು ಗುರ್ತಿಸಿ ಕೆಲಸಮಾಡುತ್ತಿದ್ದೇವೆ. ಇದರಿಂದಾಗಿ ಇವತ್ತು ನಾವು ಕೆಲವು ರಿಸಲಟ್ಸ್‌ನ್ನು ಕಾಣುತ್ತಿದ್ದೇವೆ. ಇಲ್ಲದಿದ್ದರೆ ರಿಸಲ್ಟ್ ಕಾಣುವುದಕ್ಕಾಗುತ್ತಿರಲಿಲ್ಲ.

ಶ್ರೀ ವೈ.ಕೆ. ರಾಮಯ್ಯ : ತಾವು ಅಷ್ಟನ್ನು ಮಾಡಿದರೆ ಸುಮಾರು 12 ದಶಲಕ್ಷ ಎಕರೆ ಜಮೀನಿಗೆ ತಕ್ಷಣ ನೀರನ್ನು ಕೊಡಬಹುದು.

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ಅದಕ್ಕೇ ಹೇಳುತ್ತಿದ್ದೇನೆ. ನಾವು ಇನ್ನು 10 ತಿಂಗಳೊಳಗೆ ಇಡೀ ಕರ್ನಾಟಕ ರಾಜ್ಯದಲ್ಲಿ ಒಂದು ದೊಡ್ಡ ಕ್ರಾಂತಿಯೇ ಆಗುತ್ತದೆಂಬುದರಲ್ಲಿ ಯಾವುದೇ ಅನುಮಾನವೂ ಇಲ್ಲ. ನಾನು ಇವತ್ತು ಇದರ ಬಗ್ಗೆ ವಿವರವನ್ನು ಕೊಡುವುದಕ್ಕೆ ಹೋಗುವುದಿಲ್ಲ. ಬಜೆಟ್ ಬಂದಾಗ ಕೃಷ್ಣಾ ಜಲಾನಯನದ ವಿಚಾರದಲ್ಲಿ ಹೆಚ್ಚಿನ ವಿವರವನ್ನು ಕೊಡುತ್ತೇನೆ. ಕೃಷ್ಣಾ ಜಲಾನಯನದ ಬಗ್ಗೆ ಒಳಗಡೆ ಚರ್ಚೆ ಮಾಡೋಣ, ಆಗ ತಮಗೆ ವಿವರಣೆ ಕೊಡುತ್ತೇನೆ. ನಾವು ಹೇಗೆ ಇದನ್ನು ಸಾಧನೆ ಮಾಡುತ್ತೇವೆ, ಹೆಜ್ಜೆ ಹೆಜ್ಜೆಗೆ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ ಎಂದು. ಇವತ್ತು ಹೌಸಿಂಗ್ ಯೋಜನೆಯ ಬಗ್ಗೆ ಕೂಡ ನಾವು ಪ್ರಗತಿ ಪಥದಲ್ಲಿದ್ದೇವೆ. ಆಶ್ರಯ ಯೋಜನೆಯಲ್ಲಿ 90 ಸಾವಿರ ಮನೆಗಳನ್ನು ಮಾಡಿಕೊಟ್ಟಿದ್ದೇವೆ. ಅಂಬೇಡ್ಕರ್ ಮನೆಗಳನ್ನು ಈಗ ಮಾಡಿಕೊಡುತ್ತಿದ್ದೇವೆ. ಇಡೀ ಕರ್ನಾಟಕದ ಇತಿಹಾಸದಲ್ಲೇ ಪರಿಶಿಷ್ಟ ವರ್ಗದ ಮನೆಗಳ ಕಾರ್ಯಕ್ರಮ, ಆಶ್ರಯ ಯೋಜನೆ ಇರಬಹುದು, ಜನತಾ ಮನೆಗಳ ಯೋಜನೆ ಇರಬಹುದು, ಯಾವುದೇ ಇದ್ದರೂ ಕೂಡ ಇದುವರೆಗೂ ಇಷ್ಟು ದೊಡ್ಡ ಗಾತ್ರದ ಮನೆಯನ್ನು ಕಟ್ಟಿಸುವ ಯೋಜನೆಯನ್ನು ತೆಗೆದುಕೊಂಡಿದ್ದೇ ಇಲ್ಲವೆಂದರೆ ಅದು ಅತಿಶಯೋಕ್ತಿ ಆಗಲಾರದು. ಇದಕ್ಕೆ ಬಹಳ ದೊಡ್ಡ ಪ್ರಾಮುಖ್ಯತೆಯನ್ನು ಕೊಟ್ಟು ಮುಂದಕ್ಕೆ ಕೊಂಡೊಯ್ಯುತ್ತಿದ್ದೇವೆ. ಇದೇ ರೀತಿ ಮಾರ್ಚಿ 94ರೊಳಗೆ 2 ಲಕ್ಷ ಸೈಟುಗಳನ್ನು ಕೊಡುತ್ತೇವೆಂದು ಹೇಳಿದ್ದೇವೆ. ತಮಗೇ ಗೊತ್ತಿದೆ, ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಇದುವರೆಗೆ ಒಂದು ರೀತಿಯ ಚಿಂತಾಜನಕಪರಿಸ್ಥಿತಿಯಲ್ಲಿ ಇತ್ತು. ಅದರ ಆರ್ಥಿಕ ಸ್ಥಿತಿ, ಅಲ್ಲಿದ್ದ ಅವ್ಯವಸ್ಥೆ ಇದನ್ನಾಲ್ಲಾ ಸರಿಪಡಿಸಿ ಸೈಟುಗಳನ್ನು ಹಂಚತಕ್ಕ ಶಕ್ತಿಯನ್ನು ಇದಕ್ಕೆ ತಂದುಕೊಟ್ಟಿದ್ದೇವೆ. 1978ನೇ ಇಸವಿಯಲ್ಲಿ ಬೇರೆ ಬೇರೆ ಹಂತದಲ್ಲಿದ್ದಂಥ ನೋಟೀಫಿಕೇಷನ್, ಫೈನಲ್ ನೋಟಿಫಿಕೇಷನ್‌ಗಳನ್ನೆಲ್ಲಾ ಒಂದು ಅಂತಿಮ ರೂಪಕ್ಕೆ ತಂದಿದ್ದೇವೆ. ಜಯಪ್ರಕಾಶ್ ನಾರಾಯಣ್ ನಗರದಲ್ಲಿ ಸುಮಾರು 899.36 ಎಕರೆಗಳು, ಜೆ.ಪಿ. ನಗರದ 8ನೇ ಸ್ಟೇಜ್‌ನಲ್ಲಿ 1999.36 ಎಕರೆ, ಬನಶಂಕರಿ 5ನೇ ಸ್ಟೇಜ್‌ನಲ್ಲಿ 1850.36 ಎಕರೆ, ಇಷ್ಟನ್ನೆಲ್ಲಾ ಫೈನಲೈಸ್ ಮಾಡಿಕೊಂಡು ಬಿ.ಡಿ.ಎ. ಅನ್ನು ಒಂದು ವ್ಯವಸ್ಥಿತವಾದ ರೀತಿಯಲ್ಲಿ ನಿಲ್ಲಿಸಲು ಲ್ಯಾಂಡ್ ಸ್ಕ್ಯಾಂ ನಮ್ಮ ಸರ್ಕಾರದ ಬಂಡವಾಳವಾಗಿತ್ತು. ಆದರೆ ಇವತ್ತು ಆ ಲ್ಯಾಂಡ್ ಸ್ಕ್ಯಾಂನ ಸುಳಿವೇ ಇಲ್ಲದಂತೆ, ಕನ್‌ಸಾಲಿಡೇಟ್ ಮಾಡಿಕೊಂಡು ಕೆಲಸ ಮಾಡುತ್ತಿದ್ದೇವೆ. ಇವತ್ತು ಲಾಭಕೋರರು ಬೆಂಗಳೂರು ಮತ್ತು ಸುತ್ತಮುತ್ತಲಿನ ಭೂಮಿಯನ್ನು ಕಬಳಿಸದ ರೀತಿಯಲ್ಲಿ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಲ್ಯಾಂಡ್ ಸ್ಕ್ಯಾಂ ಆದರೆ ಅದು ಒಂದು ಸುದ್ದಿಯಾಗುತ್ತದೆ. ಈ ಲ್ಯಾಂಡ್ ಸ್ಕ್ಯಾಂನ್ನು ನಿಲ್ಲಿಸಿದರೆ ಅದು ಸುದ್ದಿಯಾಗುವುದಿಲ್ಲ ಅಷ್ಟೆ. ನಾವು ಸುದ್ದಿಯನ್ನು ಮಾಡುತ್ತಿಲ್ಲ. ಆದರೆ ಜನಸಾಮಾನ್ಯರಿಗೆ ವ್ಯವಸ್ಥಿತವಾದ ಆಡಳಿತವನ್ನು ಕೊಡಬೇಕೆಂದಿದ್ದೇವೆ. ರೈಲ್ವೆಗೆ ಸಂಬಂಧಪಟ್ಟಂತೆ ಮಾಸ್ ರಾಪಿಡ್ ಟ್ರಾನ್ಸ್‌ಪೋರ್ಟ್ ಸಿಸ್ಟಂ ಮಂಜೂರಾಗಿದು

ಅದನ್ನು ಅನುಷ್ಠಾನ ಮಾಡತಕ್ಕ ಹೆಜ್ಜೆ ಇಟ್ಟಿದ್ದೇವೆ. ಇನ್ನೊಂದು ವಿಚಾರ ಎಂದರೆ, ನಮ್ಮ ಬೆಂಗಳೂರನ್ನು ಮೆಗಾಸಿಟಿ ಎಂದು ಮಾಡುತ್ತಿದ್ದೇವೆ. ಇದು ಮೆಗಾಸಿಟಿ ಆದರೆ ಮೆಟ್ರೋ 2ನೇ ಚಾನಲ್ ಕೂಡ ನಮಗೆ ಬರುತ್ತದೆ. ಎಲ್ಲಿಯವರೆಗೆ ಮೆಗಾಸಿಟಿ ಆಗುವುದಿಲ್ಲ ಅದುವರೆಗೂ ನಮಗೆ ಮೆಟ್ರೋಚಾನಲ್ ಬರುವುದಿಲ್ಲ. ಇತ್ತೀಚೆಗೆ ಕಾರವಾರದಲ್ಲಿ ಒಂದು ಸಮಾರಂಭದಲ್ಲಿ ಮಾನ್ಯ ಸಿಂಗ್‌ರವರು ಮಾತನಾಡುತ್ತಾ ನಾವು ಮೆಟ್ರೋ ಚಾನಲ್‌ನ್ನು ನಾವು ಕೊಡುತ್ತೇವೆ. ಕಾರಣ ಈ ಬೆಂಗಳೂರು ಮೆಗಾಸಿಟಿ ಅಂತ ಆಗುತ್ತಿರುವುದರಿಂದ ಎಂದು ಹೇಳಿದ್ದಾರೆ. ಹೈದರಾಬಾದ್‌ನ ಸ್ಥಾನದಲ್ಲಿ ಇವತ್ತು ನಮ್ಮ ಬೆಂಗಳೂರು ಬೆಳೆದು ನಿಂತಿದೆ ಎಂದರೆ ನಮ್ಮ ಸರ್ಕಾರದ ಒಂದು ದೊಡ್ಡ ಸಾಧನೆ ಎಂಬುದನ್ನು ತಾವು ಒಪ್ಪುತ್ತೀರೆಂದು ನಾನು ಅಂದುಕೊಂಡಿದ್ದೇನೆ. ನಮ್ಮ ಕರ್ನಾಟಕಕ್ಕೆ ಅರಿವೇ ಇಲ್ಲದಂತೆ ಮೆಗಾಸಿಟಿಯಾಗಿ, ಮೆಟ್ರೋಚಾನಲ್ ಬರುತ್ತಿದೆ. ಇವತ್ತು ನಮ್ಮಲ್ಲಿ ಬಹಳ ಬದಲಾವಣೆಗಳನ್ನು ನಾವು ಕಾಣುವುದಕ್ಕೆ ಸಾಧ್ಯವಾಗಿದೆ.

ಇನ್ನು ವಿದ್ಯುತ್ ಪೂರೈಕೆ ಬಗ್ಗೆ ಹೇಳುವುದಾದರೆ, ಇವತ್ತು ಅನೇಕ ಮಾನ್ಯ ಸದಸ್ಯರು ಅದರಲ್ಲೂ ಮಾನ್ಯ ಎಂ.ಎಸ್ ಪಾಟೀಲ್‌ರವರು, ಯಡಿಯೂರಪ್ಪನವರು, ದೇಶಪಾಂಡೆಯವರು, ಮೋಟಮ್ಮನವರೂ ವಿದ್ಯುತ್ ಸರಬರಾಜಿನ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಇದರ ಬಗ್ಗೆ ನಾವು ಈಗಾಗಲೇ ವಿವರಣೆಯನ್ನು ಕೊಟ್ಟಿದ್ದೇವೆ. ಅನೇಕ ಪ್ರೈವೇಟ್ ಸೆಕ್ಟಾರ್‌ನವರು ವಿದ್ಯುತ್‌ನ್ನು ಉತ್ಪಾದನೆ ಮಾಡುವುದಕ್ಕೆ ಮುಂದೆ ಬಂದಿದ್ದಾರೆ. ಇದು ಬೇರೆ ಬೇರೆ ಹಂತದಲ್ಲಿ ಟೈ ಅಪ್ ಆಗಿದೆ. ಮಂಗಳೂರಿನಲ್ಲಿ 1ಸಾವಿರ ಮೆಗಾವ್ಯಾಟ್ಸ್, ಅಲ್ಲಿ ಮೆ: ಜಯಪ್ರಕಾಶ್ 360ಮೆಗಾವ್ಯಾಟ್ಸ್, ಹೊಸಪೇಟೆಯಲ್ಲಿ ಹೆಚ್.ಒ.ಕೆ. ಇಂಟರ್‌ನ್ಯಾಷನಲ್ 500ಮೆಗಾವ್ಯಾಟ್ಸ್, ಹೊಸಪೇಟೆಯಲ್ಲಿ ಮೆ: ಜಿಂದಾಲ್ ಫ್ಯಾಕ್ಟಬರ್ 300ಮೆಗಾವ್ಯಾಟ್ಸ್, ಅಪ್ಪರ್ ಕೃಷ್ಣಾ ಹೈಡಲ್ ಪ್ರಾಜೆಕ್ಟ್, ಕ್ಯಾಪ್ಕೋ 600 ಮೆಗಾವ್ಯಾಟ್ಸ್, ರಾಯಚೂರು ಪಬ್ಲಿಕ್ ಪವರ್, ಎಂ.ಒ.ಯು ಅಂದರೆ ಕನ್ಸಿಡರೇಷನ್ 500 ಮೆಗಾವ್ಯಾಟ್ಸ್, ಮಿನಿ ಹೈಡಲ್‌ಗೆ ಸಂಬಂಧಪಟ್ಟಂತೆ 15 ಫರ್ಮ್‌ಗಳು 31 ಸ್ಕೀಂಗಳದ್ದು, ಅದು 151 ಮೆಗಾವ್ಯಾಟ್ಸ್, ಪೀಣ್ಯಾದಲ್ಲಿ 4 ಫರ್ಮ್‌ಗಳು 6 ಸ್ಕೀಂಗಳು 24 ಮೆಗಾವ್ಯಾಟ್ಸ್, ಹೀಗೆ ಒಟ್ಟು 3455 ಮೆಗಾವ್ಯಾಟ್ಸ್‌ನ್ನು ಉತ್ಪಾದನೆ ಮಾಡತಕ್ಕ ರೀತಿಯಲ್ಲಿ ಬೇರೆ ಬೇರೆ ಪ್ರೈವೇಟ್ ಸೆಕ್ಟಾರ್‌ಗಳು ಮುಂದೆ ಬಂದಿದೆ. ಇದರ ಟೋಟಲ್ ಇನ್ವೆಸ್ಟ್‌ಮೆಂಟ್ ಇನ್ ಪವರ್ ಇವತ್ತು ನಮ್ಮ ಮುಂದೆ ಬಂದಿರತಕ್ಕಂಥ 12548 ಕೋಟಿ ರೂ.ನದು. ವಿದ್ಯುತ್ ಕ್ಷೇತ್ರದಲ್ಲಿ ಇಷ್ಟು ಬರುತ್ತಿದೆ. ಇದರಲ್ಲಿ ಥರ್ಮಲ್ ಪ್ರಾಜೆಕ್ಟನಲ್ಲಿ 2660 ಮೆಗವ್ಯಾಟ್ಸ್, 10,640 ಕೋಟಿ ರೂ.ನದು.

ಥರ್ಮಲ್ ಪ್ರಾಜೆಕ್ಟ್‌ನಲ್ಲಿ 2660 ಮೆಗಾವ್ಯಾಟ್, ಅದಕ್ಕೆ 10640 ಕೋಟಿ, ಹೈಡಲ್ ಪ್ರಾಜೆಕ್ಟ್‌ನಲ್ಲಿ 600 ಮೆಗಾವ್ಯಾಟ್, ಅದಕ್ಕೆ 1500 ಕೋಟಿ, ಮಿನಿಹೈಡಲ್ ಸ್ಕೀಂನಲ್ಲಿ 150 ಮೆಗಾವ್ಯಾಟ್, ಅದಕ್ಕೆ 302 ಕೋಟಿ, ವಿಂಡ್ ಎನರ್ಜಿ ಸ್ಕೀಂನಲ್ಲಿ 24 ಮೆಗಾವ್ಯಾಟ್, ಅದಕ್ಕೆ 96 ಕೋಟಿ ರೂಪಾಯಿಗಳು. ಈ ರೀತಿಯಲ್ಲಿ ವಿಶೇಷವಾಗಿ ಕರ್ನಾಟಕ ಇವತ್ತು ಹೆಚ್ಚಿನ ಮಹತ್ವ ಪಡೆದಿದೆ. ಅದು ದೇಶದಲ್ಲಿರತಕ್ಕ ಬಂಡವಾಳಗಾರರು ಇರಬಹುದು, ದೇಶದ ಹೊರಗಿನ ಬಂಡವಾಳ ಅಥವಾ ಕರ್ನಾಟಕ ರಾಜ್ಯದ ಬಂಡವಾಳ; ಎಲ್ಲರೂ ವಿಶೇಷವಾಗಿ ಆಸಕ್ತಿ ತೆಗೆದುಕೊಂಡು ಕರ್ನಾಟಕವನ್ನೇ ತಮ್ಮ ಪ್ರಯೋಗಶಾಲೆಯಾಗಿ ಉಪಯೋಗ ಮಾಡಲಿಕ್ಕೆ ಎಲ್ಲ ರೀತಿಯ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಪವರ್ ಸೆಕ್ಟಾರ್‌ನಲ್ಲಿ ಕೂಡ ವಿಶೇಷವಾಗಿ ಹಣ ಕೊಟ್ಟಿದ್ದೇವೆ. ಒಂದು ಸಂತೋಷದ ವಿಚಾರವನ್ನು ಮರೆಯುವ ಮೊದಲು ಹೇಳಬೇಕು; ನಮ್ಮ ಎಲ್ಲ ರೀತಿಯ ಪ್ರಯತ್ನದಿಂದ ಏನು ವಿಶ್ವಬ್ಯಾಂಕ್ ಹಿಂದೆ ಕೆನಾಲ್ ಮತ್ತು ಡ್ಯಾಂ ಪೋರ್ಷನ್ನಿಗೆ ಏನು ಲೋನ್ ಸಸ್ಪೆಂಡ್ ಮಾಡಿತ್ತು; ಕೆನಾಲ್ ಪೋರ್ಷನ್‌ಗೆ ಜನವರಿ 1993 ರಲ್ಲಿ ಸಸ್ಪೆನ್‌ಷನ್ ಆರ್ಡರ್ ಅನ್ನು ವೆಕೇಟ್ ಮಾಡಿದರು. ನಿನ್ನೆ ತಾನೇ

ವರ್ತಮಾನ ಬಂದಿದೆ; ಕೃಷ್ಣಾ ಡ್ಯಾಂ ಪೋರ್ಷನ್ನಿಗೆ ಇದ್ದಂತ ಸಸ್ಪೆನ್‌ಷನ್ ಆರ್ಡರನ್ನು ಲಿಫ್ಟ್ ಮಾಡಿದ್ದಾರೆ. ನಮಗೆ ವಿಶ್ವಬ್ಯಾಂಕಿನಿಂದ ಲೋನ್ ಬರುವುದರಿಂದ ನಮ್ಮ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಮುಂದುವರಿಸಿಕೊಂಡು ಹೋಗುತ್ತೇವೆ. ಈ ವಿಷಯವನ್ನು ಸಂತೋಷದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಪವರ್ ಜನರೇಷನ್‌ನಲ್ಲಿ ಕೂಡ ತಾವು ಎಲ್ಲ ಈ ಒಂದು ವಿವರಗಳನ್ನು ನೋಡುವುದು ಇದ್ದರೆ ಟ್ರಾನ್ಸ್‌ಮಿಷನ್ ಮತ್ತು ಡಿಸ್ಟ್ರಿಬ್ಯೂಷನ್‌ನಲ್ಲಿ ಪವರ್‌ಜನರೇಷನ್‌ನಲ್ಲಿ 92-93ರಲ್ಲಿ ಅಲೋಕೇಷನ್ 484.77 ಕೋಟಿ ಇದ್ದರೆ, 93-94ರಲ್ಲಿ 672.82 ಕೋಟಿ ರೂಪಾಯಿಗಳನ್ನು ನಾವು ಒದಗಿಸಿದ್ದೇವೆ. ಕೆಇಬಿಯವರು ಪ್ರಮುಖವಾಗಿ ಸಿಸ್ಟಂ ಇಂಪ್ರೂವ್‌ಮೆಂಟ್‌ಗೆ ಗಮನ ಕೊಟ್ಟಿದ್ದಾರೆ. ಏಕೆಂದರೆ ಪವರ್ ಜನರೇಷನ್‌ಗೆ ನಾವು ವಿಶೇಷ ಮಹತ್ವ ಕೊಡುತ್ತೇವೆ. ಆದರೆ ಒಳ್ಳೆಯ ಗುಣಮಟ್ಟದ ಪವರ್ ಕೊಡುವುದಕ್ಕೆ ಯಾವಾಗಲೂ ನಾವು ಪ್ರಯತ್ನ ಮಾಡುತ್ತಿಲ್ಲ. ಇದರ ಬಗ್ಗೆ ನಾವು ಈ ಬಾರಿ ವಿಶೇಷವಾಗಿ ಹಣ ಕೊಡುತ್ತಿದ್ದೇವೆ. ಪ್ಲಾನ್‌ನಲ್ಲಿ ನಾವು 93-94ಕ್ಕೆ ಕೆಇಬಿ ಎಂದು ಮಾಡಿದ್ದೇವೆ. ಟ್ರಾನ್ಸ್‌ಮಿಷನ್ ಲೈನಿಗೆ 92-93ಕ್ಕೆ 4 ಕೋಟಿ 75 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೆ ಈ ಬಾರಿ 7.84 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ ಅಂದರೆ ಒಟ್ಟು 24.88ಕೋಟಿ ರೂಪಾಯಿಗಳು ಕಳೆದ ವರ್ಷ ಇದ್ದರೆ ಈ ವರ್ಷ 42.49 ಕೋಟಿ ರೂಪಾಯಿಗಳನ್ನು ನಾವು ಪ್ಲಾನ್‌ನಲ್ಲಿ ಕೊಡುತ್ತಿದ್ದೇವೆ. ಔಟ್‌ಸೈಡ್ ದಿ ಪ್ಲಾನ್ ಕೂಡ ಅಷ್ಟೇ ದೊಡ್ಡ ಸಮಸ್ಯೆ ಇದೆ; 65.42 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಕೆಇಬಿ.ಯವರು ಕೂಡ ಅವರ ಪ್ರೋಗ್ರಾಂನಲ್ಲಿ 122.82ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಬೇರೆ ಬೇರೆ ರೀತಿಯಲ್ಲಿ ಪವರ್ ಸೆಕ್ಟಾರ್‌ನಲ್ಲಿ ವಿಶೇಷವಾಗಿ ಸಿಸ್ಟಂ ಇಂಪ್ರೂವ್‌ಮೆಂಟ್‌ಗೆ ನಾವು ಹಣ ಜೋಡಿಸುವುದರಿಂದ ಪ್ರತಿ ಜಿಲ್ಲೆಯಲ್ಲಿ ತಾವು ನೋಡಿರಬಹುದು ಸಬ್ ಸ್ಟೇಷನ್‌ಗೆ ಆಗಲಿ ಅಥವಾ ಲೈನ್ ಇಂಪ್ರೂವ್‌ಮೆಂಟಿಗೆ ಆಗಲಿ ವಿಶೇಷವಾದ ರೀತಿಯ ಸೌಕರ್ಯವನ್ನು ಪ್ಲಾನ್ ಮತ್ತು ಔಟ್‌ಸೈಡ್ ದಿ ಪ್ಲಾನ್ ಮತ್ತು ಬ್ಯಾಂಕುಗಳಿಗೆ ಹೋಗಿ ಇದರ ಸಹಾಯ ಪಡೆದು ಪವರ್ ಸಿಸ್ಟಂ ಷಾರ್ಟ್ ಟರ್ಮ್ ಮೆಷರ್ ಮತ್ತು ಲಾಂಗ್ ಟರ್ಮ್ ಮೆಷರ್ ಎರಡು ದೃಷ್ಟಿಯಲ್ಲಿ ವಿಶೇಷವಾದ ರೀತಿಯಲ್ಲಿ ಸಹಾಯ ತೆಗೆದುಕೊಳ್ಳುತ್ತಿದ್ದೇವೆ. ಇನ್ನು ಅಕ್ಷಯ ಯೋಜನೆಯನ್ನು ನೀವು ಕೈಬಿಟ್ಟಿದ್ದೀರೆಂದು ಹೇಳುತ್ತಿದ್ದಾರೆ.

ಅಕ್ಷಯ ಕಾರ್ಯಕ್ರಮ ಬಹಳ ಪ್ರಾಮುಖ್ಯವಾಗಿದೆ. ಇದನ್ನು ಏತಕ್ಕೆ ಕೈಬಿಟ್ಟಿರಿ ಎಂದು ಸಾಕಷ್ಟು ಭಾಷಣಗಳು ಈ ಸದನದಲ್ಲಿ ಆದದ್ದುನ್ನು ನಾವು ಕಂಡಿದ್ದೇವೆ. ನಾವು ಅಕ್ಷಯ ಯೋಜನೆಯನ್ನು ಕೈಬಿಟ್ಟಿಲ್ಲ. ಆದರೆ ಒಂದು ರೂಪಾಯಿ ಅಟೆಂಡೆನ್ಸ್‌ಗೆ ಎಂದು ಇದ್ದುದನ್ನು ಕೈಬಿಟ್ಟಿದ್ದೇವೆ. ಏಕೆಂದರೆ ಅದರಿಂದ ಯಾವುದೇ ಲಾಭ ಪೇರೆಂಟ್ಸ್‌ಗೆ ಎರಬಹುದು. ಆದರೆ ಮಕ್ಕಳ ದೃಷ್ಟಿಯಲ್ಲಿ ಇದೊಂದು ಪ್ರಾಮುಖ್ಯವಾದ ಕಾರ್ಯಕ್ರಮವಾಗುವುದಿಲ್ಲ. ಈಗ ನಾವು ನವೆಂಬರ್- ಡಿಸೆಂಬರ್‌ನಲ್ಲಿ ಒಟ್ಟು ಖರ್ಚು ಮಾಡಿದಂತ ಹಣ ಕೂಡ ಏನಾಗಿದೆ ಎಂದರೆ ಬರೀ 92-93ರಲ್ಲಿ ಅಕ್ಷಯ ಯೋಜನೆಯಲ್ಲಿ ಒದಗಿಸಿದ ಹಣ 80 ಕೋಟಿ ರೂಪಾಯಿ, ಹಣ ಒದಗಿಸುವುದು ಮುಖ್ಯವಲ್ಲ, ಖರ್ಚು ಮಾಡುವುದು ಮುಖ್ಯ. ಆದುದರಿಂದ ಬಿಡುಗಡೆಯಾದ ಹಣ, ಖರ್ಚಾದ ಹಣ ಎಷ್ಟೆಂದರೆ 15.22 ಕೋಟಿ ರೂಪಾಯಿ ಮಾತ್ರ ಈ ಅಕ್ಷಯ ಯೋಜನೆಯಲ್ಲಿ. ಅಕ್ಷಯ ಯೋಜನೆ ಕೈಬಿಟ್ಟೆವು ಎಂದು ಹೇಳಿದರಲ್ಲ, ಹಣ ಎಷ್ಟು ಖರ್ಚು ಮಾಡಿದ್ದು 80 ಕೋಟಿ ರೂಪಾಯಿಗಳಲ್ಲಿ ಅಂದರೆ 15.22 ಕೋಟಿ ರೂಪಾಯಿ ಮಾತ್ರ.

ಶ್ರೀ ವಾಟಾಳ್ ನಾಗರಾಜ್ : ಒಂದೊಂದು ಸಾರಿ ನಿಜ ಹೇಳುತ್ತೀರಿ.

5.30 ಪಿ.ಎಂ.

ಶ್ರೀ ಎಂ. ವೀರಪ್ಪ ಮೊಯಿಲಿ : 1993-94ರಲ್ಲಿ ನಾವು ಸುಮಾರು 67 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಇರಲಿ ಇದರಲ್ಲಿ ಮಕ್ಕಳ ಕೇಂದ್ರೀಕೃತ ಕಾರ್ಯಕ್ರಮಗಳಾದ ವಸ್ತ್ರಾಹಾರ, ಪುಸ್ತಕ ವಿತರಣೆ ಪೌಷ್ಟಿಕ ಆಹಾರ ಕೊಡತಕ್ಕದ್ದು, ಆಟದ ಮೈದಾನದ ಅಭಿವೃದ್ಧಿ ಸಾಮಾನ್ಯವಾದ ಚಟುವಟಿಕೆ ಯಾತ್ರೆ, ಮನೋರಂಜನೆ ಇತ್ಯಾದಿಯಾಗಿ ಹಣವನ್ನು ಕೊಟ್ಟು ಎಲ್ಲ ಹಣವನ್ನು ಖರ್ಚು ಮಾಡತಕ್ಕ ಕಾರ್ಯಕ್ರಮವನ್ನು ಈಗಾಗಲೇ ಕೊಡುತ್ತಿದ್ದೇವೆ. ನಾವು ಹಣವನ್ನು ಕೂಡ ಒದಗಿಸುತ್ತಿದ್ದೇವೆ. ಕಾಲೇಜುಗಳಿಗೆ ಹಣವನ್ನು ಕೊಡುತ್ತಿದ್ದೇವೆ. ಅಕ್ಷಯ ಯೋಜನೆಯಲ್ಲಿ ಅದನ್ನು ಅನುಷ್ಠಾನ ಮಾಡುವುದಕ್ಕೆ ಎಲ್ಲ ಹಣವನ್ನು ಉಪಯೋಗ ಮಾಡುತ್ತಿದ್ದೇವೆ. ಖಂಡಿತವಾಗಿಯೂ ನಾವು ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದೇವೆ. ಬಹಳ ವಿವರ ಇದೆ ಅದನ್ನು ಕೊಡಲಿಕ್ಕೆ ಈಗ ಅಪೇಕ್ಷೆಪಡುವುದಿಲ್ಲ. ಬೇಡಿಕೆ ಬಂದಾಗ ಅದರ ಬಗ್ಗೆ ವಿವರವಾಗಿ ವರದಿಯನ್ನು ಕೊಡುತ್ತೇನೆ.

ಇನ್ನು ಪ್ರೈಮರಿ ಹೆಲ್ತ್‌ಸೆಂಟರ್ಸ್ ಇದರ ಬಗ್ಗೆ ನಾವು ಖಂಡಿತವಾಗಿಯೂ ಹೇಳಬಹುದು 1992-93ರಲ್ಲಿ ಪ್ರಾಥಮಿಕ ಆರೋಗ್ಯಕೇಂದ್ರಗಳನ್ನು 50 ಮಂಜೂರಿ ಮಾಡಿದ್ದರು. 1993-94ನೇ ಸಾಲಿನಲ್ಲಿ ಈವರೆಗೆ 90ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರಿ ಮಾಡಿದ್ದೇವೆ. 8 ಆರೋಗ್ಯ ಘಟಕಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೆ ಏರಿಸಿದ್ದೇವೆ. 1-4-1994 ರಿಂದ ಕೆಲವು ಪ್ರಾರಂಭವಾಗುತ್ತವೆ. ಇದೇ ವರ್ಷದಲ್ಲಿ ನಾವು ಮಂಜೂರು ಮಾಡಿದ್ದೇವೆ. ಆಮೇಲೆ ಸಮುದಾಯ ಆರೋಗ್ಯ ಕೇಂದ್ರಗಳನ್ನು ಅಂತಹ 14 ಕೇಂದ್ರಗಳನ್ನು ಈ ವರ್ಷ ಮಾಡಿದ್ದೇವೆ. ಈ ವರ್ಷದಲ್ಲಿ 5ಆಸ್ಪತ್ರೆಗಳನ್ನು 100ಹಾಸಿಗೆಯುಳ್ಳ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೆ ಏರಿಸಿದ್ದೇವೆ. ಅದು ಸಾಧನೆ ಪ್ರಾಮಿಸಸ್ ಅಲ್ಲ. ಈಗ ತಮಗೆ ಗೊತ್ತಿದೆ, 374 ಮಂದಿ ವೈದ್ಯರುಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಮಾಡಲಿಕ್ಕೆ ಕ್ರಮ ಕೈಗೊಳ್ಳಲಾಗುವುದು. 336 ಖಾಲಿಯಿರುವ ಗ್ರಾಮಾಂತರ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 336 ವೈದ್ಯರುಗಳನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲಾಗುವುದು. ಒಂದು ತಿಂಗಳಿನಲ್ಲಿ ಅವರು ರಿಪೋರ್ಟ್ ಮಾಡಿಕೊಳ್ಳುತ್ತಾರೆ. ಸಚಿವ ಸಂಪುಟದಲ್ಲಿ 419 ವೈದ್ಯರನ್ನು ನೇಮಕ ಮಾಡಲಿಕ್ಕೆ ಈಗಾಗಲೇ ಅನುಮತಿ ಕೊಡಲಾಗಿದೆ.

ಶ್ರೀ ಆರ್.ಎಲ್. ಜಾಲಪ್ಪ : ಅವರು ಹಳ್ಳಿಗಳಲ್ಲಿ ಇರುವುದಕ್ಕೆ ವ್ಯವಸ್ಥೆ ಮಾಡಿದ್ದೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಆಯಾಯ ಜಿಲ್ಲೆಗಳಲ್ಲಿ ಡಾಕ್ಟರುಗಳನ್ನು ನೇಮಕ ಮಾಡಲಿಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ರಾಜ್ಯಮಟ್ಟದಲ್ಲಿ ನೇಮಕ ಮಾಡಿದರೆ ಡಾಕ್ಟರುಗಳು ಹಳ್ಳಿಗಳಿಗೆ ಹೋಗುವುದಿಲ್ಲ. ಅದಕ್ಕೆ ಆಯಾಯ ಜಿಲ್ಲಾಮಟ್ಟದಲ್ಲಿ ನೇಮಕ ಮಾಡಿದರೆ ಹಳ್ಳಿಗಳಲ್ಲಿ ಕೆಲಸ ಮಾಡತಕ್ಕವರು ಬರುತ್ತಾರೆಂದು ಹೇಳಿ ನಾವು ಆ ಕ್ರಮವನ್ನು ತೆಗೆದುಕೊಂಡಿದ್ದೇವೆ. ಆದ್ದರಿಂದ ಖಾಲಿ ಬಿದ್ದಂತಹ ಎಲ್ಲ ವೈದ್ಯರುಗಳ ಸ್ಥಾನವನ್ನು ನಾವು ಭರ್ತಿ ಮಾಡುತ್ತೇವೆ ಮಾರ್ಚಿ ತಿಂಗಳೊಳಗೆ ಮಾಡುತ್ತೇವೆ. ಇದು ಸಾಧನೆಯಲ್ಲವೆ? ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರನ್ನು 1992-93ನೇ ಸಾಲಿನಲ್ಲಿ ಒಂದು ಹುದ್ದೆಯನ್ನು ಫಿಲ್‌ಅಪ್ ಮಾಡಲಿಲ್ಲ. ಈ ವರ್ಷ ಮೇ 1993ರಲ್ಲಿ 550 ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರನ್ನು ಖಾಲಿಯಿದ್ದ ಹುದ್ದೆಗಳಿಗೆ ತುಂಬಿಸಿದ್ದೇವೆ. ಈಗ ಅವರು ಕೆಲಸಕ್ಕೆ ಬಂದಿದ್ದಾರೆ. ಔಷಧಿಗಳ ಖರೀದಿಗೆ ಕಳೆದ ವರ್ಷ 20 ಕೋಟಿ ಕೊಟ್ಟಿದ್ದರೆ ಈ ವರ್ಷ ಔಷಧಿಗಳ ಖರೀದಿಗಾಗಿ 50 ಕೋಟಿ ರೂಪಾಯಿ ಕೊಟ್ಟಿದ್ದೇವೆ. ಔಷಧಿಗಳ ಬೆಲೆ ಏನೂ ಹೆಚ್ಚಾಗಿಲ್ಲ. ಹೋದವರ್ಷ ಗ್ರೂಪ್ 'ಡಿ' ಹುದ್ದೆಗೆ ಅಪಾಯಿಂಟ್‌ಮೆಂಟ್ ಬೀರೋ. ಒಂದು ಕೂಡ ಭರ್ತಿಯಾಗಿಲ್ಲ. ಹೋದ ವರ್ಷ ಏನಿದೆ, ಈ ವರ್ಷ ಏನಾಗಿದೆ ಬರುವ ವರ್ಷ ಏನು ಮಾಡುತ್ತೇವೆ ಅದನ್ನೆಲ್ಲ ಹೇಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಮುಖ್ಯಮಂತ್ರಿಗಳೇ, ಕಳೆದ ವರ್ಷದ್ದು ಹೇಳುವುದಕ್ಕಿಂತ 1989ರಿಂದ ಇವತ್ತಿನವರೆಗೆ ಏನೇನು ಆಗಿದೆ ಅದನ್ನು ಹೇಳಿ. ನೀವು ಕಂಪೇರ್ ಮಾಡುವಾಗ ಕೇವಲ ಕಳೆದ ವರ್ಷದ್ದು ಏನಾಯಿತು ಎಂದು ಹೇಳುವುದು ಬೇಡ. 1989ರಿಂದ ಇವತ್ತಿನ ತನಕ ಹೇಳಿ. ಇದರ ಅರ್ಥ ಏನಾಗುತ್ತದೆಂದರೆ ಕಳೆದ ವರ್ಷ ಏನೂ ಕೆಲಸವಾಗಿಲ್ಲ, ನಾನು ಮುಖ್ಯಮಂತ್ರಿಯಾದ ಮೇಲೆ ಕೆಲಸ ಮಾಡಿದ್ದೇನೆ ಎನ್ನುವುದು ಸ್ಪಷ್ಟವಾಗುತ್ತದೆ. ಕಳೆದ ವರ್ಷ ಕೆಲಸ ರಾಜ್ಯದಲ್ಲಿ ಏನೂ ನಡೆದಿಲ್ಲವೆಂದು ತಾವೇ ಒಪ್ಪಿಕೊಂಡ ಹಾಗೆ ಆಗುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಈ ಸರ್ಕಾರದ ಹಿಂದಿನ ಸಾಧನೆ ಏನು ಎನ್ನುವುದನ್ನು ಅವರೇ ಹೇಳುತ್ತಿದ್ದಾರೆ. ಹೋದವರ್ಷ ಕತ್ತಲೆಯಾಗಿತ್ತು ಅಮವಾಸ್ಯೆಯಾಗಿತ್ತು ಈಗ ಚಿಮಣಿ ಹಚ್ಚಿದ್ದೇನೆಂದು ಹೇಳುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಪ್ರಶ್ನೆ ಇಷ್ಟೆ. ಕಳೆದ ವರ್ಷದ ರಾಜ್ಯಪಾಲರ ಭಾಷಣ ಈ ವರ್ಷದ ರಾಜ್ಯಪಾಲರ ಭಾಷಣ ನೋಡಿದರೆ ಈ ವರ್ಷ ಸಾಧನೆ ಏನಾಗಿದೆ ಅದು ಮುಖ್ಯ. ಆ ಲೆಕ್ಕಗಳನ್ನೆಲ್ಲ ಇಟ್ಟು ಕೊಡುತ್ತೇನೆ ನಾವೇನು ಮಾಡಿದ್ದೇವೆ ಅದನ್ನು ಕೊಡುತ್ತೇನೆ. 1983-88ರವರೆಗೆ ಏನಾಗಿದೆ ಆ ಲೆಕ್ಕವನ್ನು ಕೂಡ ಕೊಡುತ್ತೇನೆ. ಆ ಲೆಕ್ಕ ಕೊಡುವುದಕ್ಕೆ ಏನೂ ತೊಂದರೆಯಿಲ್ಲ. ಆಗ ನಿಮಗೆ ಕಷ್ಟವಾಗುತ್ತದೆ. 83 ರಿಂದ 88 ರವರೆಗೆ ಏನಾಗಿದೆ 89 ರಿಂದ ಏನಾಗಿದೆ ಅದನ್ನೆಲ್ಲ ಕೊಡಿಯೆಂದರೆ ನನಗೆ ಕೊಡಲಿಕ್ಕೆ ತೊಂದರೆಯೇನೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಒಂದು ಶ್ವೇತಪತ್ರವನ್ನು ತಾವು ಹೊರಡಿಸಿ.

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ಡಿಮಾಂಡ್ ಮಾಡಿದ್ದರಿಂದ ನಾನು ಹೇಳಿದೆ.

ಶ್ರೀ ಆರ್.ಎಲ್. ಜಾಲಪ್ಪ : ಅದರ ಜೊತೆಗೆ ಅವೊತ್ತು ಎಷ್ಟು ಜನ ಕುಡಿಯುವವರು ಇದ್ದರು, ಈವೊತ್ತು ಎಷ್ಟು ಕುಡುಕರು ಇದ್ದಾರೆ ಎಕ್ಸೈಜ್ ಮೊಬಲೈಸೇಷನ್ ಎಷ್ಟಾಗಿದೆ ಅದನ್ನು ಸ್ವಲ್ಪ ಹೇಳಿ.

ಶ್ರೀ ಎಂ. ವೀರಪ್ಪಮೊಯಿಲಿ : ಯಾರು ಜಾಸ್ತಿ ಹಾಲು ಕುಡಿಸಿದರು, ಯಾರು ಜಾಸ್ತಿ ಹೆಂಡ ಕುಡಿಸಿದರು ಯಾರು ಸಾರಾಯಿ ಕುಡಿಸಿದರು ಅದು ಕೊಡೋಣ.

ಶ್ರೀ ಆರ್.ವಿ. ದೇಶಪಾಂಡೆ : ಯಾರು ವಿಧಾನಸಭೆಯಲ್ಲಿ ಕೆಲಸ ನಿಲ್ಲಿಸಿದರು ಅದು ನಿಮ್ಮ ರಿಪೋರ್ಟ್‌ನಲ್ಲಿ ಬರಲಿ.

ಶ್ರೀ ವಾಟಾಳ್ ನಾಗರಾಜ್ : ಯಾರು ಕಳ್ಳಭಟ್ಟಿ ಕುಡಿಸಿದರು, ಯಾರು ಸರ್ಕಾರಿ ಸಾರಾಯಿ ಕುಡಿಸಿದರು ಅದನ್ನು ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಯಾರು ಕಳ್ಳಭಟ್ಟಿ ಕುಡಿಸಿದರು, ಯಾರುಸಾರಾಯಿ ಕುಡಿಸಿದರು ಅದೆಲ್ಲ ಹೇಳುತ್ತೇನೆ. 1992-93ರಲ್ಲಿ ಒಂದು ಹುದ್ದೆ ಸಹ ಭರ್ತಿಯಾಗಲಿಲ್ಲ. 1200 ಗ್ರೂಪ್ ಡಿ ಹುದ್ದೆಗಳನ್ನು ಆಯಾಯ ಜಿಲ್ಲೆಗಳಲ್ಲಿ ತುಂಬಲಿಕ್ಕೆ ನಾವು ನಿರ್ಣಯ ತೆಗೆದುಕೊಂಡಿದ್ದು ಜೊತೆಗೆ ದಿನಗೂಲಿಯಲ್ಲಿ ಕೆಲಸ ಮಾಡತಕ್ಕ 500 ಮಂದಿ ಗ್ರೂಪ್ ಡಿ ನೌಕರರನ್ನು ಆರೋಗ್ಯ ಇಲಾಖೆಯಲ್ಲಿ ಖಾಲಿಯಿರುವ 500 ಹುದ್ದೆಗಳಿಗೆ ಭರ್ತಿ ಮಾಡಲಿಕ್ಕೆ ನಾವು ನಿರ್ಣಯ ತೆಗೆದುಕೊಂಡಿದ್ದೇವೆ. ಖಾಲಿಯಿರುವ ಗ್ರೂಪ್ ಸಿ ಹುದ್ದೆಗಳನ್ನು ತುಂಬಲಲಿಕ್ಕೆ ನೇಮಕಾತಿ ಪ್ರಾಧಿಕಾರವನ್ನು ನೇಮಕ ಮಾಡಲಿಕ್ಕೆ ನಾವು ನಿರ್ಣಯ ತೆಗೆದುಕೊಂಡಿದ್ದೇವೆ. ಆಂಬುಲೆನ್ಸ್ ವಾಹನಗಳನ್ನು 1992-93ರಲ್ಲಿ ಒಂದೂ ಸಹ ತೆಗೆಮಕೊಳ್ಳಲಿಲ್ಲ, ಈಗ 91 ಅಂಬುಲೆನ್ಸ್ ವಾಹನಗಳನ್ನು ಖರೀದಿಸುವುದಕ್ಕೆ

ನಿರ್ಣಯ ಮಾಡಿ ಅದರಲ್ಲಿ ಈಗಾಗಲೇ 14ಅಂಬುಲೆನ್ಸ್ ವಾಹನಗಳನ್ನು ಖರೀದಿಸುವುದಕ್ಕೆ ನಾವು ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಆರ್.ಎಲ್. ಜಾಲಪ್ಪ : ನಿಂತಿರುವ ಅಂಬುಲೆನ್ಸ್ ವಾಹನಗಳ ಸಂಖ್ಯೆ ಎಷ್ಟು?

ಶ್ರೀ ಎಂ. ವೀರಪ್ಪ ಮೊಯಿಲಿ : ಆಯಿತು ಕೊಡೋಣ. ನನಗೆ ಏನಾಗಿದೆ ಅಂದರೆ ನೀವು ಖರೀದಿ ಮಾಡಲಾರದ್ದು ನಾನು ಖರೀದಿ ಮಾಡಬೇಕಾಗಿದೆ ನಿಂತು ಹೋದದ್ದು ರಿಪೇರಿ ಮಾಡಬೇಕಾಗಿದೆ ಎಲ್ಲ ಮಾಡುತ್ತೇನೆ ಕಷ್ಟ ಅದು ನಮಗೆ. ನೀವು ನಿಲ್ಲಿಸಿದ ಗಾಡಿಯನ್ನು ನಾನು ಓಡಿಸಬೇಕು. ಓಡಿಸಿದ ಗಾಡಿಯನ್ನು ರಿಪೇರಿ ಮಾಡಿಸಬೇಕು.

ಶ್ರೀ ಆರ್.ಎಲ್. ಜಾಲಪ್ಪ : 45 ವರ್ಷಗಳಿಂದ ನೀವೇ ಅಧಿಕಾರದಲ್ಲಿ ಇದ್ದೀರಿ. ನಾವು ಅಧಿಕಾರದಲ್ಲಿ ಇದ್ದದ್ದು ಕೇವಲ ಮುರ್‍ನಾಲು ವರ್ಷ ಮಾತ್ರ ನಮ್ಮದೇನೂ ಅಲ್ಲ ಅದು.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಜಾಲಪ್ಪನವರೆ, 45 ವರ್ಷ ನಾವೇ ಇರಲಿಲ್ಲ. ಏಕೆ ಈ ಮಾತನ್ನು ಆಡುತ್ತೀರಿ? ಏಕಾಂತಯ್ಯನವರು ಇರಲಿಲ್ಲ. ತಾವು ಚಂದ್ರೇಗೌಡರು ಇರಲಿಲ್ಲವೆ? ತಾವು ಕಾಂಗ್ರೆಸ್ಸಿನಲ್ಲಿ ಇರಲಿಲ್ಲವೆ?

ಶ್ರೀ ಡಿ.ಬಿ. ಚಂದ್ರೇಗೌಡ : ಅಧ್ಯಕ್ಷರೇ, ನಾನು ಅದಕ್ಕೆ ಹೇಳಿದ್ದೆ, ಗಾಡಿ ಅದೇ ಕೆಲವರು ರಿಪೇರಿ ಮಾಡಿಸಿ ಕೆಲವು ವರ್ಷ ಓಡಿಸಿದ್ದಾರೆ. ಈಗ ಹೊಸದಾಗಿ ಬಂದವರು ಈಗ ರಿಪೇರಿ ಮಾಡಿಸಿ ಓಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಗಾಡಿ ಅದೇ ಹಳೆಯ ಗಾಡಿ.

ಶ್ರೀ ಕೆ.ಹೆಚ್. ರಂಗನಾಥ್ : ಹರಾಜು ಆಗಿದೆ. ಬರೀ ಗಾಡಿ ಕೊಂಡಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ : ನಮಗೆ ಹಳೆಯದಾದರೂ ಕಳುಹಿಸಿ, ಹೊಸದಾದರೂ ಕಳುಹಿಸಿ.

ಶ್ರೀ ಕೆ.ಹೆಚ್. ರಂಗನಾಥ್: ಇಲ್ಲ, ನಿಮ್ಮದು ಅಲ್ಲೇ ಇರುವ ಗಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಏಕೆಂದರೆ Whether this is a performing Government, or not ಈ ಪ್ರಶ್ನೆ ಆಗಾಗ ಬರುತ್ತಿರುತ್ತದೆ ಅದಕ್ಕೆ ಒಮ್ಮೆ ಉತ್ತರ ಕೊಟ್ಟರೆ ಆಮೇಲೆ ಹೆಚ್ಚು ಬರುವುದಿಲ್ಲ. ನಾವು ಸರ್ಕಾರದಲ್ಲಿ ಸಾಧನೆ ಮಾಡುತ್ತಿದ್ದೇವೆ. 1992-93ರಲ್ಲಿ ಎಕ್ಸ್‌ರೇ ಮಿಷನ್ ಒಂದನ್ನು ತೆಗೆದುಕೊಳ್ಳಲಿಲ್ಲ. ಈ ವರ್ಷ 150-150 ಎಂಎ ಎಕ್ಸ್‌ರೇ ಯಂತ್ರಗಳನ್ನು ತೆಗೆದುಕೊಂಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಪಕ್ಷದವರು ಇಲ್ಲಿ ಬಾವಿಯಲ್ಲಿ ಬಿದ್ದಿದ್ದರು ಏಕೆ ಸ್ವಾಮಿ? ಒಂದು ಪ್ರಶ್ನೆ ತಮ್ಮ ಪಕ್ಷದವರೇ ಇಲ್ಲಿ ಬಾವಿಯಲ್ಲಿ ಬಿದ್ದಿದ್ದರು ಏಕೆ?

ಶ್ರೀ ಎಸ್. ಇಸಾಮಿಯ : ನೀವು ಬೀಳ್ರಿ?

ಶ್ರೀ ಎಂ. ವೀರಪ್ಪ ಮೊಯಿಲಿ : ನಮಗೆ ಬಾವಿಗೆ ಬೀಳುವುದು ಗೊತ್ತು ಬಿದ್ದಮೇಲೆ ಏಳಲಿಕ್ಕೆ ಗೊತ್ತು. ಕೆಲವರಿಗೆ ಬೀಳುವುದಕ್ಕೆ ಆಗುವುದಿಲ್ಲ, ಬಿದ್ದರೆ ಮೇಲೆ ಏಳಲಿಕ್ಕೆ ಆಗುವುದಿಲ್ಲ.

52/6-41

ಶ್ರೀ ಎಸ್. ಇಸಾಮಿಯ : ಮಾನ್ಯ ವಾಟಾಳ್‌ನಾಗರಾಜ್‌ರವರು ಬರೀ ಯಾವಾಗಲೂ ಸಾಯಂಕಾಲದಿಂದ ಬೆಳಿಗ್ಗೆಯವರೆಗೆ ಬೇರೇನೂ ಕೆಲಸವೇ ಇಲ್ಲ. ಯಾರಾದರೂ ಮಾತನಾಡುವಾಗ ಏನೇನೋ ಮಾತನಾಡುವುದು ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಇವರಿಗೇನು ಹುಚ್ಚುಗಿಚ್ಚು ಹಿಡಿದಿದೆಯೇ ನೀವು ಸುಮ್ಮನೆ ಕುಳಿತುಕೊಳ್ಳಿ. ಚರ್ಚೆಯಲ್ಲಿ ಸಾಮರಸ್ಯ ಹಾಸ್ಯ ಇರಲೇಬೇಕು ಇವರಿಗೆ ಏನಾಗಿದೆ?

ಶ್ರೀ ಆರ್.ವಿ. ದೇಶಪಾಂಡೆ : ತಾವು ಎಕ್ಸ್‌ರೇ ಮೆಷಿನ್ ತೆಗೆದುಕೊಂಡಿದ್ದೀರಿ. ಒಂದು ಸಲಹೆ ಮಾಡುತ್ತಿದ್ದೇನೆ, ತಾವೇನು ಮೆಷಿನ್ ತೆಗೆದುಕೊಂಡಿದ್ದೀರಿ ಅವು ಇನ್ನು ಇನ್‌ಸ್ಟಾಲ್ ಆಗಿಲ್ಲ, ನಮ್ಮ ಹಳಿಯಾಳದಲ್ಲಿ ಎಕ್ಸ್‌ರೇ ಮೆಷಿನ್ ಬಂದು ಆರು ತಿಂಗಳಾಯಿತು. ಸಿದ್ದಾಪುರದಲ್ಲಿ ಅದು ಮಾನ್ಯ ಕಾನಡೆಯವರಿಗೆ ಗೊತ್ತಿದೆ ಅಲ್ಲಿಯೂ ಮೆಷಿನ್ ಬಂದು ಆರು ತಿಂಗಳಾಯಿತು ಅವರು ಪತ್ರ ಬರೆಯುತ್ತಿದ್ದಾರೆ. ಮಷಿನ್ ಇನ್ನೂ ಇನ್‌ಸ್ಟಾಲ್ ಆಗಿಲ್ಲ, ತಕ್ಷಣ ಇನ್‌ಸ್ಟಾಲ್ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಅದು ಮಾಡೋಣ.

ಟಿ.ವಿ. ಎರಡು ಯಂತ್ರ. ಅಲ್ಲದೆ, 60 ಎಂ. ಎ. ಆರು ಯಂತ್ರ, 15 ಎಂ.ಎ. ಮೂರು ಯಂತ್ರ. ಇವುಗಳನ್ನು ಖರೀದಿಸುವುದಕ್ಕೂ ಕೂಡ ನಾವು ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಇವಿಷ್ಟು ಸ್ಯಾಂಪಲ್‌ಗಾಗಿ, ಹೆಚ್ಚೇನಲ್ಲ. ಇನ್ನು, ಫ್ಲಡ್ ಮತ್ತು ಭೂಕಂಪದ ಬಗ್ಗೆ, ನಮ್ಮ ಸರ್ಕಾರ ವಿಶೇಷವಾಗಿ ಗಮನ ಕೊಡಬೇಕಾದ ಅವಶ್ಯಕತೆ ಬಂತು. ಬರೀ ನಮ್ಮ ಕಾಲದಲ್ಲಿ ಬಂದಂತಹ ಫ್ಲಡ್‌ಗೆ ಅಲ್ಲ, ಹಿಂದೆ ನಮ್ಮದೇ ಸರ್ಕಾರ, 1991ರ ಫ್ಲಡ್‌ಗೂ ಕೂಡ ನಾವೇ ಹಣ ಬಿಡುಗಡೆ ಮಾಡಿ ಕಾರ್ಯಕ್ರಮ ತೆಗೆದುಕೊಳ್ಳಬೇಕಾದ ಅವಶ್ಯಕತೆ ಬಂತು. ಕೋಲಾರದ ವಿಚಾರವಾಗಿ ನಮ್ಮ ಮಾನ್ಯ ಬೈರೇಗೌಡರಿಗೆ ಗೊತ್ತು. 1991ರಲ್ಲಿ ಫ್ಲಡ್ ಬಂತು, ಹಣ ಬಿಡುಗಡೆಯಾದದ್ದು ನಾನು ಮುಖ್ಯಮಂತ್ರಿಯಾದ ಮೇಲೆ.ಹಾಗೆಯೇ ತುಮಕೂರಿನಲ್ಲೂ ಕೂಡ, 1991ರಲ್ಲಿ ಬಂದ ಫ್ಲಡ್‌ಗೆ, ಪ್ರವಾಹಕ್ಕೆ ನಾವು ಹಣ ಬಿಡುಗಡೆ ಮಾಡಿ, ಕಾರ್ಯಕ್ರಮ ತೆಗೆದುಕೊಂಡಿದ್ದು ಮೊನ್ನೆ. ಗುಲ್ಬರ್ಗಾದಲ್ಲೂ ಕೂಡ 1991ರಲ್ಲಿ ಬಂದಂತಹ ಫ್ಲಡ್‌ಗೆ, ಹಣ ಬಿಡುಗಡೆ ಮಾಡಿ ಕಾರ್ಯಕ್ರಮ ಕೈಗೊಂಡಿದ್ದು ಮೊನ್ನೆ ತಾನೆ ನಾವು ಅಧಿಕಾರಕ್ಕೆ ಬಂದಮೇಲೆ. 1991, 1992 ಮತ್ತು 1993ರ ಫ್ಲಡ್ ಈ ಮೂರು ವರ್ಷಗಳಿಗೂ ಕೂಡ ನಾವು ವಿಶೇಷವಾಗಿ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಆರ್. ಎಲ್. ಜಾಲಪ್ಪ : ನಮ್ಮ ತಾಲ್ಲೂಕಿನಲ್ಲಿ ಏನು ಅನಾಹುತವಾಯಿತು ಅದರ ಬಗ್ಗೆ ಹೇಳಿದ್ದೇನೆ. ಬಹುಶಃ ಇದನ್ನು ಯಾರಾದರೂ ತಮ್ಮ ನೋಟೀಸಿಗೆ ತಂದಿದ್ದಾರೋ ಇಲ್ಲವೋ ಗೊತ್ತಿಲ್ಲ, ಹದಿಮೂರುವರೆ ಸಾವಿರ ಮನೆಗಳು ಬಿದ್ದು ಹೋದವು, ಒಂದು ಮನೆಯನ್ನೂ ಇವತ್ತು ಕಟ್ಟಿಸಿಕೊಡಲಿಲ್ಲ. ಸರಾಸರಿ ಒಂದೊಂದು ಮನೆಗೆ 700 ರೂಪಾಯಿ ಪರಿಹಾರ ಕೊಟ್ಟಿದ್ದೀರಿ ಎಂದು ನಾನು ಹೇಳಿದ್ದೇನೆ. ಈ ಹೌಸ್‌ನಲ್ಲಿ ನಾಲ್ಕಾರು ಸಾರಿ ಇದರ ಬಗ್ಗೆ ಮಾತನಾಡಿದ್ದೇನೆ. ಕಳೆದ ವರ್ಷ 7-7-93ರಲ್ಲಿ ನೀವು ಎಲ್ಲಾ ಶಾಸಕರ ಸಭೆ ಕರೆದಿದ್ದಾಗ, ಅವತ್ತು ಕೂಡ ನಾನು ಹೇಳಿದೆ. ಇದರ ಬಗ್ಗೆ ಏನಾದರೊಂದು ಹೇಳಿ. ಆ ಹದಿಮೂರುವರೆ ಸಾವಿರ ಕುಟುಂಬಗಳ ಗತಿ ಏನು, ದಯಮಾಡಿ ಇದರ ಬಗ್ಗೆ ಸ್ವಲ್ಪ ಹೇಳಬೇಕು.

ಶ್ರೀ ಎಂ. ವೀರಪ್ಪಮೊಯ್ಲಿ : ಈ ಫ್ಲಡ್ ಬಗ್ಗೆ ಕೂಡ ನಾವು ಸುಮಾರು 130 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

ಶ್ರೀ ಆರ್. ಎಲ್. ಜಾಲಪ್ಪ : ನನ್ನ ಗತಿ ಏನು ಎಂಬುದನ್ನೂ ಸ್ವಲ್ಪ ಹೇಳಿ.

ಶ್ರೀ ಆರ್. ವಿ ದೇಶಪಾಂಡೆ : 130 ಕೋಟಿ ಖರ್ಚುಮಾಡಿದ್ದೀರಿ, ಇವರ ಪರಿಸ್ಥಿತಿ ಬಗ್ಗೆಯೂ ಸ್ವಲ್ಪ ಹೇಳಿ.

ಶ್ರೀ ಎಂ. ವೀರಪ್ಪಮೊಯ್ಲಿ : ವರದಿ ತರಿಸಿ, ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳೋಣ.

ಶ್ರೀ ಆರ್.ಎಲ್. ಜಾಲಪ್ಪ : ವರದಿ ಏನು ಸ್ವಾಮಿ ; ಬೇಕಾದಷ್ಟು ಸಾರಿ ನಿಮ್ಮ ಹೌಸಿಂಗ್ ಮಿನಿಸ್ಟರು ಇಲ್ಲಿ ಉತ್ತರ ಕೊಟ್ಟಿದ್ದಾರೆ. ವರದಿ ಎಲ್ಲಾ ಇಲ್ಲಿಯೇ ಇದೆ.

ಶ್ರೀ ಧರ್ಮಸಿಂಗ್ : ಲಾಸ್ಟ್ ಟೈಮ್ ಏನಾಗಿತ್ತು, ಮೂವತ್ತೂರು ಸಾವಿರ ಒಟ್ಟಾರೆ ಕರ್ನಾಟಕ ರಾಜ್ಯದಲ್ಲಿ, ಅದರಲ್ಲಿ ಕೋಲಾರ ಜಿಲ್ಲೆಯೂ ಸೇರಿದೆ. 50 ಕೋಟಿ ರೂಪಾಯಿ.....

ಶ್ರೀ ಹೆಚ್.ಎಂ. ರೇವಣ್ಣ :ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರು ಜಿಲ್ಲೆಯಲ್ಲಿ ಬಿದ್ದಂತಹ ಮನೆಗಳ ವಿಚಾರವೂ ಹಾಗೆಯೇ ಪೆಂಡಿಂಗ್ ಇದೆ. 400 ಮನೆಗಳು ನನ್ನ ಕ್ಷೇತ್ರದಲ್ಲೂ ಬಿದ್ದಿವೆ, ಆ ಫೈಲ್ ಹಾಗೆಯೇ ಪೆಂಡಿಂಗ್ ಇದೆ.

ಶ್ರೀ ಆರ್. ಎಲ್. ಜಾಲಪ್ಪ : ಎಲ್ಲರದೂ ಅದೇ ಗೋಳೇ. ತಾವು ಏನಾದರೂ ಸ್ವಲ್ಪ ಹೇಳಿ, 2 ಲಕ್ಷ ಜನಸಂಖ್ಯೆ ಇರತಕ್ಕ ಒಂದು ತಾಲ್ಲೂಕು. ಹದಿಮೂರವರೆ ಸಾವಿರ ಮನೆಗಳು ಬಿದ್ದುಹೋಗಿದೆ. ತಮಗೆ ವರದಿ ಕೂಡ ಬಂದಿದೆ.

ಉಪಾಧ್ಯಕ್ಷರು : ತಾವು ಪೂರ್ತಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬಗ್ಗೆ ಹೇಳಿ.

ಶ್ರೀ ಆರ್. ಎಲ್. ಜಾಲಪ್ಪ : ನಾನು, ನನ್ನ ತಾಲ್ಲೂಕಿನ ಬಗ್ಗೆ ಹೇಳುತ್ತೇನೆ. ನಿಮ್ಮದು ನೀವು ಹೇಳಿ. ಒಂದು ಕ್ಷೇತ್ರ ಅವರದೂ ನಮಗೆ ಸೇರಿದೆ. ಅದರದೂ ಸೇರಿಸಿ ನಾನು ಹೇಳುತ್ತಿದ್ದೇನೆ. ಇನ್ನು ಮುಕ್ಕಾಲು ಕ್ಷೇತ್ರ ನಿಮ್ಮದು ಇದೆ, ಅದರ ಬಗ್ಗೆ ತಾವು ಹೇಳಿ. Some assurance must be given. This is too much. For the last four sessions, I have been requesting you. Something must come out.

1992ರ ರಾಜ್ಯಪಾಲರ ಭಾಷಣದಲ್ಲಿಯೂ ಇದು ಇದೆ, 1994ರ ರಾಜ್ಯಪಾಲರ ಭಾಷಣದಲ್ಲೂ ಇದು ಇದೆ. ವರ್ಷ ವರ್ಷ ಸುಮ್ಮನೆ ಇದನ್ನು ಹೇಳಿಕೊಂಡು ಹೋಗುತ್ತಿರುವುದೋ ಅಥವಾ ತಾವು ದಯವಿಟ್ಟು ಏನಾದರೂ ಮಾಡುತ್ತೀರೋ. You must tell me something.

ಶ್ರೀ ಎಂ. ವೀರಪ್ಪಮೊಯಿಲಿ : ಕೋಲಾರ ಜಿಲ್ಲೆಗೆ ನಾವು ಈಗಾಗಲೇ ಹಣ ಬಿಡುಗಡೆ ಮಾಡಿದ್ದೇವೆ.

R.L.Jalappa : I am talking about Bangalore district. ಅದರಲ್ಲಿ 13ವರೆ ಸಾವಿರ ಮನೆಗಳು ಹೋಗಿದೆ. ಕೊನೆಗೆ ಕಂಪ್ಲೀಟ್ ಆಗಿ ನಿರ್ನಾಮ ಆಯಿತು, ಇವತ್ತು ಎಲ್ಲರಿಗೂ ಸೇರಿಸಿ ಆವ್ರೇಜ್ 700 ರೂಪಾಯಿ ಚೆಕ್ಕು.

ಶ್ರೀ ಎಂ. ವೀರಪ್ಪಮೊಯಿಲಿ : ಅದರ ವಿವರ ಈಗ ನನ್ನ ಹತ್ತಿರ ಇಲ್ಲ. ಸನ್ಮಾನ್ಯ ಸದಸ್ಯರನ್ನು ಕರೆಸಿ ನಾನು ನಿಮ್ಮ ಜೊತೆಯಲ್ಲಿ ಸಮಾಲೋಚನೆ ಮಾಡಿ ಅದಕ್ಕೆ ತಕ್ಷಣ ಪರಿಹಾರ ಹುಡುಕುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಕಡೆಯ ಪಕ್ಷ ನಾನು ಇದನ್ನಾದರೂ ನಂಬುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ : ನಂಬಬಹುದು. ಆದ್ದರಿಂದ ಇವತ್ತು ಹರ್ತ್‌ಕ್ಟೆಕ್ ಪ್ರಾವಿಜನ್‌ಗೆ ನಾವು ಈಗಾಗಲೇ ಡಿಜೈನ್ಸ್ ಮಾಡಿದ್ದೇವೆ. ಸದ್ಯದಲ್ಲೇ ನಾವು ಮನೆಗಳನ್ನು ಕಟ್ಟಲಿಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಈಗ ರೆಗ್ಯುಲರೈಜೇಶನ್ ಸ್ಕೀಮ್ ಏನು ಇದೆ ಇದು ಕೂಡ ಬಹಳ ಸಮಯದಿಂದ ಇತ್ತು. ಇದು ಎಲ್ಲಾ ಬಹಳ ಸಮರೋಪಾಧಿಯಲ್ಲಿ ಕೆಲಸವನ್ನು ಮಾಡಬೇಕೆಂದು ನಾವು ಈಗಾಗಲೇ ಹೇಳಿದ್ದೇವೆ. ಮತ್ತು ಅಪ್ಲಿಕೇಷನ್ಸ್ ಇಲ್ಲಿಯವರೆಗೆ ಸ್ವೀಕಾರ ಮಾಡಿದಂತಾದ್ದು ಸುಮಾರು 10 ಲಕ್ಷ 86 ಸಾವಿರ. ಈಗ ಡಿಸ್‌ಪೋಜಲ್ ಎಷ್ಟು ಆಗಿದೆ ಅಂತ ಹೇಳಿದರೆ ಸುಮಾರು 3 ಲಕ್ಷ 19ಸಾವಿರ 942 ಅರ್ಜಿಗಳು ಡಿಸ್‌ಪೋಜ್ ಆಗಿದೆ. ಬ್ಯಾಲೆನ್ಸ್ ಅಪ್ಲಿಕೇಶನ್ 7 ಲಕ್ಷ 66 ಸಾವಿರ 884 ಅರ್ಜಿಗಳು ಬಾಕಿ ಇವೆ. ಒಂದು ನಿಗಧಿತ ಸಮಯದಲ್ಲಿ ವಿಲೇವಾರಿ ಮಾಡಲಿಕ್ಕೆ ಬೇಕಾದಂತಹಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತಾ ಇದ್ದೇವೆ. ಇನ್ನು ನಮ್ಮ ಹೊಸ ಕೈಗಾರಿಕಾ ನೀತಿಯನ್ನು ನಾವು ಮಾಡಿ ಇವತ್ತು ಬೇರೆ ಎಲ್ಲಾ ರಾಜ್ಯಗಳ ಕೈಗಾರಿಕಾ ನೀತಿಗಿಂತಲೂ ಒಂದು ವಿಶೇಷ ರೀತಿಯಲ್ಲಿ ಹೆಚ್ಚು ಆಕರ್ಷಣೆ ಜನತೆಗೆ ಬರುವ ರೀತಿಯಲ್ಲಿ ನಾವು ಈ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ವಿಶ್ವದ ಬಗ್ಗೆ ಸಾಕಷ್ಟು ಚರ್ಚೆಯಾವಾಗಲೂ ಬರುತ್ತದೆ. ವಿಶ್ವದ ಬಗ್ಗೆ ನೀವು ಏನೂ ಮಾಡಿಲ್ಲ ಮರೆತುಬಿಟ್ಟಿದ್ದೀರಿ ಅಂತ ಮಾತು ಆಗಾಗ ಬರುತ್ತದೇ ಇದ. ಇದರ ಬಗ್ಗೆ ನಾವು ಸ್ವಲ್ಪ ವಿವರ ಕೊಡಲಿಕ್ಕೆ ಅಪೇಕ್ಷೆ ಪಡುತ್ತಿದ್ದೇವೆ. ವಿಶ್ವದ ಎಕ್ಸ್‌ಪೆಂಡೀಚರ್ 2-10-91ರಿಂದ 31-3-92ರವರೆಗೆ 3 ಕೋಟಿ57 ಲಕ್ಷ ರೂಪಾಯಿಗಳು ಖರ್ಚಾಗಿದ್ದರೆ ನವೆಂಬರ್ 92ರವರೆಗೆ ಎಷ್ಟು ಖರ್ಚಾಗಿತ್ತು. ಅಂದ್ರೆ 11 ಕೋಟಿ 7 ಲಕ್ಷ. ನವೆಂಬರ್ 92ರಿಂದ 31-3-93ರ ಮಧ್ಯೆದಲ್ಲಿ ನಾನು ಮುಖ್ಯಮಂತ್ರಿಯಾದ ಮೇಲೆ 10ಕೋಟಿ 68ಲಕ್ಷ ರೂಪಾಯಿ ನಾವು ಖರ್ಚುಮಾಡಿದ್ದೇವೆ. ಅಂದ್ರೆ ಆ ಕಾರ್ಯಕ್ರಮ 5 ತಿಂಗಳಲ್ಲಿ. 7 ತಿಂಗಳಲ್ಲಿ 11 ಕೋಟಿ ಆದರೆ 10 ಕೋಟಿ 68 ಲಕ್ಷ ಆ ವರ್ಷದಲ್ಲಿ 1992-93ರಲ್ಲಿ ನಾವು ಖರ್ಚು ಮಾಡಿದ್ದೇವೆ. ಆಮೇಲೆ ಈಗ ಜನವರಿ 94ರ ಅಂತ್ಯ ಒಳಗೆ 848.57 ಲಕ್ಷ ರೂಪಾಯಿ ನಾವು 8 ಕೋಟಿ 48 ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ಅದರಲ್ಲಿ ಮುಖ್ಯವಾಗಿ ಬೇಕಾದ್ದು ಬರೀ ಅವರಿಗೆ ಟ್ರೈನಿಂಗ್ ಕೊಟ್ಟು ನಾವು ಮನೆಗೆ ಕಳುಹಿಸುವುದು ಅಲ್ಲ ಒಂದು ಔದ್ಯೋಗಿಕ ರಂಗಕ್ಕೆ ಅವರನ್ನು ಸೇರಿಸಿಕೊಳ್ಳಬೇಕು. ತಾವು ಹಿಂದಿನ ಕಾರ್ಯಕ್ರಮದ ಒಂದು ಥುಸ್ಟ್‌ನೋಡಿದರರೆ ಒತ್ತು ನೋಡಿದರೆ ಟ್ರೈನಿಂಗ್‌ಗೆ ಜಾಸ್ತಿ ಪ್ರಾಮುಖ್ಯತೆ ಕೊಟ್ಟಂತಹ ಒಂದು ಪರಿಸ್ಥಿತಿಯನ್ನು ತಾವು ನೋಡುತ್ತೀರಿ. ಆದರೆ ಇವತ್ತು ಡೈರೆಕ್ಟ್ ಪ್ರೊಡಕ್ಷನ್ ಬೆನಫಿಷಿರೀಸ್ ಇದರ ವಿವರ ನೋಡಿದರೆ ಖಂಡಿತವಾಗಿಯೂ ವಿಶ್ವದಲ್ಲಿ ನಾವು ವಿಶೇಷವಾದಂತಹ ಪ್ರಗತಿಯನ್ನು ನಾವು ಕಂಡಿದ್ದೇವೆ ಏಕೆಂದರೆ ಈಗ ನವೆಂಬರ್ 92 ರವರೆಗೆ 9 ಸಾವಿರದ 651 ಮಂದಿ ಪ್ರೊಡೆಕ್ಷನ್ ರಂಗಕ್ಕೆ ಬಂದಿದ್ದರೆ 5 ತಿಂಗಳಲ್ಲಿ ನವೆಂಬರ್ 92ರಿಂದ 31-3-92ರವರೆಗೆ 35 ಸಾವಿರ 866 ಮಂದಿಯನ್ನು ನಾವು ಪ್ರೊಡಕ್ಷನ್‌ಗೆ ನಾವು ಕಳುಹಿಸಿದ್ದೇವೆ. ಈ ಭಾರಿ ಜನವರಿ ಕೊನೆ 94ಕ್ಕೆ 20 ಸಾವಿರದ 181 ಮಂದಿಗೆ ಪ್ರೊಡಕ್ಷನ್‌ಗೆ ಕಳುಹಿಸಿದ್ದೇವೆ. ವಿಶ್ವದಲ್ಲಿ. ಪ್ರೊಡಕ್ಷನ್‌ಗೆ ಟ್ರೈನಿಂಗ್ ಬಗ್ಗೆ ಅದು ಟ್ರೈನಿಂಗ್ ಅವರು ಎಲ್ಲಿ ಹೋಗುತ್ತಾರೋ ಗೊತ್ತಾಗುವುದಿಲ್ಲ. ಆದರೆ ಡೈರೆಕ್ಟ್ ಪ್ರೊಡಕ್ಷನ್ ಏನು ಕಾಣತ್ತೇವೆ ಅದರಿಂದ ನಿಜವಾದಂತಹ ವಿಶ್ವದ ಒಂದು ಅಭಿವೃದ್ಧಿಯನ್ನು ಕಾಣಿಸಲಿಕ್ಕೆ ಆಗುತ್ತದೆ. ಸೇಲ್ಸ್ ವಾಲ್ಯು ಕೂಡ ಲ್ಯಾಕ್ಸ್‌ನಲ್ಲಿದೆ. ಈಗ ಅಪ್ ಟು 94 ನವೆಂಬರ್ 13 ಕೋಟಿ 38 ಲಕ್ಷ ರೂಪಾಯಿ ಇವತ್ತು ವಾಲ್ಯು ಪ್ರೊಡಕ್ಷನ್ ಆಗಿದ್ದರೆ ನಾವು ನವೆಂಬರ್ 92ರಿಂದ 31-3-92ರವರೆಗೆ 16 ಕೋಟಿ 76 ಲಕ್ಷ ಆಮೇಲೆ ಈ ವರ್ಷ. ಜನವರಿ 94ರವರೆಗೆ 53 ಕೋಟಿ 85 ಲಕ್ಷ ಆಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಒಂದೇ ಒಂದು ನಿಮಿಷ. ರಾಜ್ಯಪಾಲರ ಭಾಷಣದ ಚರ್ಚೆಗೆ ಉತ್ತರ ಕೊಟ್ಟಿದ್ದರೆ ಸಾಕಾಗಿತ್ತು. ಬಂಗಾರಪ್ಪನವರು ಹೊರಗೆ ಮಾಡಿದ ಭಾಷಣಕ್ಕೆ ಉತ್ತರ ಇಲ್ಲಿ ಸೂಕ್ಷ್ಮವಾಗಿದ್ದರೆ ಸಾಕು.

ಶ್ರೀ ಎಂ. ವೀರಪ್ಪಮೊಯ್ಲಿ : ಇಲ್ಲಾ ಇಲ್ಲಿ ಪ್ರಸ್ತಾಪಕ್ಕೆ ಬಂದಿದೆ. ತಾವು ಮಾತನಾಡದೇ ಇರಬಹುದು ವಿಶ್ವದ ಬಗ್ಗೆ ಪ್ರಸ್ತಾಪಕ್ಕೆ ಬಂದಿದೆ. ಈಗ ನಾನು ಹೇಳುವುದು ಬರೀ ಜನವರಿ 94ಕ್ಕೆ 53 ಕೋಟಿ 85 ಲಕ್ಷ ಸೇಲ್ ವಿಶ್ವದಲ್ಲಿ ಆಗಿದ್ದರೆ ಈಗ ಹಿಂದೆ 13 ಕೋಟಿ 38 ಲಕ್ಷ ಆಗಿದೆ. ನಾವು ಕಂಪೇರ್ ಮಾಡುತ್ತಿದ್ದೇವೆ ಬೇರೆ ಏನೂ ಇಲ್ಲ. ಇದು ಯಾರಿಗೂ ಉತ್ತರ ಕೊಡುವುದು ಅಲ್ಲ ಏಕೆಂದರೆ ಪರ್‌ಫಾರ್ಮೆನ್ಸ್ ಸೈಡ್‌ನಲ್ಲಿ. ವಿಶ್ವ ಇವತ್ತು ಬರೀ ಕಾಗದದಲ್ಲಿ ಇಲ್ಲ. ಕಾಗದದಲ್ಲಿ ಇದ್ದಂತಹ ವಿಶ್ವ ಕಾರ್ಯಕ್ರಮವನ್ನು ಇವತ್ತು ನಾವು ಭೂಮಿಗೆ ಇಳಿಸಿದ್ದೇವೆ. ಅದು ಮುಖ್ಯ ಇವತ್ತು. ಇನ್ನು ನಮ್ಮ ಲಿಬರಲೈಜೇಶನ್ ಪಾಲಿಸಿ ಏನು ಇದೆ ಅದರ ಬಗ್ಗೆ ಏನು ಅಭಿವೃದ್ಧಿ ಸಾಧನೆ ಮಾಡಿದ್ದೇವೆ ಎನ್ನುವುದನ್ನು ಬಹುಶಃ ನಾನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇದರ ಬಗ್ಗೆ ಸಾಕಷ್ಟು ಕಾರ್ಯಕ್ರಮಗಳು ಬಂದಿದೆ.

ಶ್ರೀ ಎನ್.ಜಿ. ನಾಯಕ್ : ಮಾನ್ಯ ಅಧ್ಯಕ್ಷರೇ ವಿರೋಧಪಕ್ಷದ ನಾಯಕರು ವಿಶ್ವದಲ್ಲಿ ಏನೂ ಪ್ರಗತಿ ಆಗಿಲ್ಲ ಅಂತ ಹೇಳಿದರು. ಈಗ ಅಂಕಿಅಂಶಗಳನ್ನು ಕೊಟ್ಟಿದ್ದಾರೆ ಈಗಲಾದರೂ ಒಪ್ಪುತ್ತೀರಾ?

ಶ್ರೀ ಬಿ.ಎಚ್. ಬನ್ನಿಕೋಡ್ : ನಿಮ್ಮ ಹಿಂದಿನ ಮುಖ್ಯಮಂತ್ರಿಯನ್ನು ಕೇಳಿ ಅವರಿಗೆ ಒಪ್ಪಿಸಿ.

ಶ್ರೀ ಎಂ. ವೀರಪ್ಪಮೊಯಿಲಿ : ಇವತ್ತು ಆರ್‌ಬಿಐ ಬಿಲಿಟಿನ್ ಪ್ರಕಾರವೇ ಮಹಾರಾಷ್ಟ್ರ ಗುಜರಾತ್ ಬಿಟ್ಟರೆ ಕಾರ್ಪೊರೇಟ್ ಇನ್‌ವೆಸ್ಟಮೆಂ ಪ್ರೊಫೈಲೋನಲ್ಲಿ ಕರ್ನಾಟಕಕ್ಕೆ 3ನೇ ಸ್ಥಾನ ಇವತ್ತು ಬಂದಿದೆ. ಇನ್‌ವೆಸ್ಟ್‌ಮೆಂಟ್ ಪ್ರೊಫೈಲ್‌ನಲ್ಲಿ ಸುಮಾರು 20 ಸಾವಿರ ಕೋಟಿ ರೂಪಾಯಿಗಳ ಬಂಡವಾಳವನ್ನು ಕೈಗಾರಿಕೆಗಳಲ್ಲಿ ಹೂಡತಕ್ಕಂಥ ಎಲ್ಲಾ ರೀತಿಯ ಕಾರ್ಯಕ್ರಮ ಕಮಿಟ್‌ಮೆಂಟ್ ಇವತ್ತು ಆಗಿದೆ. ಹೊಸಪೇಟೆ ಮತ್ತು ವಿಜಯನಗರ ಸ್ಟೀಲ್ ಪ್ಲಾಂಟ್ 25 ವರ್ಷಗಳಿಂದ ಬಹಳ ನೆನೆಗುದಿಗೆ ಬಿದ್ದಿದ್ದು ಈಗ ಮೆ: ಜಿಂದಾಲ್ ಕಂಪನಿಯವರು ಅಗ್ರಿಮೆಂಟ್ ಮಾಡಿ ಕೆಎಸ್‌ಐಡಿಸಿ ಜೊತೆ ಅದನ್ನು ಇಂಪ್ಲಿಮೆಂಟ್ ಮಾಡತಕ್ಕಂಥಾ ಕಾರ್ಯಕ್ರಮ ಇವತ್ತು ಮಾಡುತ್ತಾ ಇದ್ದೇವೆ ಇದನ್ನು ಲೇಟೆಸ್ಟ್ ಟೆಕ್ನಾಲಜಿ ಇದನ್ನು ಮಾಡಿ ಅಲ್ಲಿ ಪವರ್ ಪ್ಲಾಂಟ್ ಕೂಡ ಮಾಡಬೇಕೆಂದು ಹೇಳಿ ಸುಮಾರು 4200 ಕೋಟಿ ರೂಪಾಯಿಯಲ್ಲಿ ಈ ಯೋಜನೆ ಜಾರಿಗೆ ಬರುತ್ತಾ ಇದೆ. ಇನ್ನೊಂದು ಸ್ಟೀಲ್ ಪ್ಲಾಂಟ್ ಕೂಡ ಅದೇ ಸ್ಥಳದಲ್ಲಿ ವಿಜಯನಗರದಲ್ಲಿ ಬರತಕ್ಕಂಥಾ ಕಾರ್ಯಕ್ರಮ ಕೂಡ ಇವತ್ತು ಬರುತ್ತಾ ಇದೆ. ಮತ್ತೆ ಇನ್‌ಸೆಂಟೀವ್ ಬಗ್ಗೆ ನಾವು ಬಹಳ ಬ್ಯಾಕ್‌ಲಾಗ್ ಇತ್ತು. ಸಬ್ಸಿಡೀಸ್ ಇದೆಲ್ಲಾ ಬಹಳ ಪೆಂಡಿಂಗ್ ಇತ್ತು ಈಗ ನಾವು ಮೊದಲನೇ ಸಲ ಈ 93-94ರಲ್ಲಿ ನಾವು ಏನು ಮಾಡಿದ್ದೇವೆಂದು ಹೇಳಿದರೆ ಡಬ್ಬಲ್ ಅಲೋಕೇಶನ್ಸ್ ಈ ಇನಸೆಂಟೀವ್ಸ್‌ಗೆ ಕೊಟ್ಟಿದ್ದೇವೆ. ಏಕೆಂದರೆ ಈ ಬಗ್ಗೆ ಜನಗಳಲ್ಲಿ ಹತಾಶೆ ಭಾವನೆ ಬರಬಾರದು ಎಂಬ ಕಾರ್ಯಕ್ರಮವನ್ನು ನಾವು ವಿಶೇಷವಾಗಿ ತೆಗೆದುಕೊಂಡಿದ್ದೇವೆ. ನಾನು ತಮಗೆ ಬಹಳ ಸಂತೋಷದಿಂದ ಹೇಳಬೇಕೆಂದರೆ ಮೊದಲನೇ ಸಲ 7 ಸಕ್ಕರೆ ಕಾರ್ಖಾನೆಗಳನ್ನು ಕರ್ನಾಟಕ ರಾಜ್ಯದಲ್ಲಿ ಸ್ಥಾಪನೆ ಮಾಡಲಿಕ್ಕೆ ನಮಗೆ ಕೇಂದ್ರದವರು ಅನುಮತಿ ಕೊಟ್ಟಿದ್ದಾರೆ. ಅದರಲ್ಲಿ 4 ಬಿಜಾಪುರದಲ್ಲಿ 2 ಬೀದರ್‌ನಲ್ಲಿ 1 ಬೆಳಗಾಂನಲ್ಲಿ ಅದರಲ್ಲಿ 6 ಕಾರ್ಖಾನೆಗಳು ಸಹಕಾರಿ ಕ್ಷೇತ್ರದಲ್ಲಿವೆ ಬಹುಶಃ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ 7 ಸಕ್ಕರೆ ಕಾರ್ಖಾನೆಗಳನ್ನು ಮಂಜೂರು ಮಾಡಿದ್ದು ಇದೇ ಮೊದಲು. ಯಾವಾಗಲೂ ಒಂದು ಎರಡು ಬಹಳ ಕಷ್ಟಕ್ಕೆ ಮಂಜೂರಾತಿ ಆಗುತ್ತಾ

ಇತ್ತು ಇದು ಒಳ್ಳೆಯ ಸೂಚನೆಗಳು ಇವತ್ತು ಬರುತ್ತಾ ಇವೆ. ಆದ್ದರಿಂದ ಇವತ್ತು ವಿಶೇಷವಾಗಿ ಈ ಕೈಗಾರಿಕಾ ದೃಷ್ಟಿಯಲ್ಲಿ ಒಳ್ಳೆಯ ವಾತಾವರಣ ಇವತ್ತು ಆಗುತ್ತಾ ಇದೆ.

ಮಾನ್ಯ ಸದಸ್ಯರಾದ ಬೈರೇಗೌಡರು ಪಬ್ಲಿಕ್ ಸೆಕ್ಟಾರ್ ಬಗ್ಗೆ ಅದರಲ್ಲೂ ಎನ್‌ಜಿಇಎಫ್ ಬಗ್ಗೆ ಹೇಳಿದ್ದೀರಿ. ಎನ್‌ಜಿಎಫ್‌ನವರು ಒಂದು ನಿರ್ಣಯ ತೆಗೆದುಕೊಂಡಿದ್ದಾರೆ ಅದು ಸರ್ಕಾರದ ಗಮನದಲ್ಲಿ ಇದೆ. ನಾವು ಅದರ ಬಗ್ಗೆ ಇನ್ನು ಕೂಡ ಏನೂ ನಿರ್ಣಯ ತೆಗೆದುಕೊಂಡಿಲ್ಲ ಸರ್ಕಾರ. ಆದರೆ ಒಂದು ವಿಚಾರ ಹೇಳುವುದಕ್ಕೆ ನಾನು ಅಪೇಕ್ಷೆಪಡುತ್ತೇನೆ. ಅದು ಏನೆಂದರೆ ನಾವು ಎನ್‌ಜಿಇಎಫ್‌ನ್ನು ಮಾರತಕ್ಕಂಥ ಒಂದು ಪ್ರಸ್ತಾವನೆ ನಮ್ಮ ಸರ್ಕಾರದ ಮುಂದೆ ಇಲ್ಲ. We are not selling any shares. We are not going to sell the property. Company is raising funds by increasing its equity base. They are not raising any shares. ಆಮೇಲೆ ಈಗ ಪ್ರೆಸೆಂಟ್ ಷೇರು ಹೋಲ್ಡರ್ಸ್ ಏಕೆಂದರೆ ನಮಗೆ ಹಣ ಬೇಕು ಬಂಡವಾಳ ಬೇಕಾಗುತ್ತದೆ ಬಂಡವಾಳ ಇಲ್ಲದೆ ಕೈಗಾರಿಕೆ ನಡೆಸಲಿಕ್ಕೆ it will become sick.

ಮುಂದೆ ತಮಗೆ ಗೊತ್ತಿದೆ. ಬಿಐಎಫ್‌ಆರ್‌ಗೆ ಹೋದರೆ ಆಮೇಲೆ ನಮ್ಮ ಕೈ ತಪ್ಪಿ ಹೋಗುತ್ತದೆ ಕೈಗಾರಿಕೆ. ಅದನ್ನು ತಪ್ಪಿಸಬೇಕು ಇವತ್ತು.

ಬಿಐಎಫ್‌ಆರ್‌ಗೆ ಹೋಗುವುದನ್ನು ತಪ್ಪಿಸಿ ಕೈಗಾರಿಕೆಯನ್ನು ನಮ್ಮ ಅಧೀನದಲ್ಲಿಟ್ಟುಕೊಳ್ಳಬೇಕು. 51 ಪರ್ಸೆಂಟ್ ನಾವಿಟ್ಟು ಕೊಳ್ಳುತ್ತೇವೆ. ಸರೆಂಡರ್ ಮಾಡುವುದಿಲ್ಲ ಅದನ್ನು. ಯಾರಿಗೆ ಕೊಡಬೇಕು, ಯಾರು ಬಂಡವಾಳ ಹೂಡಿಸಬೇಕು, ಪ್ರೆಸೆಂಟ್ ಶೇರ್ ಹೋಲ್ಡರ್ಸ್ ಬಂಡವಾಳ ಹಾಕುವುದಿದ್ದರೆ ಸರಿ ಹಾಕದಿದ್ದರೆ ನಾವು ಯಾರಿಂದ ಈ ಈಕ್ವಿಟಿಬೇಸನ್ನು ಮಾಡಲಿಕ್ಕೆ ಸಾಧ್ಯವಿದೆ ಎಂಬುದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಎನ್‌ಜಿಇಎಫ್‌ನ ಆಡಳಿತಮಂಡಲಿಯವರು ನಮಗೆ ಸಲಹೆ ಕೊಟ್ಟಿದ್ದಾರೆ, ಬಿಪಿಎಲ್ ಮತ್ತು ಎಬಿಬಿ ಇಬ್ಬರೂ ಪ್ರಪೋಸಲ್ಸ್ ಕೊಟ್ಟಿದ್ದಾರೆ. ಅದು ಇನ್ನೂ ಪೊಲಿಟಿಕಲ್ ಅಫೇರ್ಸ್ ಕಮಿಟಿಯಲ್ಲಿದೆ, ಕ್ಯಾಬಿನೆಟ್‌ಗೆ ಇನ್ನೂ ಬರಬೇಕಾಗಿದೆ. ತಾವು ಕೆಲವು ವಿಚಾರ ಸೂಚನೆ ಮಾಡಿದ್ದೀರಿ. ಇದನ್ನು ಯಾರಿಗಾದರೂ ಮಾರುವಂತಹ ಪ್ರಶ್ನೆ ಉದ್ಭವವಾಗುವುದೇ ಇಲ್ಲ, ಅದು ಪಬ್ಲಿಕ್ ಸೆಕ್ಟಾರಾಗೇ ಉಳಿಯುತ್ತದೆ ಅದನ್ನು ಬಲಪಡಿಸಲು ಏನು ಬೇಕೋ ಅದರ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ : 51ಕ್ಕೆ ಇಳಿಸಿದರೆ ಅದರ ನೇಚರೇ ಚೇಂಜಾಗುತ್ತದೆ. ಮೈನಾರಿಟಿ ಶೇರ್‌ಹೋಲ್ಡಿಂಗ್‌ಗೆ ಬಂದ ತಕ್ಷಣ ನೀವು ಸ್ಟಾಟುಟರಿ ಬದಲಾವಣೆ ಮಾಡಬೇಕಾದರೆ ನೀವು ಜೂನಿಯರ್ ಪಾರ್ಟನರ್‌ನ ಇಷ್ಟಕ್ಕೆ ವಿರುದ್ಧವಾಗಿ ಕಂಪೆನಿ ಲಾ ಪ್ರಕಾರ ಮಾಡುವುದಕ್ಕೆ ಆಗುವುದಿಲ್ಲ. ನಿಮ್ಮ ಹೋಲ್ಡಿಂಗ್‌ನ್ನು 51ಕ್ಕಿಟ್ಟುಕೊಂಡು 49 ಅನ್ನು ಬೇರೆಯವರಿಗೆ ಕೊಟ್ಟರೆ ಇವತ್ತಿನ ಸ್ವಾತಂತ್ರ್ಯ ಉಳಿಯುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ನಾನು ಕೊಟ್ಟಿರುವ ಸಲಹೆಯನ್ನು ದಯವಿಟ್ಟು ಒಪ್ಪಿಕೊಂಡರೆ ನೀವು ಬಿಐಎಫ್‌ಆರ್ ಮುಂದೇನೂ ಹೋಗಬೇಕಾಗಿಲ್ಲ ಬೇರೆಯವರಿಗೆ ಶೇರನ್ನು ಮಾರಾಟ ಮಾಡುವ ಅವಶ್ಯತೆ ಕೂಡ ಇಲ್ಲ. ದಯವಿಟ್ಟು ಅದನ್ನು ಆಲೋಚನೆ ಮಾಡಿ.

ಶ್ರೀ ಎಂ.ವೀರಪ್ಪ ಮೊಯ್ಲಿ : ಆಲೋಚನೆ ಮಾಡೋಣ.

ಶ್ರೀ ಸಿ.ಬೈರೇಗೌಡ : ಎರಡೂ ರಿಪೋರ್ಟನ್ನು ತಮಗೆ ಕಳಿಸುತ್ತಿದ್ದೇನೆ. ಇವು ಈ ಸದನದ ಸಮಿತಿಯ ವರದಿ. ಅಂದರೆ ಈ ಸದನದ ವರದಿಯಾಗಿದೆ. ಇದನ್ನು ಸರ್ಕಾರ ಒಪ್ಪಿಕೊಳ್ಳಬೇಕು. ಅಲ್ಲಿ ಅಧಿಕಾರಿಗಳಾಗಿದ್ದವರು ಯಾರ್‍ಯಾರು ಅವ್ಯವಹಾರ ನಡೆಸಿದ್ದಾರೆ ಆ ಕಂಪೆನಿಯ ಅಭಿವೃದ್ಧಿಯನ್ನು ಕಡೆಗಣಿಸಿ ತಮ್ಮ ಸ್ವಾರ್ಥವನ್ನು ಬೇಯಿಸಿ ಕೊಳ್ಳುವಂತಹ ಕೆಲಸ ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ತಾವೇ

ಕೌನ್ಸಿಲ್‌ನಲ್ಲಿ ಹೇಳಿದ್ದೀರಿ. ಕಮಿಶನ್ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆಂದು ಇದೆಲ್ಲ ಕೂಡ ಕತದಲ್ಲಿದೆ. ದಯವಿಟ್ಟು ಕ್ರಮ ತೆಗೆದುಕೊಳ್ಳಿ ಇವನ್ನು ಕಳಿಸಿಕೊಡುತ್ತಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ : 20 ಅಂಶದ ಕಾರ್ಯಕ್ರಮ, ಮುಖ್ಯವಾಗಿ ಬಡತನ ನಿರ್ಮೂಲನ ಕಾರ್ಯಕ್ರಮದಲ್ಲಿ ಇಡೀ ರಾಷ್ಟ್ರದಲ್ಲಿ 8ನೇ ಸ್ಥಾನ, 12 ಸ್ಥಾನಕ್ಕಿದ್ದುದು ಈಗ 4ನೇ ಸ್ಥಾನ ಕರ್ನಾಟಕ ರಾಜ್ಯಕ್ಕೆ ಬಂದಿದೆ, ನವೆಂಬರ್ 93ರ ಅಸಸ್‌ಮೆಂಟ್ ಪ್ರಕಾರ.

ಅದು ಪ್ರೋಗ್ರಾಂ ಇಂಪ್ಲಿಮೆಂಟೇಶನ್‌ನ ಅಸಸ್‌ಮೆಂಟ್. ನಾವಿನ್ನೂ ಟಾಪ್‌ಗೆ ಹೋಗುವ ದಿಸೆಯಲ್ಲಿ ಹೋಗುತ್ತಿದ್ದೇವೆ. We are in the fourth place.

ಇದೇ ಪ್ರಕಾರ ಗ್ರಾಮೀಣ ಜೀವನವನ್ನು ಅಭಿವೃದ್ಧಿ ಮಾಡುವ ದೃಷ್ಟಿಯಲ್ಲಿ ತೆಗೆದುಕೊಂಡ ಕಾರ್ಯಕ್ರಮಗಳ ಪಕ್ಷಿನೋಟವನ್ನು ಈ ಸದನದ ಮುಂದೆ ತರಲಿಕ್ಕೆ ಅಪೇಕ್ಷೆ ಪಡುತ್ತಿದ್ದೇನೆ. 93-94ರಲ್ಲಿ ಡಿಸೆಂಬರ್ 93ರವರೆಗೆ 2401 ಬೋರ್‌ವೆಲ್‌ಗಳನ್ನು ತೋಡಲಾಗಿದೆ. 431 ಪೈಪ್ಡ್ ವಾಟರ್ ಸಪ್ಲೈ ಸ್ಕೀಂ ಕಂಪ್ಲೀಟಾಗಿದೆ. 765 ಮಿನಿ ವಾಟರ್ ಸಪ್ಲೈ ಸ್ಕೀಮನ್ನು ನಾವು ಪೂರ್ತಿ ಮಾಡಿದ್ದೇವೆ. ಇದು ಮಾತ್ರವಲ್ಲದೆ ವಿಶ್ವಬ್ಯಾಂಕಿನ ಸಹಾಯದಿಂದ ರೂರಲ್ ವಾಟರ್ ಸಪ್ಲೈ ಸ್ಕೀಂ 450 ಕೋಟಿ ರೂನ ಯೋಜನೆಯನ್ನು 1200 ಹಳ್ಳಿಗಳಲ್ಲಿ ಅಂದರೆ 12 ಜಿಲ್ಲೆಗಳಲ್ಲಿ ಇದು ಮಂಜೂರಾಗಿದೆ. ಮಾತ್ರವಲ್ಲದೆ ಡ್ಯಾನಿಡಾ ಡಚ್ ಕಾರ್ಯಕ್ರಮಗಳೂ ಭಾಗಿಯಾಗಿ 93-94ರಿಂದ 2000 ಎಡಿವರೆಗೆ 1200 ಕೋಟಿ ರೂಗಳನ್ನು ಬರೀ ಗ್ರಾಮೀಣ ಜೀವನದ ಅಭಿವೃದ್ಧಿ ಬಗ್ಗೆ ನಾವು ಮೀಸಲಾಗಿಟ್ಟು ಖರ್ಚುಮಾಡುವಂತಹ ವಿಶೇಷ ಕಾರ್ಯಕ್ರಮ ಇವತ್ತು ಆಗುತ್ತಿದೆ. ಇದು ಗ್ರಾಮೀಣ ಜೀವನದಲ್ಲಿ ವಿಶೇಷವಾದ ಪರಿವರ್ತನೆ ಆಗತಕ್ಕಂತಹ ರೀತಿಯಲ್ಲಿ ಖಂಡಿತವಾಗಿ ತನ್ನ ಪಾತ್ರ ವಹಿಸುತ್ತದೆ. ರೂರಲ್ ಕಮ್ಯುನಿಕೇಷನ್ ವಿಚಾರವಾಗಿ ವಿವರವನ್ನು ಕೊಡಲಿಕ್ಕೆ ನಾನು ಅಪೇಕ್ಷೆಪಡುವುದಿಲ್ಲ. ಇನ್ನು ಮಲೆನಾಡು ಬೋರ್ಡ್ ಬಗ್ಗೆ ಸಾಕಷ್ಟು ಮಾತುಗಳನ್ನಾಡುತ್ತಿದ್ದೇವೆ. ಭರವಸೆಗಳಿತ್ತು. ಇವತ್ತು ಅನುಷ್ಠಾನದ ದೃಷ್ಠಿಯಿಂದ 93-94ರ ಬಜೆಟ್‌ನಲ್ಲಿ 34 ಕೋಟಿ ರೂಗಳನ್ನು ಕೊಟ್ಟಿದ್ದೇವೆ ಅದರಲ್ಲಿ 2 ಕೋಟಿ ಎಸ್‌ಸಿಪಿ ಇತ್ತು, ಅದರಲ್ಲಿ 20 ಕೋಟಿ ರೂ ಈಗಾಗಲೇ ಬಿಡುಗಡೆ ಮಾಡುತ್ತಿದ್ದೇವೆ. ಉಳಿದ ಹಣವನ್ನೂ ಸದ್ಯದಲ್ಲೇ ಬಿಡುಗಡೆ ಮಾಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಮುಖ್ಯಮಂತ್ರಿಗಳೇ ಬಡ್ಡಿ ಸುಸ್ತಿಬಡ್ಡಿ ಮನ್ನಾ ಮಾಡುವ ಬಗ್ಗೆ ನಿನ್ನೆ ನಮ್ಮನ್ನೆಲ್ಲ ಒಂದು ಸಭೆ ಕರೆದಿದ್ದೀರಿ. ರೈತರ ಮನೆಮಠ ಹರಾಜು ಹಾಕದ ರೀತಿ ಇವತ್ತು ನಾನೇನಾದರೂ ಭರವಸೆ ಕೊಡುತ್ತೇನೆಂದು ಹೇಳಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯ್ಲಿ : ಅಲ್ಲಿಗೆ ಇನ್ನೂ ನಾನು ಬಂದಿಲ್ಲ. ನಾವು ಒಂದು ಹೇಳಿದ್ದೆವು, ಅಥಾರಿಟಿ, ಅಕೌಂಟಬಿಲಿಟಿ ಅಚೀವ್‌ಮೆಂಟ್ ಎಂದು. ಅದರ ಬಗ್ಗೆ ಇಲ್ಲಿ ಕಾಮೆಂಟ್ಸ್ ಬಂದಿದೆ. ಈ ಫೈಲ್ ಡಿಸ್‌ಪೋಸಲ್ ಬಗ್ಗೆ ಕ್ಯಾಬಿನೆಟ್‌ನಲ್ಲಿ ನಾವು ತಾಲೂಕುಮಟ್ಟದವರೆಗೂ ಕಡತ ಡಿಸ್‌ಪೋಸಲ್‌ಬಗ್ಗೆ ವಿಶೇಷವಾಗಿ ಮಾನಿಟರ್ ಮಾಡುತ್ತಿದ್ದು ಸಮೀಕ್ಷೆಕೂಡ ಮಾಡುತ್ತಿದ್ದೇವೆ. ಇದು ಬಹಳ ಆರೋಗ್ಯಕರವಾದ ವಿಶೇಷ ಬೆಳವಣಿಗೆಯಾಗಿದೆ. ನನ್ನಿಂದ ಸೇರಿ, ಎಲ್ಲ ಇಲಾಖೆಯದು ಮತ್ತು ಆಯಾಯಾ ಮಿನಿಸ್ಟರ್ ಮಟ್ಟದಲ್ಲೂ sample check of developmental activities ಮಾಡುತ್ತಿದ್ದೇನೆ. ಎಲ್ಲಾ ಅಡ್ಮಿನಿಸ್ಟ್ರೇಟಿವ್ ಕಾರ್ಯದರ್ಶಿಗಳು ಪ್ರತಿ ತಿಂಗಳಲ್ಲಿ 4 ದಿವಸ ಅವರು ಬೇರೆಬೇರೆ ಪರಿವೀಕ್ಷಣೆ

ಕೂಡ ಮಾಡಬೇಕೆಂದು ನಾವು ಮಾಡಿದ್ದೇವೆ. ಮತ್ತು ಡಿಪಿಎಆರ್‌ನ team of inspecting officers ಅವರು ಬೇರೆಬೇರೆ ಪರಿವೀಕ್ಷಣೆಗಳನ್ನು ಮಾಡಿದ್ದಾರೆ. 93ರಲ್ಲಿ 51 ಅಂತಹ ಪರಿವೀಕ್ಷಣೆಗಳನ್ನು ಡಿಪಿಎಆರ್ ಮಾಡಿದ್ದರು. ಸುಮಾರು 72 ಸರ್‌ಪ್ರೈಸ್ ಪರಿವೀಕ್ಷಣೆಗಳನ್ನು ಬೇರೆ ಬೇರೆ ಹಂತದಲ್ಲಿ ಮಾಡಿದ್ದಾರೆ. ಮತ್ತು self-assessment, evaluation by officers, ಇತ್ಯಾದಿ ಒಂದು ಹೊಸ ಕಾರ್ಯಕ್ರಮನ್ನು ನಾವು ಕೈಗೊಂಡಿದ್ದರಿಂದ ಫೈಲ್ ಡಿಸ್‌ಪೋಸಲ್‌ನಲ್ಲಿ ಸಮೀಕ್ಷೆಯಿಂದ ಬೇರೆ ಬೇರೆ ರೀತಿಯ ಬದಲಾವಣೆ ಮತ್ತು ಪರಿಣಾಮ ನಮಗೆ ಬಂದಿದೆ. Important Cabinet decision. ನಾವು ತೆಗೆದುಕೊಂಡ ಮೇಲೆ ಅವನ್ನು ಇಂಪ್ಲಿಮೆಂಟ್ ಮಾಡತಕ್ಕದ್ದನ್ನು ಪ್ರತಿ ಕ್ಯಾಬಿನೆಟ್‌ನಲ್ಲಿ ನಾವು ರಿವ್ಯೂ ಮಾಡುತ್ತೇವೆ. ಮುಖ್ಯವಾಗಿ transparency in the administration ಬರಬೇಕು ಮತ್ತು ನಮ್ಮಲ್ಲಿ ಯಾವುದೇ ಲೋಪದೋಷ ಇದ್ದರೆ ಅವುಗಳ ಬಗ್ಗೆ ವಿಚಾರಣೆ ನಡೆಸಲು blanket permission to CBI

6.00 ಪಿ.ಎಂ

ಕೋ ಆರೇಟಿವ್ ಲೋನ್‌ಗಳ ಬಗ್ಗೆ ಚರ್ಚೆ ಮಾಡಿದ್ದೇವೆ. ಇದು ಬಹುಶಃ ನಮ್ಮ ಸಂಪನ್ಮೂಲದ ಬಗ್ಗೆ ಒಂದು ಪ್ರಶ್ನೆಯಾದರೆ ಮತ್ತೊಂದು ಕಡೆ ಈ ರೆಕವರಿ ಪಾರ್ಟ್ ಏಕೆಂದರೆ ರೆಕವರಿಯಲ್ಲಿ ಇಡೀ ದೇಶದಲ್ಲಿ ನಾವು ನಾಲ್ಕನೇ ಸ್ಥಾನದಲ್ಲಿದ್ದೇವೆ. ಈ ಸಾಲ ಮನ್ನದ ಬಗ್ಗೆ ಯಾವ ರಾಜ್ಯದಲ್ಲಿ ಕೂಡ ಮಾತನಾಡುತ್ತಿಲ್ಲ. ಬಡ್ಡಿ ಮತ್ತೊಂದು ಇರಬಹುದು. ನಾನು ಇದರ ಬಗ್ಗೆ ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದೇನೆ. ಆದ್ದರಿಂದ ಈ ಬಡ್ಡಿ ಮನ್ನಾ ಆಗಲೀ ಸಾಲ ಮನ್ನಾ ಆಗಲೀ ಇದನ್ನು ನಮ್ಮ ಸರಕಾರ ಮಾಡುವುದಿಲ್ಲ. 13 ಕೋಟಿ ರೂಪಾಯಿ ಸುಸ್ತಿ ಬಡ್ಡಿ ಇದೆ. 31-3-94 ರ ಒಳಗೆ ಸಾಲ ಔಟ್‌ಸ್ಟ್ಯಾಂಡಿಂಗ್ ಬಡ್ಡಿ ಅದನ್ನು ಕೊಟ್ಟರೆ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡತಕ್ಕಂತಹ ಕಾರ್ಯಕ್ರಮವನ್ನು ಮಾತ್ರ ನಾವು ತೆಗೆದುಕೊಳ್ಳುತ್ತೇವೆ. 13 ಕೋಟಿ ನಮ್ಮ ಸರಕಾರಕ್ಕೆ ಬರುತ್ತದೆ.

* ಶ್ರೀ ಆರ್.ವಿ. ದೇಶಪಾಂಡೆ : ಇವರು ಸಹಾಯಧನವೇನೂ ಕೊಡುವುದಿಲ್ಲ. ಬ್ಯಾಂಕ್ಸ್‌ಗಳು ಅಡ್ಜಸ್ಟ್‌ಮೆಂಟ್ ಮಾಡಿಕೊಳ್ಳುತ್ತವೆ. ನಿಮ್ಮ ಕಿಸೆಯಿಂದೇನು ಕೊಡುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಆಗಲೆ ಆದರೆ 13 ಕೋಟಿ ಚಿಲ್ಲರೆ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುತ್ತೇವೆ. ಆದರೆ ಬಡ್ಡಿ ವಿಚಾರದಲ್ಲಾಗಲೀ ಅಸಲು ವಿಚಾರದಲ್ಲಾಗಲೀ ರೈತರ ಸಮೃದ್ಧವಾದ ಬೆಳವಣಿಗೆಯ ದೃಷ್ಟಿಯಿಂದ ಅದನ್ನು ಮನ್ನಾ ಮಾಡತಕ್ಕಂತಹ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುವುದಿಲ್ಲ. ಈ ಕೆಲವು ವಿಚಾರಗಳನ್ನು ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟುದಕ್ಕಾಗಿ ತಮಗೆ ಅನಂತ ವಂದನೆಗಳನ್ನು ಸಮರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : 13 ಕೋಟಿಯನ್ನು ನೀವು ಸೊಸೈಟಿಗಳಿಗೆ ರೀ ಇಂಬರ್ಸ್ ಮಾಡುತ್ತೀರಾ ಅಥವಾ ಸೊಸೈಟೀಸ್‌ಗಳೇ ಕಳೆದುಕೊಂಡು ಹೋಗುತ್ತವಾ? ಅದನ್ನು ಹೇಳಿ. ಸೊಸೈಟಿಗಳೆಲ್ಲಾ ಹಾಳಾಗಿ ಹೋಗುತ್ತವೆ. if you are reimbursing then you will be paying something... ನೀವು ರೀ ಇಂಬರ್ಸ್ ಮಾಡದೇ ವಜಾ ಮಾಡಿದ್ದೇವೆ ಅಂದರೆ who will suffer? ಸೊಸೈಟಿಗಳನ್ನು ಜಿಲ್ಲಾ ಬ್ಯಾಂಕಿನವರು ತೆಗೆದುಕೊಳ್ಳುತ್ತಾರೆ ಪಿಎಲ್‌ಡಿ ಯಿಂದ ಎಸ್‌ಎಲ್‌ಡಿಬಿ ಯವರು ವಸೂಲು ಮಾಡುತ್ತಾರೆ. ಅವರಿಗೆ ಸುಸ್ತಿ ಬಡ್ಡಿಯನ್ನು ಕೊಡಲೇಬೇಕಾಗುತ್ತದೆ. ಇದನ್ನು ರೀ ಇಂಬರ್ಸ್ ಮಾಡುತ್ತೀರಾ ಅದನ್ನು ಹೇಳಿ. ರೈತರ ಬಗ್ಗೆ ಈ ರೀತಿ ಹೇಳಿದರೆ ರೈತರ ಪ್ರತಿನಿಧಿಗಳು ತಾವುಗಳು ಚಪ್ಪಾಳೆ ತಟ್ಟುತ್ತೀರಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಮುಖ್ಯ ಮಂತ್ರಿಗಳು ಎರಡು ವಿಚಾರದಲ್ಲಿ ಸ್ಪಷ್ಟನೆ ನೀಡಬೇಕು. ತಾವು ನಿನ್ನೆ ಎಲ್ಲಾ ವಿರೋಧ ಪಕ್ಷದ ಸದಸ್ಯರ ಸಭೆ ಕರೆದಿದ್ದೀರಿ ಅಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಸಹಕಾರ ಸಚಿವರು ಇಬ್ಬರೂ ಇದ್ದರು ನಾವು ಸಲಹೆ ಕೊಟ್ಟೆವು. ಕಳೆದ 3-4 ವರ್ಷದಲ್ಲಿ ರೈತರು ಬಹಳ ಕಷ್ಟದಲ್ಲಿದ್ದಾರೆ. ಬರಗಾಲ ಅತಿವೃಷ್ಠಿ ನೆರೆ ಹಾವಳಿ ಇದೆ ಅದನ್ನು ಮಾನ್ಯ ಮುಖ್ಯ ಮಂತ್ರಿಗಳೂ ಒಪ್ಪಿಕೊಂಡರು ಸಹಕಾರ ಸಚಿವರೂ ಒಪ್ಪಿಕೊಂಡರು. ಅಲ್ಲಿ ಬೆಳೆ ಹಾಳಾಗಿದೆ ಎಂದು ಒಪ್ಪಿಕೊಂಡ ಮೇಲೆ ಕ್ರಾಪ್ ಕಾಂಪನ್‌ಸೇಷನ್ ಕೊಡುತ್ತಿದ್ದೇವೆಂದು ಸರಕಾರ ಹೇಳುತ್ತದೆ. ಇಂತಹ ಪರಿಸ್ಥಿತಿಯಲ್ಲಿ ನಿಮ್ಮ ಸರಕಾರದ ಮುಂದೆ ಈ ವರದಿಯಿದ್ದಾಗ ನಾವು ಬಡ್ಡಿ, ಚಕ್ರಬಡ್ಡಿ ಮನ್ನಾ ಮಾಡಬೇಕೆಂದು ಕೇಳಿದಾಗ ಮಾನ್ಯ ಮುಖ್ಯಮಂತ್ರಿಗಳು ಸುಸ್ತಿ ಬಡ್ಡಿಯನ್ನು ಅಷ್ಟೇ ಮನ್ನಾ ಮಾಡುತ್ತೇವೆಂದು ಹೇಳಿದರು. ಸುಸ್ತಿ ಬಡ್ಡಿಯನ್ನು ವಜಾ ಮಾಡುತ್ತೀರಿ. ಸರಕಾರದಿಂದ ಈ ಹಣ ಅಪೆಕ್ಸ್ ಬ್ಯಾಂಕ್‌ಗೆ, ಲ್ಯಾಂಡ್ ಬ್ಯಾಂಕ್‌ಗಳಿಗೆ ರೀ ಇಂಬರ್ಸ್ ಮಾಡುತ್ತೀರೋ ಇಲ್ಲವೇ ಅವರೇ ಮಾಡಿಕೊಳ್ಳಲಿ, ಅವರೇ ಅಡ್ಜಸ್ಟ್ ಮಾಡಬೇಕೋ ಈ ಬಗ್ಗೆ ಸ್ಪಷ್ಟವಾದ ಉತ್ತರ ಕೊಡಬೇಕು. ಪುನಃ ನಾನು ರೈತರ ಪರವಾಗಿ ತಮ್ಮಲ್ಲಿ ವಿನಂತಿಸುತ್ತಿದ್ದೇನೆ. ಬಡ್ಡಿ ರಿಯಾಯಾತಿ ಕೊಡುವುದಿಲ್ಲವೆಂದು ಹೇಳುತ್ತಿದ್ದೀರಿ ಇದು ತಪ್ಪು ದಾರಿ. ತಪ್ಪು ಹೆಜ್ಜೆ ಇಟ್ಟಿದ್ದೀರಿ. ರೈತರು ಇದರ ಬಗ್ಗೆ ಕ್ಷಮೆ ಮಾಡುವುದಿಲ್ಲ. ಪುನಃ ಇದರ ಬಗ್ಗೆ ವಿಚಾರ ಮಾಡಿ ಬಡ್ಡಿ ಮನ್ನಾ ಮಾಡಬೇಕೆಂದು ಒತ್ತಾಯಿಸುತ್ತೇನೆ. 1991ರಲ್ಲಿ ಕಾವೇರಿ ನೀರಿನ ಹಂಚಿಕೆ ವಿಚಾರದಲ್ಲಿ ಏನು ಗಲಭೆಯಾಗಿತ್ತು, ಗಲಾಟೆಗಳಾಗಿತ್ತು ಅದರ ಬಗ್ಗೆ ತನಿಖೆ ಮಾಡಲು ಜಸ್ಟೀಸ್ ವೆಂಕಟೇಶ ಕಮಿಷನ್ ಅನ್ನು ನೇಮಕ ಮಾಡಿದಿರಿ ಅವರ ವರದಿ ಬಂದು ಎಷ್ಟೋ ತಿಂಗಳಾಯಿತು ಆದರೆ ಆ ವರದಿಯನ್ನು ಇವತ್ತೂ ಸದನದ ಮುಂದೆ ಇಟ್ಟಿಲ್ಲ. ಅದರ ಬಗ್ಗೆ ಏನಾಯಿತೆಂದು ಗೊತ್ತಾಗಲಿಲ್ಲ. ಉತ್ತರ ಕೊಡ ಕೊಟ್ಟಿಲ್ಲ. ತಮ್ಮ ಸರಕಾರದ ಮೇಲೆ ಟೀಕೆ ಮಾಡಿರಬಹುದು ಅಥವಾ ಸಲಹೆ ಕೊಟ್ಟಿರಬಹುದು ನನಗೆ ಗೊತ್ತಿಲ್ಲ. ಕಾಲಿ ವರದಿಯನ್ನು ನಾಡಿನ ಜನ ಕಾತುರದಿಂದ ಅದರಲ್ಲಿ ಏನು ಇದೆ ಎಂದು ತಿಳಿದುಕೊಳ್ಳುವ ಇಚ್ಛೆಯಿಂದಿದ್ದಾರೆ. ಇದನ್ನು ಯಾವಾಗ ಸದನದ ಮುಂದಿಡುತ್ತೀರಿ ಹಾಗಾಗಿ ಆ ವರದಿಯನ್ನು ಸಹಾ ಯಾವಾಗ ಸದನದ ಮುಂದೆ ಇಡುತ್ತೀರಿ?

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಸನ್ಮಾನ್ಯ ಸಭಾಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಬರಗಾಲ ಬೆಳೆ ಹಾಳಾದಾಗ ಆಗಿರುವುದರಿಂದ ನಷ್ಟದಿಂದ ಸಾಲ ಬಂದಿದೆ ರೈತರಿಗೆ ಎಂದು ಮಾತನಾಡುತ್ತಿದ್ದರು. ಅದೇನು ಅಂಥ ಮುಖ್ಯ ಕಾರಣವಲ್ಲ. ಬೆಲೆ ಹಾಳಾದಾಗ ಬೆಲೆಯನ್ನು ಸರ್ಕಾರವೇ ಹಾಳು ಮಾಡಿದಾಗ ಆಗುವ ನಷ್ಟವನ್ನು ಯಾರು ತುಂಬುತ್ತಾರೆ ಎನ್ನುವುದು ನಮ್ಮ ಪ್ರಶ್ನೆ. ಬೆಲೆ ಹಾಳಾದಾಗ ಹೋದವಾರ ಹತ್ತಿ ರಫ್ತನ್ನು ಸರ್ಕಾರ ಬಂದ್ ಮಾಡಿದೆ. ಅವಶ್ಯಕತೆ ಇಲ್ಲದಿದ್ದರೂ ಹತ್ತಿಯನ್ನು ಆಮದು ಮಾಡಿಕೊಳ್ಳುತ್ತಿದೆ. ಕಳೆದ 2400 ರೂಪಾಯಿ ಇದ್ದದ್ದು ಈ ವಾರ 1800 ರೂಪಾಯಿ ಆಗಿದೆ. ಈ ಬೆಲೆಯನ್ನು ಹಾಳು ಮಾಡುವುದಕ್ಕೆ ಸರ್ಕಾರವೇ ಕಾರಣ. ಇದರಿಂದಾಗುವ ನಷ್ಟವನ್ನು ಯಾರು ತುಂಬುತ್ತಾರೆ. ಬಡ್ಡಿ ಸುಸ್ತಿ ಬಡ್ಡಿ ಅಲ್ಲ. ಅದು ಬಹಳ ಸಣ್ಣ ಸಮಸ್ಯೆ. ಕಳೆದ ತಿಂಗಳು ಎರಡು ಲಕ್ಷ ಟನ್ ಪಾಮಾಯಿಲ್‌ನ್ನು ನಮ್ಮ ಸರ್ಕಾರ ಆಮದು ಮಾಡಿಕೊಂಡಿದೆ. ಆ ತಕ್ಷಣ ಶೇಂಗಾ ಎಣ್ಣೆ ಬೆಲೆ ಬಿದ್ದುಹೋಗಿದೆ. ಶೇಂಗಾ ಬೆಲೆ ಬಿದ್ದುಹೋಗಿದೆ. ಈ ರೀತಿ ಕೇಂದ್ರ ಸರ್ಕಾರವೇ ಬೆಲೆಯನ್ನು ಹಾಳು ಮಾಡಿದಾಗ ಬೆಲೆ ಹಾಳು ಮಾಡಿ ಆಗಿರುವಂಥ ನಷ್ಟವನ್ನು ಯಾರು ತುಂಬುತ್ತಾರೆ? ಇದು ನಮ್ಮ ಮುಖ್ಯವಾದ ಪ್ರಶ್ನೆ. ಯಾರು ತುಂಬಬೇಕು. ಅದಕ್ಕೆ ನಾನು ಹೇಳಿದ್ದು ರೈತ ಅಲ್ಲ ಸಾಲಗಾರ, ಸರ್ಕಾರದ ನೀತಿಯಿಂದ ಏನು

ಈ ಕೃತಕ ಸಾಲ ಸೃಷ್ಟಿಯಾಗಿದೆ, ಅದನ್ನು ಸರ್ಕಾರವೇ ತೀರಿಸಿಕೊಳ್ಳಬೇಕು. ಇದರ ಬಗ್ಗೆ ಏನು ಹೇಳುತ್ತೀರಿ? ಹೇಳಿ ಇದಕ್ಕೆ ಯಾರು ಜವಾಬ್ದಾರರು? ಯಾರೂ ಕೇಳುತ್ತಿಲ್ಲ, ವಿರೋಧ ಪಕ್ಷದ ನಾಯಕರಿಗೂ ಬೇಕಾಗಿಲ್ಲ, ಸಭಾನಾಯಕರಿಗೂ ಬೇಕಾಗಿಲ್ಲ. What is this? What are you doing both of you-leader of the House and the Leader of the Opposition...

Sri R.V. Deshapande : Mr. Ghorpade is asking me whether Panchayat Raj Bill will be taken up for discussion. I am saying I don't know about it.

Prof M.D. Nanjunda Swamy : You cannot do that when a Member is speaking.

Sri R.V. Deshapande : You need not address me. You tell the Speaker whatever you want to say. You don't show your extra intelligence.

Prof : M.D. Nanjundaswamy : I know, I need not learn from you. I expect discipline not only from the leader of the House but also from the leader of the Opposition. I expect discipline.

Sri R.V. Deshapande : I am disciplined.

Prof : M.D. Nanjundaswamy : You are not...

Sri R.V. Deshapande : Because the Panchayat Raj Minister asking me.

Proj M.D. Najundaswamy : You are not... ಮುಖ್ಯವಾದ ವಿಷಯವನ್ನು ನಾನು ಮಾತನಾಡುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ : ನೀವು ಮಾತನಾಡಿದಷ್ಟೇ ಮುಖ್ಯವಲ್ಲ. ಎಲ್ಲರೂ ಮಾತನಾಡಿದ್ದು ಮುಖ್ಯ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಹೌದು. ನೀವು ಮಾತನಾಡುವಾಗ ನಾನು ಆ ರೀತಿ ಬಿಹೇವ್ ಮಾಡುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ನೀವೇನು ಸರ್ವಜ್ಞರಲ್ಲ. ಎಲ್ಲರೂ ಮಾತನಾಡಿದ್ದು ಮುಖ್ಯ ಇದೆ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ನೀವು ಮಾತನಾಡುವಾಗ ಅಥವಾ ಯಾರೇ ಮಾತನಾಡುವಾಗ ನಾನು ಆ ರೀತಿ ನಡೆದುಕೊಂಡಿಲ್ಲ. ಯಾವತ್ತಾದರೂ ನಾನು ಅಶಿಸ್ತಿನಿಂದ ನಡೆದುಕೊಂಡಿದ್ದೇನಾ?

Sri R.V. Deshapande : I have not interfered, I never interfered when you are talking. After all when the Senior Minister asked me.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಏನು ಸೀರಿಯಸ್?

ಉಪಾಧ್ಯಕ್ಷರು : ಮಾನ್ಯ ನಂಜುಂಡಸ್ವಾಮಿಯವರೇ, ತಾವು ಮುಂದುವರಿಸಿ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಉಪಾಧ್ಯಕ್ಷರೇ, ಯಾರೇ ಸದಸ್ಯರು ಮಾತನಾಡುವಾಗಲೂ ಕನಿಷ್ಟ ಸಭಾನಾಯಕರು ಹಾಜರಿದ್ದಾಗ ಗಮನ ಕೊಡಬೇಕು. ವಿರೋಧ ಪಕ್ಷ ಕೂಡ ಅವರ ಮರ್ಯಾದೆ ಉಳಿಸಿಕೊಳ್ಳುವುದಕ್ಕೋಸ್ಕರ ಎಲ್ಲ ಸದಸ್ಯರ ಮರ್ಯಾದೆಯನ್ನು ಕಾಪಾಡಬೇಕು. ನಾನು ಮಾತನಾಡುತ್ತಿದ್ದುದು ಬೆಲೆ ಹಾಳಾದಾಗ ಬೆಲೆಯನ್ನು ಸರ್ಕಾರವೇ ಹಾಳು ಮಾಡಿದಾಗ ಆಗುವ ನಷ್ಟವನ್ನು

ಯಾರು ತುಂಬುತ್ತಾರೆ ಎಂದು ಕೇಳಿದೆ. ತಾವು ಕೇಳಿಸಿಕೊಳ್ಳಲಿಲ್ಲ, ನಿಮ್ಮ ಸರ್ಕಾರವೇ ಹೋದವಾರ ಹತ್ತಿ ರಫ್ತನ್ನು ಬಂದ್ ಮಾಡಿದೆ. ಬೇಕಿಲ್ಲದಿದ್ದರೂ ಹತ್ತಿಯನ್ನು ಆಮದು ಮಾಡಿಕೊಳ್ಳುತ್ತಿದೆ. ಹೋದವರ್ಷ ಕೂಡ ಇದೇ ಆಗಿದ್ದು. 17 ಲಕ್ಷ ಟನ್ ಗೋಧಿ ನಮಗೆ ಬೇಕಿರಲಿಲ್ಲ, ಸಾಕಷ್ಟು ಬೆಳೆದಿದ್ದರು ಪಂಜಾಬ್ ರೈತರು. ಕೇಂದ್ರ ಸರ್ಕಾರ ಆದರೂ ಆಮದು ಮಾಡಿಕೊಂಡರು. ಅದರಿಂದ ಅಕ್ಕಿ ಬೆಲೆ ಭತ್ತದ ಬೆಲೆ ಬಿದ್ದುಹೋಯಿತು. ಇದರಿಂದ ಆಗುವ ನಷ್ಟವನ್ನು ಯಾರು ಭರ್ತಿ ಮಾಡುತ್ತಾರೆ? ಆ ಕಾರಣ ಬಡ್ಡಿ ರದ್ದು, ಸುಸ್ತಿ ಬಡ್ಡಿ ರದ್ದು ಅದರಿಂದ ಏನೂ ಪ್ರಯೋಜನವಾಗುವುದಿಲ್ಲ, ಬೆಲೆಯನ್ನು ನೀವು ಏನಾದರೂ ವೈಜ್ಞಾನಿಕವಾಗಿ ರಕ್ಷಣೆ ಮಾಡುವಂಥ ವ್ಯವಸ್ಥೆ ಮಾಡುತ್ತೀರಾ? ಆಲೋಚನೆ ಮಾಡಿ. ಇಲ್ಲದಿದ್ದರೆ ಈ ವರ್ಷವೇ ಇದಾಗಿದೆ, ಇನ್ನು ಮುಂದಿನ ವರ್ಷದಿಂದ 90 ಲಕ್ಷ ಟನ್ ಆಹಾರವನ್ನು ಆಮದು ಮಾಡಿಕೊಳ್ಳುತ್ತದೆ ಕೇಂದ್ರ ಸರ್ಕಾರ. ಇವತ್ತು ಹೇಳುತ್ತಿದ್ದೇನೆ ನಿಮಗೆ, ಎರಡು ಲಕ್ಷ ಟನ್ ಪಾಮಾಯಿಲ್ ಬಂದಿರತಕ್ಕ ಕೊಬ್ಬರಿ ಎಣ್ಣೆ ಬೆಲೆ, ಕೊಬ್ಬರಿ ಬೆಲೆ, ತೆಂಗಿನ ಕಾಯಿಯ ಬೆಲೆ, ಶೇಂಗಾ ಬೆಲೆ ಇಳಿದಿದೆ. ಹತ್ತಿ ಆಮದು ಮಾಡಿಕೊಂಡು ಹತ್ತಿ ಬೆಲೆ, ರೇಷ್ಮೆಯನ್ನು ಆಮದು ಮಾಡಿಕೊಂಡು ರೇಷ್ಮೆ ಬೆಲೆ ಇಳಿದಿದೆ. ಇನ್ನು ಈ ವರ್ಷ 90 ಲಕ್ಷ ಟನ್ ಆಮದು ಮಾಡಿಕೊಳ್ಳುತ್ತಾರೆ. ಆಗ ನಿಮಗೆ ಏನು ವಸೂಲಾತಿಯಾಗುತ್ತದೆ ಎಂಬುದರ ಬಗ್ಗೆ ಸಹಕಾರಿ ಮಂತ್ರಿಗಳು ಸ್ವಲ್ಪ ಆಲೋಚನೆ ಮಾಡಿ. ಇನ್ನು ಈ ವರ್ಷ 90 ಲಕ್ಷ ಟನ್ ಆಮದು ಮಾಡಿಕೊಳ್ಳುತ್ತಾರೆ ಆಗ ನಿಮಗೆ ಏನು ವಸೂಲಾತಿ ಆಗುತ್ತದೆ ಎಂದು ಸಹಕಾರ ಮಂತ್ರಿಗಳು ಸ್ವಲ್ಪ ಆಲೋಚನೆ ಮಾಡಿ. ಬಡ್ಡಿ ಸುಸ್ತಿಬಡ್ಡಿ ರದ್ದು ಮಾಡುತ್ತೇವೆ ಎಂದು ಸುಮ್ಮನೆ ಯಾಕೆ ದೊಡ್ಡ ಘೋಷಣೆ ಇದರಿಂದೇನೂ ಸಮಸ್ಯೆ ಪರಿಹಾರ ಆಗುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷರೇ 89ನೇ ಇಸವಿ ಚುನಾವಣೆ ಸಂದರ್ಭದಿಂದಲೂ ಇದು ಸ್ವತಃ ಕಾಂಗ್ರೆಸ್‌ನವರು ಹೇಳಿಕೊಂಡು ಬಂದಿರೋದು. ಆಗ ಸ್ಪಷ್ಟಮಾಡಿದರು ತಾವು ಕೇಂದ್ರಕ್ಕೆ ಕಳಿಸುತ್ತೇವೆ, ಸಾಲ ಮನ್ನಾ ಮಾಡುತ್ತೇವೆಂದು ನಾವು ಹೇಳಲಿಲ್ಲ ಎಂದು ಹೇಳಿದರು. 1989ರಿಂದ ಮೂರು ಮುಖ್ಯಮಂತ್ರಿಗಳಾದರೂ ಕೂಡ ಇದೇ ಫಜೀತಿಯಾಗಿದೆ ರೈತರಿಗೆ. ಈ ಮಧ್ಯೆ ಹಿಂದಿನ ಮುಖ್ಯಮಂತ್ರಿಗಳಾಗುವ ಮುಂಚೆ ಹೇಳಿಕೊಂಡರು. ಮುಖ್ಯ ಮಂತ್ರಿಯಾದಾಗ ಆಗುವುದಿಲ್ಲ ಎಂದು ಹೇಳಿದರು. ಈಗ ಇಡೀ ರಾಜ್ಯದಲ್ಲಿ ಡಂಗೂರ ಸಾರುತ್ತ ಬರುತ್ತಿದ್ದಾರೆ ಸಾಲ ಮನ್ನಾ ಮಾಡಲು ನನಗೆ ಕೊಡಲಿಲ್ಲ ಎಂದು ಹೇಳಿದರು. ನಿನ್ನೆ ವಿರೋಧಪಕ್ಷದವರ ಎಲ್ಲ ನಾಯಕರನ್ನು ಕರೆದಾಗ ಸನ್ಮಾನ್ಯ ಮುಖ್ಯಮಂತ್ರಿಗಳೇ ಸ್ಪಷ್ಟ ಮಾಡಿದ್ದಾರೆ, ತೊಂದರೆ ಇದೆ, ಖಂಡಿತ ಆ ಕಡೆ ನಾನು ಗಮನ ಕೊಡುತ್ತೇನೆಂದು ಹೇಳಿದ್ದಾರೆ. ಈಗ ಹೇಳುತ್ತಿದ್ದಾರೆ ನಾನು ಬರೀ ಸುಸ್ತಿ ಬಡ್ಡಿ ಮಾತ್ರ ಮನ್ನಾ ಮಾಡುತ್ತೇನೆ, ಬೇರೆ ಏನನ್ನೂ ಮಾಡುವುದಕ್ಕಾಗುವುದಿಲ್ಲ ಎಂದು. ನಿನ್ನೆ ವಿರೋಧಪಕ್ಷದ ಸಭೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ, ಬಲಾತ್ಕಾರ ಸಾಲ ವಸೂಲಿಯಾಗುತ್ತಿದೆ, ಪಾತ್ರೆಪಡಗ ಹರಾಜು ಆಗುತ್ತಿದೆ. ಕೆಲವು ಭಾಗದಲ್ಲಿ ಬತ್ತವನ್ನೇ ಸೀಜ್ ಮಾಡಿದ್ದಾರೆ. ಹಾಗೆ ಸೀಜ್ ಮಾಡಿರುವ ಬತ್ತವೆಲ್ಲ ಹಾಳಾಗಿದೆ ಎಂದು, ಇಂತಹ ಸಂಪೂರ್ಣ ರೈತರ ಕಷ್ಟವೆಲ್ಲ ಮುಖ್ಯಮಂತ್ರಿಗಳಿಗೆ ಗೊತ್ತಿದೆ. ನಿನ್ನೆ ವಿರೋಧಪಕ್ಷದವರ ಜೊತೆ ಮಾತನಾಡುವಾಗ ತುಂಬಾ ಕಳಕಳಿಯಿಂದ ಹೇಳಿದ್ದಾರೆ. ಈಗ ನೋಡಿದರೆ ಖಡಾಖಂಡಿತವಾಗಿ ಒಂದು ರೀತಿ ಕಡ್ಡಿಮುರಿದಂತೆ ಹೇಳುತ್ತಿದ್ದಾರೆ. ಸುಸ್ತಿ ಬಡ್ಡಿ ಮನ್ನಾ ಮಾತ್ರ ಮಾಡುತ್ತೇನೆ. ಬೇರೆ ಏನೂ ಮಾಡುವುದಕ್ಕಾಗುವುದಿಲ್ಲ ಎಂದು. ಮುಖ್ಯಮಂತ್ರಿಗಳಿಗೆ ಎಲ್ಲಾ ಸಮಸ್ಯೆ ಗೊತ್ತಿರುವಂಥದೇ. ನೆರೆಹಾವಳಿ ಬಗ್ಗೆ ಭೂಕಂಪದ ಬಗ್ಗೆ ಗೊತ್ತಿದೆ. ನಂಜುಂಡಸ್ವಾಮಿಯವರು ಹೇಳಿದಂತೆ ರೈತರು ಬೆಳೆದ ಬೆಳೆಗೆ ದಿನೇ ದಿನೇ ರೇಟ್ ಇಳಿಯುತ್ತಿದೆಯೇ ವಿನಾ ಬೇರೇನೂ ಇಲ್ಲ, ಅವನು

ಸಾಯುವಂತಹ ಸ್ಥಿತಿಯಲ್ಲಿ ಇರುವಾಗ, ಇಷ್ಟು ಕಠೋರವಾಗಿ ರೈತರ ಕುರಿತು ಅವರ ತೀರ್ಮಾನದಿಂದ ಅವರ ಶಾಪಕ್ಕೆ ಬಲಿಯಾಗಬೇಕಾಗುತ್ತದೆ. ಈ ರಾಜ್ಯದಲ್ಲಿ ರೈತರ ಶಾಪಕ್ಕೆ ಮುಖ್ಯ ಮಂತ್ರಿಗಳು ಬಲಿಯಾಗಬೇಕಾಗುತ್ತದೆ ಅದಕ್ಕಾಗಿ ನಾನು ಮತ್ತೊಮ್ಮೆ ಮುಖ್ಯಮಂತ್ರಿಗಳಿಗೆ ಹೇಳಬಯಸುತ್ತೇನೆ.

ಕೇವಲ ಸುಸ್ತಿ ಬಡ್ಡಿ ಮನ್ನಾ ಮಾಡಿದರೆ ನಿಮ್ಮ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಒಂದು ಪೈಸೆ ಕೂಡ ನಷ್ಟವಾಗುವುದಿಲ್ಲ, ಸಂಬಂಧಪಟ್ಟವರೇ ಆ ಬಡ್ಡಿಯನ್ನು ತುಂಬಿಕೊಡುತ್ತಾರೆ. ನೀವು ಏನು ಮಾಡಿಕೊಟ್ಟ ಹಾಗಾಯಿತು? ಅದಕ್ಕಾಗಿ ಇಡೀ ರಾಜ್ಯದ ರೈತರ ಪರವಾಗಿ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ, ಮತ್ತೊಮ್ಮೆ ಮರುಪರಿಶೀಲನೆ ಮಾಡಿ, ಕನಿಷ್ಠ ಬಡ್ಡಿ ಸುಸ್ತಿಬಡ್ಡಿಯನ್ನಾದರೂ ಮನ್ನಾ ಮಾಡುತ್ತೇವೆಂದು ಘೋಷಣೆ ಮಾಡಿ ರಾಜ್ಯದ ರೈತರ ಶಹಭಾಶ್‌ಗಿರಿ ತೆಗೆದುಕೊಳ್ಳುವ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕು.

ಶ್ರೀ ವೈ.ಕೆ. ರಾಮಯ್ಯ : ಅಧ್ಯಕ್ಷರೇ, ಈ ಸಭೆಯ ಒಳಗೆ ಹೊರಗಡೆ ಒಂದು ಸಾರಿಯಲ್ಲ 10 ಸಾರಿ ರಾಜ್ಯದ ಮುಖ್ಯಮಂತ್ರಿಗಳು ಕರ್ನಾಟಕದ ಯೋಜನಾ ವೆಚ್ಚವನ್ನು ಈ ವರ್ಷ ಕಡಿತ ಮಾಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ನಾನು ಮಾತನಾಡುವಾಗ ಪ್ರಸ್ತಾಪ ಮಾಡಿದ, ಮುಖ್ಯಮಂತ್ರಿಗಳೇ ಅದು ನಿಮ್ಮ ಕೈಲಿಲ್ಲ, ಅದು ಅನಿವಾರ್ಯ. ಏಕೆಂದರೆ ಅವರೇ ಕೊಟ್ಟಿರುವ ಅಂಕಿಅಂಶದ ಪ್ರಕಾರ ಅವರು ನಮಗೆ ದಾರಿ ತೋರಬೇಕಾಗುತ್ತದೆ. ಯೋಜನಾ ವೆಚ್ಚದ ಈ ವರ್ಷದ ಹೆಚ್ಚಳ 58 ಭಾಗ, ನೀವೇ ಒಪ್ಪಿಕೊಂಡಿರುವ ಪ್ರಕಾರ ನಿಮ್ಮ ಕ್ರೋಢೀಕರಣದ ಹೆಚ್ಚಳ ಕೇವಲ 21 ಭಾಗ increase in the size of the State Plan is 58%. Increase in the mobilisation is only 21@. I would like to know from the Hon'ble Chief Minister how he is going to manage this?

ಎರಡನೆಯದು, ಪದಪ್ರಯೋಗಗಳಿಂದ ಎಲ್ಲ ಕಾಲಕ್ಕೂ ಅಡ್ಡದಾರಿ ಹಿಡಿಸುವಂತಹ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದೇವೆ ನಾವು. ಇಲ್ಲಿ ಮೂರು ಪದ ಪ್ರಯೋಗಗಳನ್ನು ಮಾಡಿದ್ದಾರೆ. ಉತ್ತರ ಬಂದಾಗ ಪ್ರತಿ ಸಾರಿ ನಿಮ್ಮನ್ನು ಕೇಳುವುದಕ್ಕಾಗುವುದಿಲ್ಲ, ಹಣ ಒದಗಿಸಲಾಗಿದೆ ಒಂದು, ಹಣ ಖರ್ಚು ಮಾಡಲಾಗಿದೆ ಎರಡು, ಹಣ ಬಿಡುಗಡೆ ಮಾಡಲಾಗಿದೆ ಮೂರು, ಹಣ ಒದಗಿಸುವುದು ಯೋಜನೆಯಲ್ಲಿ, ಹಣ ಖರ್ಚು ಮಾಡಲಾಗಿದೆ ಎಂಬ ಉತ್ತರ ಎಲ್ಲಿಗೆ ಬರುತ್ತದೆ ಎಂದು ನಾನು ಮೊನ್ನೆ ಕ್ಲಾರಿಫೈ ಮಾಡಿದ ಬಿಲ್ ಮಾಡುವವರೆಗೆ ಆ ಹಣ ನೀವು ಕೊಟ್ಟಿಲ್ಲ, ಬಿಡುಗಡೆ ಮಾಡಲಾಗಿದೆ ಅನ್ನುವುದು ಒಂದು. ಆದ್ದರಿಂದ ಮುಖ್ಯಮಂತ್ರಿಗಳು ಈ 58 ಭಾಗ ಏನು ಜಾಸ್ತಿಯಾಗಿದೆಯೋ ಇದರಲ್ಲಿ ಹಣ ಖರ್ಚು ಮಾಡಿರುವುದು ಎಷ್ಟು ಅನ್ನುವುದು ಬೇಕಾಗಿಲ್ಲ, ಒದಗಿಸಿರುವುದು ಎಷ್ಟು ಅಂತ ಬೇಕಾಗಿಲ್ಲ, ಹಣ ಬಿಡುಗಡೆ ಮಾಡಿರುವುದೆಷ್ಟು ಎಂದು ತಿಳಿಸಬೇಕು.

ಹಣ ಬಿಡುಗಡೆ ಮಾಡಿರುವುದು ಎಷ್ಟೆಂದು ದಯಮಾಡಿ ತಿಳಿಸಬೇಕು. ಇನ್ನೂ ಒಂದು ವಿಚಾರವಿದೆ. ನಾವು ಬರೀ ಮಾತಿನಲ್ಲಿ ಹೇಳಲಿಲ್ಲ. ನಿಮ್ಮ ಸರ್ಕಾರದ ಲಾಂಛನದಲ್ಲಿ ಹೊರಟಿರತಕ್ಕಂಥ ಪತ್ರವನ್ನು ನಿಮ್ಮ ಕೈಗೆ ಕೊಟ್ಟಿದ್ದೇವೆ. ನೀರಾವರಿ ಇಲಾಖೆಯಲ್ಲಿ 67 ಭಾಗಕ್ಕೆ ನಾವು ಸೀಮಿತಗೊಳಿಸಿ ಪ್ರೋಗ್ರಾಂ ಅನ್ನು ರಿವೈಸ್ ಮಾಡಬೇಕೆಂದು ಬರೆದಿರುವ ಪತ್ರವನ್ನು ನೀವು ಕೊಟ್ಟಿದ್ದೀರಿ. ಅದಕ್ಕೆ ಇವೊತ್ತು ಮುಖ್ಯಮಂತ್ರಿಗಳು ವ್ಯಾಖ್ಯಾನಿಸುತ್ತಾರೆ, ಮತ್ತು ಮೊನ್ನೆ ದಿವಸ ಕೂಡ ಪತ್ರಿಕೆಯಲ್ಲಿ

ಹೇಳಿಕೆ ಕೊಟ್ಟಿದ್ದಾರೆ. ಏನೆಂದರೆ, ನಾವು ಕಡಿತ ಮಾಡುತ್ತಿಲ್ಲ, ಆರ್ಥಿಕ ಶಿಸ್ತನ್ನು ತರುತ್ತಿದ್ದೇವೆ ಎಂದು. ಬಹಳ ಸಂತೋಷ. We congratulate the Chief Minister who is trying to bring discipline in finance.

ಆದರೆ, ಕಡಿತಕ್ಕೂ ಶಿಸ್ತಿಗೂ ವ್ಯತ್ಯಾಸ ಗೊತ್ತಿಲ್ಲದಿರುವಷ್ಟು ನಾವ್ಯಾರು ದಡ್ಡರಲ್ಲರೆಂಬುದು ನನ್ನ ಭಾವನೆ. ಅದಕ್ಕೆ, ನಾವು ಕಡಿತ ಮಾಡಿಲ್ಲ, ಆರ್ಥಿಕ ಶಿಸ್ತನ್ನು ತಂದಿದ್ದೇವೆ ಎಂದು ಇವೊತ್ತು ಹೇಳಿದಿರಿ. ದಯಮಾಡಿ ಪತ್ರಗಳನ್ನು ಓದುತ್ತೀರಾ? ಇಲ್ಲಿರತಕ್ಕಂಥ 224 ಜನ ಸದಸ್ಯರುಗಳು ಅದನ್ನು ಕಡಿತ ಎಂದು ಒಪ್ಪಿಕೊಳ್ಳುತ್ತಾರಾ? ಶಿಸ್ತು ಎಂದು ಒಪ್ಪಿಕೊಳ್ಳುತ್ತಾರಾ? ಈ ವರ್ಷದ ಕಾರ್ಯಕ್ರಮಗಳನ್ನು ಪುನರ್ ಪರಿಶೀಲಿಸಿ 67ರ ಭಾಗಕ್ಕೆ ಸೀಮಿತಗೊಳಿಸಬೇಕು, ಆದರೆ, ರಾಜ್ಯದ ರೈತರ ದೃಷ್ಟಿಯಿಂದಲ್ಲ, ಸರ್ಕಾರದ ಹಿತದೃಷ್ಟಿಯಿಂದ ಎಂದು ಪತ್ರದಲ್ಲಿ ಬರೆದಿದ್ದಾರೆ. ಆದುದರಿಂದ, ಯೋಜನಾ ಗಾತ್ರದಲ್ಲಿ 20 ಪರ್ಸೆಂಟ್ ಮಾತ್ರ ಜಾಸ್ತಿ ವಸೂಲು ಮಾಡಿ 58 ಪರ್ಸೆಂಟ್ ಹೆಚ್ಚಿಗೆ ಮಾಡಿರುವಾಗ ನಿಮ್ಮಷ್ಟು ಅನುಭವ ನನಗಿಲ್ಲ, ಏಕೆಂದರೆ, ನಾನು ಯಾವತ್ತೂ ಹಣಕಾಸು ಮಂತ್ರಿಯಾಗಿಲ್ಲ, ಇದನ್ನು ಹೇಗೆ ಸರಿದೂಗಿಸುತ್ತೀರಿ? ಎಂದು ಹೇಳಬೇಕು. ಎರಡನೆಯದಾಗಿ, ನಿಯಮ 68ರಡಿಯಲ್ಲಿ ಇವೊತ್ತು ವಿಷಯವನ್ನು ಚರ್ಚೆಗೆ ತಂದಿದ್ದೇನೆ. ನೀರಾವರಿ ಬಗ್ಗೆ ಚರ್ಚೆಯಾಗಿದೆ. ಅದರ ಬಗ್ಗೆ ತಾವು ಒಪ್ಪಿಕೊಂಡು, ಇದರ ಬಗ್ಗೆ ಉತ್ತರಿಸುವಾಗ ನಮಗೆ ಭರವಸೆ ಕೊಡಬೇಕಾಗಿದೆ. ನಿರ್ದಿಷ್ಟವಾದ ಭರವಸೆ ಬೇಕಾಗಿದೆ. ನೀವು ಬೇರಾವುದೇ ಕ್ಷೇತ್ರದಲ್ಲಿ ಯೋಜನೆಗೆ ಕೊಟ್ಟಿರುವಷ್ಟು ಅನುದಾನದ ಹಣವನ್ನು ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲ. ಆದರೆ, ಕೊನೇ ಪಕ್ಷ ನೀರಾವರಿಗಾಗಿ ಒದಗಿಸಿರುವ ಹಣವನ್ನಾದರೂ ಖರ್ಚು ಮಾಡುತ್ತೇವೆ, ಬಿಡುಗಡೆ ಮಾಡುತ್ತೇವೆಂದು ಭರವಸೆ ಕೊಡಬೇಕು. ಇದೊಂದು ವಿಷಯದಲ್ಲಿ ನಾನು ಕಾಂಪ್ರಮೈಸ್ ಆಗಿಲ್ಲ. ನನಗೆ ಉತ್ತರ ಕೊಡಬೇಕು. ಕಡೇ ಪಕ್ಷ ನೀರಾವರಿ ಕ್ಷೇತ್ರದ ಯೋಜನೆಯಡಿ ಅಳವಡಿಸಿರುವಷ್ಟು ಹಣವನ್ನು ಬಿಡುಗಡೆ ಮಾಡುತ್ತೇವೆನ್ನುವಂಥ ಭರವಸೆ ಕೊಡಬೇಕು.

+ ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಷಯಕ್ಕೆ ಪೂರಕವಾಗಿ ನಾನು ಒಂದು ವಿಚಾರ ಹೇಳುತ್ತೇನೆ. ಏನೆಂದರೆ, ಹಣಕಾಸು ಇಲಾಖೆಯಿಂದ ಇಂತಹ ಸುತ್ತೋಲೆ ಹೋಗಿಲ್ಲವೆಂದು ಹೇಳಿದರು. ಮಾನ್ಯ ಸದಸ್ಯರಾದ ರಾಮಯ್ಯನವರು ಹೇಳಿದಂತೆ ಪತ್ರ ಹೋಗಿರತಕ್ಕಂಥಾದ್ದು ನೀರಾವರಿ ಇಲಾಖೆಯಿಂದ. ನನಗೆ ಬೇಕಾಗಿರುವುದು ಸ್ಪಷ್ಟೀಕರಣ ಮಾತ್ರ. ಇದು ಬಹಳ ಮುಖ್ಯವಾದಂಥ ವಿಚಾರ. ಈಗ ಹಣಕಾಸು ಇಲಾಖೆಯಿಂದ ಸುತ್ತೋಲೆ ಹೋಗಿಲ್ಲವೆಂದು ತಾವು ಹೇಳಿದಿರಿ. ಕಡಿತಕ್ಕೆ ಸಂಬಂಧಿಸಿದಂತೆ ನೀರಾವರಿ ಇಲಾಖೆಯಿಂದ ಸುತ್ತೋಲೆ ಹೋಗಿದೆ. ಅದನ್ನು ನಿನ್ನೆ ಸದನದಲ್ಲಿ ಪೂರ್ಣ ಓದಿ ಅದರ ನಕಲನ್ನು ಸಹ ಕೊಟ್ಟಿದ್ದೇನೆ, ಈಗಲೂ ಇನ್ನೊಂದು ಸಾರಿ ಅದರ ನಕಲನ್ನು ಕಳುಹಿಸಿಕೊಡುತ್ತೇನೆ. ಆದುದರಿಂದ, ಸದಸ್ಯರಾದ ರಾಮಯ್ಯನವರಿಗೆ ಇರತಕ್ಕಂಥ ಸಂಶಯ ನನಗೂ ಕೂಡ ಇದೆ. ನೀರಾವರಿ ಕ್ಷೇತ್ರದಲ್ಲಿ ಶೇಕಡ 67ಕ್ಕಿಂಥ ಹೆಚ್ಚು ಹಣವನ್ನು ಖರ್ಚು ಮಾಡುವುದಿಲ್ಲವೆಂಬ ನಿರ್ಧಾರಕ್ಕೆ ನೀವು ಬಂದಿದ್ದೀರಿ. ಅನಂತರ ವಾರ್ಷಿಕ ಯೋಜನಾ ಗಾತ್ರ ಕಡಿಮೆಯಾಗುವುದಿಲ್ಲವೆಂಬ ನಿಮ್ಮ ವಾದಕ್ಕೆ ನೀವು ಹೊಸ ಪ್ಲಾನಿಂಗ್ ಬೋರ್ಡ್ ಮಾಡಿದ್ದೀರಿ. ಅದು ನವೆಂಬರ್ ತಿಂಗಳಿನಲ್ಲಿ ಒಂದು ಸಭೆ ನಡೆಸಿದೆ. ಅದರಲ್ಲಿ ಈ ಸಲದ ಯೋಜನಾಗಾತ್ರವನ್ನು ಕಡಿತ ಮಾಡಲೇಬೇಕಾದಂಥ ಅನಿವಾರ್ಯ ಇದೆಯೆಂಬ ನಿರ್ಣಯವನ್ನು ಪ್ಲಾನಿಂಗ್ ಬೋರ್ಡ್‌ನವರು ತೆಗೆದುಕೊಂಡಿದ್ದು ನಿಮ್ಮ ಗಮನಕ್ಕೆ ಬಂತೇ?

ಮೂರನೆಯದಾಗಿ, ನೀರಾವರಿ ಮತ್ತು ವಿದ್ಯುತ್‌ಗೆ ಸಂಬಂಧಿಸಿದಂತೆ ವಿಶ್ವ ಬ್ಯಾಂಕಿನಿಂದ ಕ್ಲಿಯರೆನ್ಸ್ ಬಂದಿದೆ ಎಂದು ಹೇಳಿದ್ದೀರಿ. ಇದು ಸ್ವಾಗತಾರ್ಹವಾದ ವಿಷಯ. ವಿಶ್ವಬ್ಯಾಂಕಿನಿಂದ ಕ್ಲಿಯರೆನ್ಸ್ ಬರದಿರುವುದಕ್ಕೆ ಎರಡು ಕಾರಣಗಳಿವೆ. ಮೊದಲನೆಯದು, ಅರಣ್ಯ ಭೂಮಿಯನ್ನು ಬಿಡುಗಡೆ ಮಾಡಲು ಕೇಂದ್ರ ಸರ್ಕಾರದ ಪರಿಸರ ಹಾಗೂ ಅರಣ್ಯ ಇಲಾಖೆ ಮಂಜೂರಾತಿ ನೀಡದಿರುವುದು ಮತ್ತು ಎರಡನೆಯದು ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್‌ದರವನ್ನು ವಿಧಿಸಲಿರುವುದು. ಈ ಎರಡು ಕಾರಣಗಳಿಗಾಗಿ ವಿಶ್ವಬ್ಯಾಂಕಿನ ಹಣ ನಮಗೆ ಸಿಗುವುದಿಲ್ಲವೆನ್ನತಕ್ಕಂಥ ಮಾತನ್ನು ತಾವು ಈ ಶಾಸನ ಸಭೆಯಲ್ಲಿ ಉತ್ತರದ ಮೂಲಕ ಕೊಟ್ಟಿದ್ದೀರಿ. ಹಾಗಿದ್ದರೆ, ಈಗ ಈ ನಿಯಮಗಳನ್ನು ಒಳಪಡಿಸಿಕೊಂಡು ವಿಶ್ವಬ್ಯಾಂಕ್ ಹಣವನ್ನು ಮಂಜೂರು ಮಾಡಿದೆಯೆ? ಇಲ್ಲವೆ ವಿಶ್ವಬ್ಯಾಂಕಿನ ಒಪ್ಪಿಗೆಗೋಸ್ಕರ ನೀವೇನಾದರೂ ನೀರಾವರಿ ಪಂಪುಸೆಟ್ಟುಗಳಿಗೋಸ್ಕರ ವಿದ್ಯುತ್ ದರವನ್ನು ವಿಧಿಸತಕ್ಕಂಥ ತೀರ್ಮಾನ ತೆಗೆದುಕೊಂಡಿದ್ದೀರಾ? ಅನಂತರ, ಒಂದು ಸಣ್ಣ ವಿಷಯ ಪ್ರಸ್ತಾಪಿಸಿದೆ 'ಅಕ್ಷಯ' ವಿಚಾರದಲ್ಲಿ ನಾವೆಲ್ಲರೂ ತಮ್ಮ ಸರ್ಕಾರಕ್ಕೆ ಕೀರ್ತಿ ತಂದುಕೊಟ್ಟೆವು. ಆದರೆ, ತೊಂದರೆ ಇರತಕ್ಕಂಥಾದ್ದು ಅಲ್ಲಿ ಕಾಯಿಸುವುದಕ್ಕೆ ಸೀಮೆಎಣ್ಣೆ ಇಲ್ಲ, ಬೇಕಾದಂಥ ಸಕ್ಕರೆ ಇಲ್ಲ. ಆದುದರಿಂದ, ನೀವು ಯಾವ ಸಾರ್ವಜನಿಕ ವಿತರಣಾ ವ್ಯವಸ್ಥೆ ಮಾಡುತ್ತಿದ್ದೀರಿ, ಅದರ ಮೂಲಕ ಸ್ವಲ್ಪ ಹೆಚ್ಚಿನ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುವುದರ ಬಗ್ಗೆ ತಮ್ಮ ಉತ್ತರದಲ್ಲಿ ಪ್ರಸ್ತಾಪಿಸಿಲ್ಲ. ಬಹಳ ಮುಖ್ಯವಾಗಿ ನಾನು ಅವರಿಂದ ಕೇಳಿದ್ದು ಕಾವೇರಿ ನದಿ ವಿವಾದದ ವಿಚಾರವನ್ನು ಪ್ರಸ್ತಾಪಿಸಲೇ ಇಲ್ಲವೆಂದು. ಬಹುಶಃ ಇವೊತ್ತಿನ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಬಂದ ವರದಿ ನೋಡಿ ಸ್ವಲ್ಪ ಮಟ್ಟಿಗೆ ಸಮಾಧಾನ ಮತ್ತು ಸಂತೋಷವಾಯಿತು. ತಮಿಳುನಾಡು ಸರ್ಕಾರ ಕೇಂದ್ರ ಸರ್ಕಾರಕ್ಕೆ ಒದಗಿಸಿರತಕ್ಕಂಥ ಮಾಹಿತಿಗಳು ಸರಿಯಾಗಿಲ್ಲ ಎನ್ನುವುದರ ಬಗ್ಗೆ If I were to quote Indian express:

"An expert witness from Tamilnadu, A Mohana Krishnan who also heads the Cauvery Technical Cell said during the cross-examination by Karnataka's Counsel, Anil Dhawan that it appeared that the information furnished by the State on the cultivable area in some taluks of Tanjore District was incorrect"

ಇದನ್ನು ರಾಜ್ಯ ಸರ್ಕಾರ ಬಹಳ ಗಂಭೀರವಾಗಿ ತೆಗೆದುಕೊಂಡು ಪರ್‌ಸ್ಯೂ ಮಾಡತಕ್ಕಂಥ ಪ್ರಯತ್ನ ಮಾಡುತ್ತದೆಯೇ? This is a very valid point.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೆ, ರಾಜ್ಯಪಾಲರ ಭಾಷಣದಲ್ಲಿ ಅತ್ಯಂತ ಪ್ರಮುಖವಾದಂಥ ವಿಚಾರವನ್ನು ಪ್ರಸ್ತಾಪಿಸಿಲ್ಲ. ಮುಖ್ಯಮಂತ್ರಿಗಳು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಪ್ರಸ್ತಾಪವಾಗದೆ ಇರತಕ್ಕಂಥ ಅನೇಕ ವಿಚಾರಗಳಿಗೂ ಕೂಡ ಉತ್ತರಿಸಿದ್ದಾರೆ. ವಿಚಾರವೇನೆಂದರೆ, 1995ರ ಜನವರಿಯೊಳಗಾಗಿ ದೇಶದ ಮತದಾರರಿಗೆ ಗುರ್ತಿನ ಚೀಟಿಯನ್ನು ಸರ್ಕಾರಗಳು ಕೊಡದಿದ್ದರೆ ಯಾವುದೇ ಚುನಾವಣೆಯನ್ನು ನಡೆಸುವುದಕ್ಕೆ ಅವಕಾಶ ಕೊಡುವುದಿಲ್ಲವೆನ್ನುವ ಒಂದು ನಿರ್ಧಾರವನ್ನು ಚುನಾವಣಾ ಆಯೋಗ ಈಗಾಗಲೇ ತೆಗೆದುಕೊಂಡಿದೆ. ಅದೇ ರೀತಿ ಎಲ್ಲಾ ರಾಜ್ಯದ ಮುಖ್ಯಮಂತ್ರಿಗಳ ಒಂದು ಸಭೆಯನ್ನು ಈ ಕುರಿತು ಚರ್ಚಿಸಲು ಚುನಾವಣಾ ಆಯುಕ್ತರು ಕರೆದಿದ್ದಾರೆ. ಕೇಂದ್ರ ಸರ್ಕಾರ ದೇಶದ ಪ್ರತಿಯೊಬ್ಬ ಮತದಾರರಿಗೂ ಗುರ್ತಿನ ಚೀಟಿ ಕೊಡುವುದರಲ್ಲಿ ರಾಜ್ಯ ಸರ್ಕಾರದ ನಿಲುವೇನು? ಏಕೆಂದರೆ, ಬರುವ ನವೆಂಬರ್ ತಿಂಗಳಲ್ಲಿ ನಾವು ಚುನಾವಣಾ ಕಣಕ್ಕೆ ಹೋಗಬೇಕಾಗಿದೆ. ಆದರೆ, ಚುನಾವಣಾ ಆಯೋಗ ಕೊಟ್ಟಿರುವ ಗಡುವು ಸನಿಹದಲ್ಲಿರುವುದರಿಂದ ಮುಂಬರತಕ್ಕ ಚುನಾವಣೆಯೊಳಗಾಗಿ ತಮ್ಮ ರಾಜ್ಯದ ಎಲ್ಲಾ ಮತಾರರಿಗೂ ಗುರ್ತಿನ ಚೀಟಿ ಕೊಡುವುದಕ್ಕೆ ಸರ್ಕಾರವೇನಾದರೂ ತೀರ್ಮಾನಿಸಿದೆಯೆ? ಈಗ ಚುನಾವಣಾ ಆಯುಕ್ತರು

ಆ ರೀತಿ ಹೇಳಿರುವುದಕ್ಕೆ ರಾಜ್ಯ ಸರ್ಕಾರದ ನಿಲುವು ಏನು? ಎಂಬುದನ್ನು ತಿಳಿಸಬೇಕೆಂದು ತಮ್ಮ ಮೂಲಕ ವಿನಂತಿಸುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್: ನಾನು ಪ್ರಸ್ತಾಪಿಸಿದ ವಿಷಯ ಮುಖ್ಯಮಂತ್ರಿಗಳ ಉತ್ತರದಲ್ಲಿ ಬರಲಿಲ್ಲ. ಅದಕ್ಕೆ ಮತ್ತೊಮ್ಮೆ ಪ್ರಸ್ತಾಪಿಸುತ್ತಿದ್ದೇನೆ. ಅದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳು ಆಶ್ರಯ ಯೋಜನೆಯಡಿಯಲ್ಲಿ ಮಾರ್ಚಿ ಅಂತ್ಯದೊಳಗಾಗಿ 80ಸಾವಿರ ಮನೆಗಳನ್ನು ಕಟ್ಟಿ ಪೂರ್ಣಗೊಳಿಸಲಾಗುವುದೆಂದು ಹೇಳಿದರು. ಅದಕ್ಕೆ ನಾನು ನನ್ನ ಭಾಷಣದಲ್ಲಿ ಹೇಳಿದೆ ಬಡವರ, ಹಿಂದುಳಿದವರ ಬಗ್ಗೆ ನಮ್ಮ ಸರ್ಕಾರಕ್ಕೆ ಕಳಕಳಿ ಇದೆಯೆಂದು ಹೇಳುವ ಮುಖ್ಯಮಂತ್ರಿಗಳಿಗೆ ತಿಳಿಸುವುದೇನೆಂದರೆ, 1986ನೇ ಇಸವಿಯಿಂದ 1991ರವರೆಗೆ ನನ್ನ ತಾಲ್ಲೂಕಾದ ಹಿರೇಕೆರೂರಿನಲ್ಲಿ ಸುಮಾರು 14ಲಕ್ಷ ರೂಪಾಯಿಗಳ ಜನತಾ ಮನೆಗಳನ್ನು ಹುಡ್ಕೋ ಯೋಜನೆಯಡಿ ಕಟ್ಟತಕ್ಕಂಥಾದ್ದು ಬಾಕಿ ಇದೆ, ಕೆಲವು ಮನೆಗಳು ಅಪೂರ್ಣವಾಗಿವೆ. 1986ರಿಂದ 1991ರವರೆಗೆ ಇಡೀ ರಾಜ್ಯದಲ್ಲಿ ಹುಡ್ಕೋ ಯೋಜನೆಯಡಿ ಸುಮಾರು 44 ಕೋಟಿ ರೂಪಾಯಿಗಳ ಜನತಾ ಮನೆಗಳನ್ನು ಪೂರ್ಣಗೊಳಿಸಬೇಕಾಗಿದೆಯೆಂದು ನನ್ನ ಪ್ರಶ್ನೆಗೆ ಉತ್ತರಿಸಿದ್ದೀರಿ. ಆದರೆ, ಮನೆ ಸೌಲಭ್ಯ ಹೊಂದುವ ಫಲಾನುಭವಿಗಳು ದಿನನಿತ್ಯ ಕಛೇರಿಗಳಿಗೆ ಅಲೆಯುತ್ತಿದ್ದಾರೆ. ಈ ಮನೆಗಳನ್ನು ಯಾವಾಗ ಪೂರ್ಣಗೊಳಿಸುತ್ತೀರಿ? ಎಂಬ ಬಗ್ಗೆ ಉತ್ತರಿಸಬೇಕು. ಒಂದು ವೇಳೆ ಹುಡ್ಕೋ ಯೋಜನೆಯಡಿ ಮನೆಗಳನ್ನು ಕಟ್ಟಿಕೊಡಲು ಸಾಧ್ಯವಿಲ್ಲದಿದ್ದರೆ, ಅದನ್ನು ರದ್ದುಪಡಿಸಿ ಆಶ್ರಯ ಯೋಜನೆಯಡಿಯಲ್ಲಾದರೂ ತೆಗೆದುಕೊಳ್ಳುವುದರ ಬಗ್ಗೆ ವಿಚಾರ ಮಾಡುತ್ತೀರಾ, ಎರಡನೆಯದಾಗಿ 'ಅಕ್ಷಯ' ಯೋಜನೆಯಲ್ಲಿ ಇಷ್ಟು ಹಣ ಖರ್ಚು ಮಾಡಿರುವುದಾಗಿ ಹೇಳಿದ್ದೀರಿ. ಹಾಗೆಯೇ, ಶಾಲಾ ಮಕ್ಕಳಿಗೆ ಉಚಿತ ಹಾಲು ಕೊಡುವ ಯೋಜನೆ ಏನು ಹಾಕಿಕೊಂಡಿದ್ದೀರಿ, ಹಾಲು ಸರಬರಾಜು ಮಾಡಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ತಾವು ಇದುವರೆಗೆ ಹಣ ಕೊಟ್ಟಿಲ್ಲ.

ಅಲ್ಲಿರತಕ್ಕಂಥ ಹಣವನ್ನು ಸರ್ಕಾರಕ್ಕೆ ಕೊಡಬೇಕಾದ್ದನ್ನು ಮಕ್ಕಳಿಗೆ ಹಾಲು ಕೊಡುತ್ತಿದ್ದಿರಲ್ಲಾ ಆ ಹಾಲಿನ ಬಿಲ್ ಹಣವನ್ನೇನಾದರೂ ರೈತರಿಗೆ ಮುಟ್ಟುವಂತೆ ಪ್ರಯತ್ನ ಮಾಡುತ್ತಿದ್ದೀರಾ? ಅಪ್ಪರ್ ತುಂಗಾ ಯೋಜನೆಯ ಬಗ್ಗೆ ತಮಗೆ ಪದೇ ಪದೇ ಹೇಳಿದ್ದೇನೆ. ಕೇಂದ್ರ ಸರ್ಕಾರಕ್ಕೆ 1991ನೇ ಇಸವಿಯಿಂದ ಇಲ್ಲಿಯವರೆಗೆ ಅವರು ಕೇಳಿರುವಂತಹ ಮಾಹಿತಿಯನ್ನು, ವಿವರಣೆಯನ್ನು ಕಳುಹಿಸಿಲ್ಲ. ತಮಗೆ ಮೊನ್ನೆ ಹೇಳಿದ ಮೇಲೆ ಮುಖ್ಯ ಕಾರ್ಯದರ್ಶಿಗಳು ಡಿಸೆಂಬರ್ 27ಕ್ಕೆ ಒಂದು ಸಭೆಯನ್ನು ಮಾಡಿ ಮಾಹಿತಿಗಳನ್ನು ಕೊಡುವುದಕ್ಕೆ ಎಲ್ಲಾ ಇಲಾಖೆಗಳಿಗೂ ಹೇಳಿದ್ದಾರೆ. ಕೂಡಲೇ ಕೇಂದ್ರ ಸರ್ಕಾರಕ್ಕೆ ಮಾಹಿತಿಗಳನ್ನು ಕಳುಹಿಸಿ ಮಂಜೂರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ? ಇನ್ನು ಎರಡನೆಯದಾಗಿ ಈ ವರ್ಷ ಇಟ್ಟಿರತಕ್ಕಂಥ 5 ಕೋಟಿ ರೂ. ಮಾರ್ಚಿ ಒಳಗಾಗಿ ಅದನ್ನು ಕನಿಷ್ಠ 370 ಕೋಟಿ ರೂ.ಗಳು ಇಟ್ಟಿದು. ಈಗ 5 ಕೋಟಿ ರೂ.ಗಳನ್ನಾದರೂ ಈ ಅಪ್ಪರ್ ತುಂಗಾ ಯೋಜನೆಗೆ ಖರ್ಚು ಮಾಡಲು ಈ ಸದನದಲ್ಲಿ ಭರವಸೆಯನ್ನು ಕೊಡುತ್ತೀರಾ? ನಾಲ್ಕನೆಯದಾಗಿ ಮಹಾಪುರ್ ಬಗ್ಗೆ ಹೇಳಿದ್ದೀರಿ. ಬಹಳ ಹಣ ಖರ್ಚು ಮಾಡಿದ್ದೇವೆಂದು ಅದು ಇರಲಿ ಒಡೆದು ಹೋದಂತಹ ಕೆರೆಕಟ್ಟೆಗಳ ದುರಸ್ತಿಗಾಗಿ ತಾವು ಪ್ರಯತ್ನ ಮಾಡುತ್ತೀರಾ? ಒಡೆದ ಕೆರೆಕಟ್ಟೆಗಳ ದುರಸ್ತಿಗೆ ಕೋಟ್ಯಾಂತರ ಹಣ ಖರ್ಚು ಆಗುತ್ತದೆ ಎಂದರೆ ದಯವಿಟ್ಟು ಈ ಮಹಾಪುರ್‌ದಲ್ಲಿ ಒಡೆದು ಹೋದಂತಹ ಕೆರೆಕಟ್ಟೆಗಳನ್ನು ಯಾವ ಹಣದಲ್ಲಿಯಾದರೂ ದುರಸ್ತಿ ಮಾಡಿ. ಇರಿಗೇಷನ್ ಹಣದಲ್ಲೋ ಯಾವುದರಲ್ಲಾದರೂ ಅವುಗಳನ್ನು ರಿಪೇರಿ ಮಾಡುವಂತಹ ಭರವಸೆಯನ್ನು ತಾವು ಕೊಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಸದಸ್ಯರು ಅನೇಕ ಸ್ಪಷ್ಟೀಕರಣವನ್ನು ಕೇಳಿದ್ದಾರೆ.

ನ್ಯಾಯಮೂರ್ತಿ ವೆಂಕಟೇಶ್ ಆಯೋಗದ ಬಗ್ಗೆ ವರದಿಯನ್ನು ಏಕೆ ಪ್ರಕಟಣೆ ಮಾಡುವುದಿಲ್ಲ, ಎಂದು ಕೇಳಿದ್ದೀರಿ. ತಮಗೆ ಗೊತ್ತಿದೆ ಕೆಲವು ವಿಷಯಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಕೆಲವು ಆಯೋಗಗಳ ವರದಿಯನ್ನು ಈ ಸದನದ ಮುಂದೆ ಇಡುವ ಮೊದಲು ಅದನ್ನು ನಾವು ವಿಚಾರ ಮಾಡುತ್ತಿದ್ದೇವೆ. ಅದು ಸರ್ಕಾರದ ಗಮನದಲ್ಲಿದೆ. ಇನ್ನು ಬಡ್ಡಿ ಮನ್ನಾ ಮತ್ತು ಬಡ್ಡಿ ಸಾಲ ಮನ್ನಾ ಈ ವಿಚಾರವನ್ನು ಹೇಳಿದ್ದೀರಿ. ಈಗಾಗಲೇ ಇದರ ಬಗ್ಗೆ ಸಾಕಷ್ಟು ಬಾರಿ ಹೇಳಿಕೆಗಳನ್ನು ಕೊಟ್ಟಿದ್ದೇನೆ. ಈ ಬಗ್ಗೆ ಈಶ್ವರಪ್ಪನವರು ಸಹ ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ಸಹಕಾರ ಮಂತ್ರಿಗಳು ಹೇಳಿದ್ದಾರೆ. ಇನ್‌ವೆಸ್ಟ್‌ಮೆಂಟ್ ಅಗ್ರಿಕಲ್ಚರ್ ಬಗ್ಗೆ ಕರ್ನಾಟಕ ಬಹಳ ಹೀನ ಸ್ಥಿತಿಯಲ್ಲಿದೆ. ಇನ್‌ವೆಸ್ಟ್‌ಮೆಂಟ್ ಇವತ್ತು ಆಗುತ್ತಾ ಇಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ: ರೈತರಿಗಿಂತ ಹೀನ ಸ್ಥಿತಿಯಲ್ಲಿ ಸರ್ಕಾರ ಇಲ್ಲ. ದಯವಿಟ್ಟು ಹೇಳಿ ಹೌದೊ ಇಲ್ಲವೊ? ಎಂದು....

ಶ್ರೀ ಎಂ. ವೀರಪ್ಪ ಮೊಯಿಲಿ: ರೈತರನ್ನು ಇವತ್ತು ಬೇಡುವಂತಹ ಪರಿಸ್ಥಿತಿಗೆ ತೆಗೆದುಕೊಂಡು ಹೋಗಬಾರದು. ಇದು ತಮ್ಮ ಅಭಿಪ್ರಾಯವಿರಬಹುದು. ಆದರೆ, ನಮಗೆ ಕರ್ನಾಟಕದಲ್ಲಿ ಸಮೃದ್ಧನಾದಂತಹ ರೈತನನ್ನು ಕಟ್ಟಬೇಕು ಎಂಬುದು ನಮ್ಮ ಅಪೇಕ್ಷೆ ಮತ್ತು ಆಸೆ. ಆದರೆ ಪ್ರತಿ ಸಾರಿ ಸರ್ಕಾರವನ್ನು ಬೇಡುವ ಹಾಗೆ ಮಾಡಬಾರದೆಂದು ನಮ್ಮ ಅಪೇಕ್ಷೆ.

(ಗೊಂದಲ)

ಉಪಾಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ, ಅವರು ಉತ್ತರ ಕೊಡುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಆದರೆ ಇವತ್ತು ದೇಶದಲ್ಲಿ ಸಾಲಮನ್ನಾ ಮಾಡಬೇಕು, ಬಡ್ಡಿ ಮನ್ನಾ ಮಾಡಬೇಕೆಂದು ನಾವು ಒಂದು ಕಾಲದಲ್ಲಿ ಹೇಳಿದ್ದೇವೆ. ಈಗ ಸಾಲ ಮನ್ನಾ ಮಾಡುವ ವಿಷಯ ಕೂಡ ನಿರ್ಣಯವಾಯಿತು. ರಾಷ್ಟ್ರದ ಎಲ್ಲಾ ರಾಜ್ಯದಲ್ಲೂ ಇವತ್ತು ನಿಲ್ಲಿಸಿದ್ದಾರೆ. ಇವತ್ತು ಮಹಾರಾಷ್ಟ್ರ, ಪಂಜಾಬ್, ಗುಜರಾತ್‌ನ ರೈತರು ಇವತ್ತು ಸಮೃದ್ಧರಾಗುತ್ತಿದ್ದಾರೆ. ನಮ್ಮ ರೈತರು ಇನ್ನು ಬಡವರಾಗುತ್ತಿದ್ದಾರೆ ಏಕೆಂದರೆ ಸುಮಾರು 4,600 ಚಿಲ್ಲರೆ ಕೋಟಿ ರೂಪಾಯಿಗಳು ಇವತ್ತು ಇನ್‌ವೆಸ್ಟ್‌ಮೆಂಟ್ ಅಗ್ರಿಕಲ್ಚರ್ ಸೆಕ್ಟರ್‌ನಲ್ಲಿ ಆಗಬೇಕಾದರೆ 400 ಕೋಟಿ ರೂ.ಗಳು ಕೂಡ ಆಗುತ್ತಾ ಇಲ್ಲ ಬಂಡವಾಳ ಇವತ್ತು ಬಂಡವಾಳ ಆಗದೇ ಇದ್ದರೆ ರೈತರ ಹೇಗೆ ಸಮೃದ್ಧಿಯಾಗಬೇಕು. ಸಾಲ ಬರುವುದಿಲ್ಲ, ರೆಕವರಿ ಆಗದೇ ಇವತ್ತು ಬ್ಯಾಂಕ್‌ಗಳು ಮುಚ್ಚುವ ಪರಿಸ್ಥಿತಿಯಲ್ಲಿದೆ. ಇವತ್ತು ನಾವು ರಿಯಾಯಿತಿಯನ್ನು ಘೋಷಣೆ ಮಾಡಿದರೂ ಕೂಡ ಅದು ರೈತರಿಗೆ ಪ್ರಯೋಜನವಾಗುವುದಾದರೆ ಕಾವೇರಿ, ಕೃಷ್ಣ ಇದೆಲ್ಲಾ ರೈತರಿಗಾಗಿಯೇ ಮಾಡುವುದು. ಆ ಯೋಜನೆಯಲ್ಲಿ ಸ್ವಲ್ಪ ಹಣವನ್ನು ತೆಗೆದುಕೊಂಡು ಇದಕ್ಕೆ ಕೊಡೋಣ. ಈ ಉದ್ದೇಶವೇನಾದರೂ ಇದೆಯಾ? ನಾವು ರೈತನನ್ನು 21ನೇ ಶತಮಾನಕ್ಕೆ ಕೊಂಡೊಯ್ಯಬೇಕೆಂದು ನಮ್ಮ ಅಪೇಕ್ಷೆ. ಆದರೆ ಈಶ್ವರಪ್ಪನವರಿಗೆ, ಯಡಿಯೂರಪ್ಪನವರಿಗೆ 21 ಶತಮಾನಕ್ಕೆ ಬದಲಾಗಿ 15ನೇ ಶತಮಾನಕ್ಕೆ ದೂಡೋಣ ಎಂಬ ಅಪೇಕ್ಷೆ. ಸಂಪ್ರದಾಯ ಶಕ್ತಿಗಳ ಒಂದು ಸಂಚು ಇದು. ಈ ರೈತನನ್ನು ಇನ್ನು ಸಾಲದ ದವಡೆಗೆ ತೆಗೆದುಕೊಂಡು ಹೋಗಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ : 21ನೇ ಶತಮಾನಕ್ಕೆ ಹೇಗೆ ಹೋಗಬೇಕೆಂಬುದನ್ನು ಧರಣಿ ಮಾಡಿ ತೋರಿಸಿದ್ದಿರಾ? ಒಬ್ಬ ಮುಖ್ಯಮಂತ್ರಿಯಾಗಿ ನಿಮಗೆ ರಕ್ಷಣೆ ಇಲ್ಲ ಎಂದು ಕೂಗಿ 21ನೇ ಶತಮಾನದಲ್ಲಿ ನಿಮ್ಮ ಮಂತ್ರಿಗಳು ನಮ್ಮನ್ನು ಕೊಲೆ ಮಾಡುತ್ತೇವೆನ್ನುವುದನ್ನು ನಿಮ್ಮ ಶಾಸಕರೇ ಕೂಗುತ್ತಿರುವುದನ್ನು ರಾಜ್ಯದ ಜನರು ನೋಡಿದ್ದಾರೆ. ದಯವಿಟ್ಟು ರಾಜಕೀಯ ಮಾಡಬೇಡಿ. ಸ್ಪಷ್ಟವಾಗಿ ಹೇಳಿ ಈ ರಾಜ್ಯದ ರೈತರಿಗೆ ಅನುಕೂಲ ಮಾಡಿಕೊಡುವುದಕ್ಕೆ ಆಗುತ್ತದಾ ಇಲ್ಲವಾ ಎಂಬುದು.

6.30 ಪಿ.ಎಂ

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಬಿಜೆಪಿಯವರಿಗೆ, ಕಾಂಗ್ರೆಸ್ ಆದ ನಮ್ಮ ಪಕ್ಷಕ್ಕೆ, ಜನತಾ ದಳಕ್ಕೆ ಓಟು ಗಳಿಸುವುದಕ್ಕೆ ಇದು ಒಳ್ಳೆಯ ಆಯುಧ. ಆದರೆ ರೈತನಿಗೆ ಇದರಿಂದ ಪ್ರಯೋಜನ ಆಗುವುದಿಲ್ಲ. ನನಗೆ ಓಟು ಬರಬಹುದು. ಆದರೆ ಓಟು ಗಳಿಸುವುದು ಸರ್ಕಾರದಲ್ಲಿ ಅಧಿಕಾರ ಗಳಿಸುವುದಕ್ಕೆ ರೈತನ ಅಸ್ಥಿ ಪಂಜರ ಏಣಿಯಾಗಬಾರದು. ಅದು ನಿಮ್ಮ ರೈತನ ಅಸ್ಥಿಪಂಜರ ಏಣಿಯಾಗಬಾರದು. ಆ ಅಸ್ಥಿಪಂಜರದ ಏಣಿಯನ್ನು ಉಪಯೋಗ ಮಾಡಿಕೊಂಡು ದಯಮಾಡಿ ಅಧಿಕಾರಕ್ಕೆ ಬರತಕ್ಕಂತಹ....

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಅಂದರೆ ಅಸ್ಥಿಪಂಜರ ಸಾಯಬೇಕು ಎಂದೇ. ನಾನು ಅದನ್ನು ವಿರೋಧ ಮಾಡುತ್ತಾ ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಈಶ್ವರಪ್ಪನವರು ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು : ವಾಟಾಳ್ ನಾಗರಾಜ್‌ರವರೇ ಮಾನ್ಯ ಮುಖ್ಯಮಂತ್ರಿಗಳು ಕೊಡುತ್ತಿರುವ ಉತ್ತರ ಕ್ಲಾರೀಫಿಕೇಷನ್ ಅಷ್ಟೇನೆ. ಬಜೆಟ್‌ನಲ್ಲಿ ಪೂರ್ಣ ಮಾಡುತ್ತದೆ...

(ಗೊಂದಲ)

ಉಪಾಧ್ಯಕ್ಷರು : ದಯಮಾಡಿ ಯಾವುದು ರೆಕಾರ್ಡ್‌ಗೆ ಹೋಗುವುದಿಲ್ಲ, ತಾವು ಸೀಟ್ ಮೇಲೆ ಕುಳಿತುಕೊಂಡು ಮಾತನಾಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ಮನವಿ, ನಿನ್ನೆ ತಾವು ನಮ್ಮನ್ನೆಲ್ಲಾ ಕರೆದು ಕುಳಿತುಕೊಂಡು, ಬಹಳ ಸುದೀರ್ಘವಾಗಿ ಮಾತನಾಡಿ ಒಳ್ಳೆಯ ಕಾಫಿಯನ್ನು ನಮ್ಮ ಸ್ನೇಹಿತರಿಗೆಲ್ಲಾ ಕುಡಿಸಿ, ನಾನು ಕುಡಿಯುವುದಿಲ್ಲ ಆಗ ನಾವೂ ಒಂದು ಆರೋಪಣೆ ಮಾಡಿದೆವು, ಕೊನೆಗೆ ಮಾನ್ಯ ದೇಶಪಾಂಡೆಯವರ ಮಾತನ್ನಾದರೂ ಒಪ್ಪಿಕೊಳ್ಳಿ ಎಂದು ಹೇಳಿದೆವು. ದೇಶಪಾಂಡೆಯವರ ಮೇಲೆ ನಿಮಗೆ ಏನೋ ಪ್ರೀತಿ ಇದೆ ಎಂದು ಹೇಳಿ ಅವರು ಹೇಳಿದ ಮಾತನ್ನಾದರೂ ಒಪ್ಪಿಕೊಳ್ಳಿ, ನಮ್ಮ ಮಾತು ಒಪ್ಪಿಕೊಳ್ಳದಿದ್ದರೂ ಪರವಾಗಿಲ್ಲ ಎಂದು. ಕೊನೆಗೆ ನೀವು ಏನು ತೀರ್ಮಾನಕ್ಕೆ ಬಂದಿರಿ, ಏನಾದರೂ ಮಾಡೋಣ ನಾವು ನಿಜವಾಗಲೂ ರೈತರ ಬಗ್ಗೆ ಒಂದು ಅನುಕೂಲವಾದಂತಹ ವಾತಾವರಣದಲ್ಲಿ ಭರವಸೆ ಕೊಡುತ್ತೇವೆ ಎಂದು ಹೇಳಿದಿರಿ. ಆದರೆ ನಿಮ್ಮ ಭರವಸೆ ಹುಸಿಯಾಗುತ್ತಿದೆ. ತಾವು ಏಕೆ ಈ ರೀತಿ ರೈತ ವಿರೋಧಿ ಧೋರಣೆಯನ್ನು ತಾಳುತ್ತಿದ್ದೀರಿ. ಈಗ ಹರಾಜು ಆಗುತ್ತಿದೆ, ಬಹಳ ತೊಂದರೆಗಳು ಇವೆ, ಪಾತ್ರೆಗಳು ಹರಾಜಾಗುತ್ತಿವೆ, ದೊಡ್ಡ ದೊಡ್ಡ ತೊಂದರೆಯಾಗುತ್ತಿದೆ. ನಮ್ಮನ್ನು ನೀವು ಮೂರು ಸಲ ಕರೆದಿರಿ. ವಿರೋಧಪಕ್ಷದ ಮುಖಂಡರನ್ನು ಮೂರು ಬಾರಿ ಕರೆದಿರಿ ನೀವು. ನೀವು ಏಕೆ ಈ ರೀತಿ ತಪ್ಪಿಸಿ, ಬಳಸಿ ಹೋಗುತ್ತಿದ್ದೀರಿ, ಏನು ಉದ್ದೇಶ ನಿಮ್ಮದು, ನೇರವಾಗಿ ಹೇಳಿ, ನಾವು ವಸೂಲಿಯನ್ನು ನಿಲ್ಲಿಸುತ್ತೇವೆ. ಈಗ ಅಲ್ಲಿ ಕಡ್ಡಾಯ ವಸೂಲಿಯನ್ನು ನಿಲ್ಲಿಸುತ್ತೇವೆ. ಬಲತ್ಕಾರ ವಸೂಲಿಯನ್ನು ನಿಲ್ಲಿಸುತ್ತೇವೆ, ದಯವಿಟ್ಟು ತಾವು ಭರವಸೆ ಕೊಡಿ. ಮತ್ತು ಇವತ್ತೇ ಸಭೆಯನ್ನು ಮುಂದಕ್ಕೆ ಹಾಕುತ್ತಿದ್ದೀರಿ ನೀವು. ನಾಳೆ ಸಭೆ ಇಲ್ಲ, ಇನ್ನು ಸೇರಬೇಕು ಎಂದರೆ ಮುಂದಿನ ತಿಂಗಳು ಮಾರ್ಚ್ 7ಕ್ಕೊ, 17ಕ್ಕೊ ಇನ್ನು ನಮಗೆ ಅದು ನಿರ್ಧಾರವಾಗಿಲ್ಲ. ಆದುದರಿಂದ ದಯವಿಟ್ಟು ನೀವು ರೈತರ ಪರವಾಗಿ ಇವತ್ತು ಕೂಡಲೇ ನೇರವಾಗಿ

ನಾವು ಕಡ್ಡಾಯ ವಸೂಲಿ ಮತ್ತು ಬಲತ್ಕಾರ ವಸೂಲಿ, ಮನೆಗೆ ನುಗ್ಗುವಂತಾದ್ದು ಇದನ್ನೆಲ್ಲಾ ನಿಲ್ಲಿಸಿದ್ದೇವೆ ಎನ್ನುವಂತಾದ್ದನ್ನು ಒಂದು ಮಾತು ಹೇಳಿ ನೀವು.

ಶ್ರೀ ಎಂ. ವೀರಪ್ಪ ಮೊಯಿಲಿ : ಆ ಘೋಷಣೆಯನ್ನು ಮಾಡುವುದಕ್ಕಿಂತಲೂ ಎಲ್ಲಾ ಡಿಸ್ಟ್ರಿಕ್ಟ್ ಕೋ-ಆಪರೇಟಿವ್ ಬ್ಯಾಂಕಿನ ಬಾಗಿಲನ್ನು ಮುಚ್ಚುತ್ತೇವೆ, ಎಲ್ಲಾ ಪಿಎಲ್‌ಡಿ ಬ್ಯಾಂಕಿನ ಬಾಗಿಲನ್ನು ನಾವು ಮುಚ್ಚುತ್ತೇವೆ, ಅಪೆಕ್ಸ್ ಬ್ಯಾಂಕಿನ ಬಾಗಿಲನ್ನು ಮುಚ್ಚುತ್ತೇವೆ, ಎಂದು ಆ ಘೋಷಣೆ ಮಾಡಿದರೆ, ಈ ಘೋಷಣೆ ಮಾಡಲೇ ಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಧ್ವನಿ ಇವತ್ತು ನಾಲ್ಕು ಗಂಟೆ ಮೇಲೆ ಪೂರ್ತಿ ಬದಲಾವಣೆಯಾಯಿತು. ಆದ್ದರಿಂದ ಇದು ಏನೋ ನಮಗೆ ಬಹಳ ಆಶ್ಚರ್ಯವಾಯಿತು. ನಿಮ್ಮ ಧ್ವನಿ ಯಾವತ್ತು ಬದಲಾವಣೆಯಾಗುತ್ತಿರಲಿಲ್ಲ. ಆದರೆ ಈ ಧ್ವನಿಯನ್ನು ಕೇಳಿ ಕೇಳಿ ನಮಗೆ ಎಷ್ಟು ನೋವಾಗುತ್ತಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ತಮ್ಮದೇ ಆದಂತಹ ಸ್ವಂತ ವ್ಯಕ್ತಿತ್ವವನ್ನು ಹೊಂದಿದಂತಹ ವ್ಯಕ್ತಿ. ಯಾವಾಗಲೂ ಕೂಡ ಮತ್ತೊಬ್ಬರ ಹಿಂಬಾಗಿಲಿಗೆ ಹೋದವರು ಅಲ್ಲ. ಬಿಜೆಪಿಯವರು ಅವರು ಒಂದು ರಾಜಕೀಯ ಉದ್ದೇಶಕ್ಕಾಗಿ ಈ ತರಹ ಮಾಡುತ್ತಿರುತ್ತಾರೆ ಪಾಪ, ಹೇಳಿ, ಹೇಳಿ, ಮಧ್ಯ ಪ್ರದೇಶ ಸರ್ಕಾರ ಹೊರಟೇ ಹೋಯಿತು. ಅವರು ಹೇಳಿದರು ನಾವು ಮಧ್ಯಪ್ರದೇಶದಲ್ಲಿ ಸಾಲ ಮನ್ನಾ ಮಾಡಿದ್ದೇವೆ, ಎಲ್ಲಾ ಮಾಡಿದ್ದೇವೆ ಎಂದು ಹೇಳಿ ಏಕಾಂತಯ್ಯನವರೇ, ಮನೆಗೆ ಹೋಗೆಬಿಟ್ಟರು ಅವರು. ಪಾಪ ಇಲ್ಲಿ ಕೂಡ ಸಾಲ ಮನ್ನಾ ಮಾಡುತ್ತೇವೆ, ಮಾಡುತ್ತೇವೆ ಎಂದು ಹೇಳಿ ಈಗ ಮೂರು ಜನ ಇದ್ದಾರೆ ಆ ಮೂರು ಜನರು ಹೋಗಿಬಿಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಾ ಈಗ ಸಾಲ ಮನ್ನಾದ ಬಗ್ಗೆ ಅಲ್ಲ. ಈಗ ನಾವೆಲ್ಲಾ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ನಾವೆಲ್ಲಾ ಒಂದು ತೀರ್ಮಾನಕ್ಕೆ ಬಂದು ಬಡ್ಡಿ ಮತ್ತು ಸುಸ್ತಿ ಬಡ್ಡಿ ಬಗ್ಗೆ.....

ಶ್ರೀ ಆರ್.ವಿ. ದೇಶಪಾಂಡೆ : ನಿಮ್ಮ ಹಲವಾರು ಜನ ಕಾಂಗ್ರೇಸ್ಸ್ ಶಾಸಕರು ಬಂದು ಭೇಟಿ ಆಗಿದ್ದಾರೆ. ದಯಮಾಡಿ ಬಡ್ಡಿ ಮನ್ನಾ ಮಾಡಿಸಿ, ಎಂದು ಅವರೇ ಸ್ವತಃ ಬಂದು ಹೇಳಿದ್ದಾರೆ. ಈ ವಿಷಯದಲ್ಲಿ ಎಲ್ಲಾ ಶಾಸಕರು ಒಂದೇ ಆಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯ ಮಂತ್ರಿಯವರೇ, ಮೊನ್ನೇ ಇಲ್ಲಿ ಚರ್ಚೆ ಆಗುವಾಗ ನಿಮ್ಮ ಕಾನಡೆಯವರು ಏನು ಹೇಳಿದರು, ಅವರು ನಿಮ್ಮ ಪಕ್ಷದವರೇ, ಮಾನ್ಯ ಹನುಮೇಗೌಡರು ಹೇಳಿದರು, ಇದರಲ್ಲಿ ಪಕ್ಷಾತೀತವಾದಂತಹ ಒತ್ತಾಯ ಇದೆ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೇ, ವಿವೇಚನಾ ರಹಿತವಾದಂತಹ ಸಾಲ ಮನ್ನಾ ನಮ್ಮ ಬೇಡಿಕೆಯಲ್ಲ. ನೀವು ಸಾಲ ಮೇಳ ಮಾಡುವುದೂ ಬೇಡ, ಸಾಲ ಮನ್ನಾ ಮಾಡುವುದು ಬೇಡ. ಕನಿಷ್ಟ ನಮ್ಮ ಬೇಡಿಕೆ ಈ ರಾಜ್ಯದ ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಕೊಡಿ ರೈತರು ಬೆಳೆದಂತಹ ಬೆಳೆಗೆ ನ್ಯಾಯವಾದ ಬೆಲೆಯನ್ನು ಕೊಡಿ ಆ ಕೆಲಸವನ್ನು ಮಾಡಬೇಕಲ್ಲಾ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಏಕಾಂತಯ್ಯನವರು ಕೊಟ್ಟಂತಹ ಸಲಹೆ ಸೂಚನೆಗೆ ನಾನು ಅಭಾರಿಯಾಗಿದ್ದೇನೆ. ಒಳ್ಳೆಯಸೂಚನೆಯನ್ನು ಕೊಟ್ಟಿದ್ದೀರಿ. ತಾವು ಹೇಳಿದ್ದು ಸರಿ ಏಕೆಂದರೆ ಸಾಲದ ಮೇಲಿನ ಬಡ್ಡಿ ಕಡಿಮೆಯಾಗಬೇಕು. ನಾನು ಹೇಳುವುದು ತ್ರೀ ಟೈರ್ ಸಿಸ್ಟಮ್ ಯಾಕೆ ಇರಬೇಕು We can even

reduce it to One-tier system. ಇವತ್ತು ನಾವು ಸಾಕಷ್ಟು ಬಡ್ಡಿ ಕಡಿಮೆ ಮಾಡಲಿಕ್ಕೆ ಸಾಧ್ಯ ಇದೆ. ರೀ ಸ್ಟ್ರಕ್ಚರ್ ಮಾಡಲಿಕ್ಕೆ ಸಾಧ್ಯ ಇದೆ.

(ಗೊಂದಲ)

ಮಾನ್ಯ ಏಕಾಂತಯ್ಯನವರು ಹೇಳಿದ್ದು ಕೇಳಿ ನನಗೆ ಬಹಳ ಸಂತೋಷವಾಯಿತು. ರೈತರ ಬಗ್ಗೆ ಪ್ರೊ ನಂಜುಂಡಸ್ವಾಮಿಯವರು ಕೂಡ ಒಳ್ಳೆಯ ಸೂಚನೆ ಕೊಟ್ಟಿದ್ದಾರೆ. ರೈತನ ವಿಚಾರದಲ್ಲಿ ಕರ್ನಾಟಕ ರಾಜ್ಯದಲ್ಲಿ ಇವತ್ತು ಅವಲೋಕನ ಮಾಡತಕ್ಕ ಸಂದರ್ಭ ಬಂದಿದೆ. ಏಕೆಂದರೆ ಒಂದು ದಶಕಗಳ ಕಾಲ ಅಗ್ರಿಕಲ್ಚರ್ ಪ್ರಾಡಕ್ಟಿವಿಟಿ ಕಡಿಮೆಯಾಗಿದೆ. ಅಗ್ರಿಕಲ್ಚರ್ ಸೆಕ್ಟರಿಗೆ ಕೊಡತಕ್ಕ ಬಂಡವಾಳ ಕೂಡ ಕಡಿಮೆಯಾಗಿದೆ. ಅದೇ ಪ್ರಕಾರ ನಾವು ಇವತ್ತು ಸಾಲ, ಬಡ್ಡಿ ಮನ್ನಾ ಮತ್ತೊಂದು, ತೋರಿಕೆಗೆ ಹೇಳುತ್ತಿದ್ದೇವೆ. ಈ ಪೊಲಿಟಿಕಲ್ ಜಿಮಿಕ್ಸ್ ಏನಿದೆ ಅದನ್ನು ರೈತರಿಗೆ ಹೇಳಿ ವಂಚನೆ ಮಾಡುತ್ತಾ ಹೋಗುತ್ತಿದ್ದೇವೆ. ಹೊರತು ರೈತನ ನಿಜವಾದ ಜೀವನ ಪರಿಕ್ರಮ ಬದಲಾವಣೆ ಮಾಡಲಿಕ್ಕೆ ಯಾವ ರೀತಿ ಪ್ರಯತ್ನ ಮಾಡುತ್ತಿಲ್ಲ. ಅದಕ್ಕೆ ನಾನು ಹೇಳುವುದೇನೆಂದರೆ ಶಾಸಕರ ಸಮಿತಿ ಮಾಡೋಣ ತಾವು ಸಲಹೆಗಳನ್ನು ಕೊಡಿ. Let us form a Committee for restructuring the Co-operative credit structure. ಅಗ್ರಿಕಲ್ಚರ್‌ಗೆ ಹೆಚ್ಚು ಬಂಡವಾಳ ಕೊಡುವ ದೃಷ್ಟಿಯಲ್ಲಿ I am prepared to constitute a Committee of the Legislators and then let it come out with their recommendations.

ಇವತ್ತು ನಮ್ಮ ರೈತರು ಸಮೃದ್ಧವಾಗಿ ಬೆಳೆಯಲಿಕ್ಕೆ ನಮ್ಮ ಕೃಷಿ ಕ್ಷೇತ್ರ ನಮ್ಮ ಪ್ರೊಫೆಸರ್ ಹೇಳಿದ ಪ್ರಕಾರ ಕೆಲವು ಅನಾಹುತಗಳಿಂದ ಪಾರಾಗಿ ಹೋಗಲಿಕ್ಕೆ ಬೆಳೆ ನಷ್ಟವಾಗುವುದನ್ನು ನಿಲ್ಲಿಸಿ ರೈತನ ಬೆಳೆಯನ್ನು ಉಳಿಸತಕ್ಕ ಒಂದು ಸಮಗ್ರವಾದ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ವರದಿ ಕೊಡಲಿಕ್ಕೆ let us form an Expert Committee, a Committee of the Progressive Farmers and in addition to that a Committee of Legislators. I am going to form it. ಎರಡು ಮೂರು ತಿಂಗಳಲ್ಲಿ ವರದಿ ಕೊಡಲಿ ನಾವು ಅದರ ಪ್ರಕಾರ ಇಡೀ ಕರ್ನಾಟಕ ರಾಜ್ಯದ ಸಮೃದ್ಧವಾದ ಜೀವನವನ್ನು ನಡೆಸಲಿಕ್ಕೆ ಪೂರಕವಾಗಿ ನಾವು ಹೆಜ್ಜೆಯನ್ನಿಡಲು ಸರ್ಕಾರ ಸಿದ್ಧವಿದೆ. ರೈತರ ಪರವಾದ ಒಂದು ಹೊಸ ಕಾರ್ಯಕ್ರಮ ರಾಜ್ಯದಲ್ಲಿ ಇವತ್ತು ಪ್ರಾರಂಭವಾಗಿದೆ.

ಪ್ರೊ: ಎಂ.ಡಿ. ನಂಜುಂಡ ಸ್ವಾಮಿ : ಅಧ್ಯಕ್ಷರೇ, ನಾನು ಮುಖ್ಯ ಮಂತ್ರಿಗಳಿಗೆ ಸ್ವಲ್ಪ ನೆನಪು ಮಾಡಿಕೊಡಬೇಕು. ಕಮಿಟೀ ಆನ್ ಅಗ್ರಿಕಲ್ಚರಲ್ ಪಾಲಿಸೀಸ್ ಅಂತ ಇದೇ ಸರ್ಕಾರ ಮೂರು ವರ್ಷದ ಹಿಂದೆ ರಚನೆ ಮಾಡಿತ್ತು. There is already a Committee on Agricultural Policies which was constituted 3 years back.

SRI M. VEERAPPA MOILY : I think it has already given a Report.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಅದು ಏನಾಯಿತು ಎಂಬುದೇ ಗೊತ್ತಿಲ್ಲ. ಅದರಲ್ಲಿ ನಾನು ಒಬ್ಬ ಸದಸ್ಯನಾಗಿದ್ದೆ. ಮೂರು ವರ್ಷಗಳಿಂದ ಸಭೆಯನ್ನು ಕರೆದಿಲ್ಲ. ಅದನ್ನು ರದ್ದು ಮಾಡಿದಾರೋ ಏನೋ ಗೊತ್ತಿಲ್ಲ ಅದನ್ನು ತಿಳಿಸಿಲ್ಲ ನಮಗೆ ಈಗ ಮತ್ತೊಂದು ಅದೇ ರೀತಿಯ ಕಮಿಟಿ ರಚನೆ ಮಾಡುತ್ತೀರಿ ಅಷ್ಟೇ. There is already a Committee on Agricultural Policies.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಎರಡು ವರ್ಷದ ಹಿಂದೆ ಒಂದು ಕೇಜಿ ರೇಷ್ಮೆ ಗೂಡಿನ ಬೆಲೆ 220 ರೂಪಾಯಿವರೆಗೂ ಕೂಡ ಇತ್ತು. ಇವತ್ತು 15-20 ದಿವಸದಿಂದ ಬಿಟ್ಟರೆ 60-70 ರೂಪಾಯಿಗೆ ಮಾರಾಟವಾಯಿತು. ಇದಕ್ಕೆ ರೈತರು

ಯಾರೂ ಕಾರಣವಲ್ಲ, ನಾವು ಹೇಳಿದೆವು ಸದನದಲ್ಲೂ ಕೂಡ ಚರ್ಚೆ ಆಯಿತು. ನಾವು ಏನು ಹೇಳುತ್ತೇವೆಂದರೆ ಚೈನಾ ದೇಶದಿಂದ ಬರತಕ್ಕ ರೇಶ್ಮೆಯನ್ನು ಇಲ್ಲಿಗೆ ತರಿಸಬೇಡಿ. ಅದು ತರಿಸುವುದರಿಂದ ನಮ್ಮ ರೇಷ್ಮೆ ಗೂಡಿನ ಬೆಲೆ ಬಿದ್ದು ಹೋಗಿದೆ ಎಂದು ಹೇಳಿದ್ದೆ. ಒಂದು ಕೇಜಿ ರೇಷ್ಮೆಗೆ.......

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ನಿಮ್ಮ ಎಕ್ಸ್‌ಪೋರ್ಟ್, ಇಂಪೋರ್ಟ್ ಪಾಲಿಸಿನಲ್ಲಿ Cocoon has been removed from the Negative List. ಬರೋದು ದಾರ ಅಲ್ಲಾ ಬರೇ ಕಕೂನ್ ಬರುತ್ತೆ.

ಶ್ರೀ ಸಿ. ಬೈರೇಗೌಡ : ಕಳೆದ ಎರಡು ವರ್ಷದಿಂದ ಒಂದು ಕೇಜಿ ರೇಷ್ಮೆಗೆ ಸುಮಾರು 120-140-150 ರೂಪಾಯಿ ಬೆಲೆ ಕಡಿಮೆಯಾಯಿತಲ್ಲಾ ಇದು ಯಾರು ಮಾಡಿದ್ದು ನೀವು ಅಲ್ಲವಾ ಮಾಡಿದ್ದು, ಕೇಂದ್ರದಲ್ಲಿರುವ ನಿಮ್ಮ ಸರ್ಕಾರ ಜವಾಬ್ದಾರಿ ಅಲ್ಲವಾ ಇದನ್ನು ನೀವು ಆಲೋಚನೆ ಮಾಡದೆ ನೀವು ಯಾವ ರೀತಿ ರೈತರನ್ನು ಉದ್ಧಾರ ಮಾಡುತ್ತೀರಿ? ಬೆಳೆದಂತಹ ಉತ್ಪನ್ನಕ್ಕೆ ಸರಿಯಾದ ಬೆಲೆ ಕೊಡದೆ ಇದ್ದರೆ ರೈತರು ಯಾವ ರೀತಿ ಉದ್ಧಾರವಾಗುತ್ತಾರೆ. ಆದುದರಿಂದ ನಾವು ಹೇಳುವುದು ಒಂದು ಸಾರಿ ನೀವು ಬಡ್ಡಿ ಮತ್ತು ಸುಸ್ತಿ ಬಡ್ಡಿ ವಜಾ ಮಾಡಿ ಎಂದು.

ಶ್ರೀ ಎಂ. ವೀರಪ್ಪ ಮೊಯಿಲಿ : ಎಲ್ಲಾ ವಿಚಾರಗಳನ್ನೂ ಅವಲೋಕನ ಮಾಡತಕ್ಕದ್ದು including the credit structure, investment in Agriculture and also about the indebtedness of the Agriculturists. ಈಗಾಗಲೇ ಇದರ ಬಗ್ಗೆ ಒಂದು ಸಮಿತಿಯನ್ನು ಮಾಡಿದ್ದರೂ ಅದು ಇದುವರೆಗೂ ಒಂದು ಮೀಟಿಂಗ್‌ನ್ನೂ ಮಾಡಿಲ್ಲವೆಂದು ತಾವು ಹೇಳಿದಿರಿ. I am going to do this. I will constitute a Committee covering all these aspects. Let it give a Report within 3 months. Let us have a study instead of formulating an adhoc policy

ಪ್ರತಿಸಾರಿಯೂ ನಾವು ಅಡ್‌ಹಾಕ್ ಆಗಿ ಪಾಲಿಸಿಗಳನ್ನು ಅನೌನ್ಸ್‌ಮಾಡತಕ್ಕದ್ದು, ಬೇಡಿಕೆಗಳನ್ನು ಮಂಡಿಸತಕ್ಕದ್ದು if it is politically convenient to us, make some announcement. ಮೀಟಿಂಗ್ ಮಾಡುವ ಬದಲು ರಾಜಕಾರಣಿಗಳ ಕೈ ಕೂಸಾಗಿ ರೈತ ಬಲಿಯಾಗುವ ಬದಲು ರೈತನ ನಿಜವಾದ ಪರಿಸ್ಥಿತಿಯನ್ನು ಗಮನಿಸಿ ವರದಿಯನ್ನು ಕೊಡಲಿ. we will involve the Legislators and also Parliament Members.

ಶ್ರೀ ವಾಟಾಳ್ ನಾಗರಾಜ್ : ವರದಿಯನ್ನು 3 ತಿಂಗಳೊಳಗೆ ಕೊಡಲೆಂದು ತಾವು ಹೇಳುತ್ತಿದ್ದೀರಿ. ಅದುವರೆಗಾದರೂ ತಾವು ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು.......

ಶ್ರೀ ಎಂ. ವೀರಪ್ಪ ಮೊಯಿಲಿ : ಆದ್ದರಿಂದಲೇ ನಾನು ಹೇಳಿದ್ದು. ಅಸಲು ಮತ್ತು ಬಡ್ಡಿಯನ್ನು ಪಾವತಿ ಮಾಡಿದರೆ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುವುದಕ್ಕೆ 31-3-94ರವರೆಗೆ ರಿಯಾಯಿತಿ ಕೊಡುತ್ತೇವೆ. ಮೊದಲು ವರದಿ ಬರಲಿ ಅನಂತರ ಪರಿಶೀಲನೆ ಮಾಡುತ್ತೇವೆ. ಇನ್ನು ಮಾನ್ಯ ಚಂದ್ರೇಗೌಡರು ಇರಿಗೇಷನ್ ಬಗ್ಗೆ ಒಂದು ಸರ್ಕ್ಯುಲರ್‌ನ್ನು ಕೊಟ್ಟರು. ನಾನು ಸ್ಪಷ್ಟವಾಗಿ ಹೇಳಬೇಕೆಂದರೆ, ತಾವು ಹೇಳಿದಂಥ ರಹಸ್ಯ ಪತ್ರ ಏನಿದೆ ಅದು ಸರ್ಕಾರದಿಂದ ಹೋಗಿಲ್ಲ. ಅಥವಾ ಹಣಕಾಸಿನ ಇಲಾಖೆಯಿಂದ ಕೂಡ ಹೋಗಿಲ್ಲ. ಇದರಲ್ಲಿ ಕೂಡ 62 ಪರ್ಸೆಂಟ್ ವರೆಗೆ ಸೀಮಿತಗೊಳಿಸಿರುವುದು ಸ್ಪಷ್ಟವಾಗಿ ಕಾಣಿಸುತ್ತದೆ. ಡಿಸೆಂಬರ್ ಕೊನೆಯವರೆಗೂ ಈ ವರ್ಷದ ಯೋಜನೆಗಳನ್ನೆಲ್ಲಾ ಅನುಷ್ಠಾನ ಮಾಡತಕ್ಕ ಶಕ್ತಿ ನಮಗಿದೆ. ನೂರಕ್ಕೆ ನೂರು ಪರ್ಸೆಂಟ್ ನಮ್ಮ ಯೋಜನೆಗಳನ್ನೆಲ್ಲಾ ಅನುಷ್ಠಾನ ಮಾಡತಕ್ಕ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡುತ್ತೇವೆ. ಆದರಲ್ಲೂ ತಾವು ಹೇಳಿದಂಥ

ಇರಿಗೇಷನ್ ಪ್ರಾಜೆಕ್ಟ್ ಬಗ್ಗೆ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ನೂರಕ್ಕೆ ನೂರು ಪಾಲು ಅನುಷ್ಠಾನ ಮಾಡಬೇಕೆಂಬ ಉದ್ದೇಶದಿಂದಲೇ ನಾವು ಬ್ಯಾಂಕ್‌ನವರನ್ನು ಕೇಳಿಕೊಂಡಿದ್ದೇವೆ.

ಶ್ರೀ ವೈ.ಕೆ. ರಾಮಯ್ಯ: ನಿಮ್ಮ ಉದ್ದೇಶ ಇದು ಆಗಬಾರದು, ಅದು ನಿಮ್ಮ ತೀರ್ಮಾನ ಆಗಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ: ನಮ್ಮ ತೀರ್ಮಾನ ಕೂಡ ಆಗಿದೆ. ನಾನು ಈಗಾಗಲೇ ಹೇಳಿಕೆಯನ್ನೂ ಕೂಡ ಕೊಟ್ಟಿದ್ದೇನೆ. ಇನ್ನು ಜನವರಿ 94ರವರೆಗೆ 979 ಕೋಟಿ ರೂ.ಗಳ ಪೈಕಿ 560 ಕೋಟಿ ರೂ. ಖರ್ಚಾಗಿದೆ. ಇನ್ನು 419 ಕೋಟಿ ರೂ. ಖರ್ಚಾಗಬೇಕಾಗಿದೆ. ಎಸ್ಟಾಬ್ಲಿಷ್‌ಮೆಂಟ್‌ನಲ್ಲಿ 158 ಕೋಟಿ ರೂ. ಪೈಕಿ 132 ಕೋಟಿ ಖರ್ಚಾಗಿದ. ಇನ್ನು 26 ಕೋಟಿ ಖರ್ಚಾಗಬೇಕಾಗಿದೆ. ಕಾಮಗಾರಿಯಲ್ಲಿ 821 ಕೋಟಿಯಲ್ಲಿ 428 ಕೋಟಿ ಖರ್ಚಾಗಿದೆ. 393 ಕೋಟಿ ರೂ. ಖರ್ಚಾಗಬೇಕಾಗಿದೆ. ಇದನ್ನು ಫೆಬ್ರವರಿ ಮತ್ತು ಮಾರ್ಚಿ ತಿಂಗಳಲ್ಲಿ ಖರ್ಚು ಮಾಡತಕ್ಕ ಎಲ್ಲ ಪ್ರಯತ್ನಗಳನ್ನೂ ಕೂಡ ನಾವು ಮಾಡಿದ್ದೇವೆ. ಆದರೆ ಅವರು ಕೊಟ್ಟಿರತಕ್ಕ ರಹಸ್ಯಪತ್ರದಲ್ಲಿ ಏನು ಹೇಳಿದ್ದಾರೆಂದರೆ, ಕಾರ್ಯಪಾಲಕ ಅಭಿಯಂತರರು, ಕಾರ್ಯಕ್ರಮದಲ್ಲಿ ಪಟ್ಟಿ ಅನುಮೋದಿತವಾಗಿದೆ ಎಂಬ ನೆಪದಿಂದ ಎಲ್ಲ ಕಾಮಗಾರಿಗಳನ್ನೂ ಕಾರ್ಯರೂಪಕ್ಕೆ ತರಲು ಬಿಟ್ಟರೆ ಬಿಲ್ಲುಗಳ ರಾಶಿಯೇ ಹರಿದು ಬಾಕಿ ಬಿಲ್ಲುಗಳ ಪ್ರಮಾಣ ಅಧಿಕ ಆಗುವುದು. ಇದು ಸರ್ಕಾರದ ಹಿತದೃಷ್ಟಿಯಿಂದ ಒಳ್ಳೆಯದಲ್ಲ. ಇದು ಕ್ರೆಡಿಬಿಲಿಟಿ ಪ್ರಶ್ನೆಯಾಗಿದೆ. ಆದ್ದರಿಂದ ಇಲಾಖೆಯಲ್ಲಿ ಅರಾಜಕತೆ ಬಂದು ಮಂಜಾರಾತಿ ಆಗಿದೆ ಎಂದು ಇವತ್ತು ಖರ್ಚು ಮಾಡಿಕೊಂಡು ಬಿಲ್ಲುಗಳ ರಾಶಿಯನ್ನು ಹಾಕಿಕೊಂಡು ನಮ್ಮ ಎಸ್.ಟಿ. ವ್ಯವಸ್ಥೆಯನ್ನೇ ಅದಲುಬದಲು ಮಾಡತಕ್ಕ ಪ್ರವೃತ್ತಿ ಏನಿದೆ ಅದನ್ನು ನಿಲ್ಲಿಸಬೇಕೆಂಬ ಉದ್ದೇಶದಿಂದ ಇದನ್ನು ಅವರು ಕೊಟ್ಟಿದ್ದಾರೇನೋ ಗೊತ್ತಿಲ್ಲ. ಆದರೆ ಸರ್ಕಾರದಿಂದ ಅಥವಾ ಆರ್ಥಿಕ ಇಲಾಖೆಯ ವತಿಯಿಂದ ನಾವು ಯಾವುದೇ ರಹಸ್ಯ ಪತ್ರವನ್ನೂ ಹೊರಡಿಸಿಲ್ಲ.

ಪ್ಲಾನಿಂಗ್ ಬೋರ್ಡ್ ಬಗ್ಗೆ ಮಾನ್ಯ ಚಂದ್ರೇಗೌಡರು ಹೇಳಿದರು ಆದರೆ ಪ್ಲಾನಿಂಗ್ ಬೋರ್ಡ್ ಏನು ಮಾಡಿದೆ? ಹಣಕಾಸು ಕೊಟ್ಟಂತೆ ಅವರು ಖರ್ಚುಮಾಡಬೇಕಾದ ಅವಶ್ಯಕತೆ ಇಲ್ಲ. ಪ್ಲಾನಿಂಗ್ ಬೋರ್ಡ್ ಹೇಳಿದ್ದನ್ನು ಅನುಷ್ಠಾನ ಮಾಡುವುದಕ್ಕೆ ಪ್ಲಾನಿಂಗ್ ಬೋರ್ಡ್ ಒಂದು ಸಬ್ ಕಮಿಟಿಯನ್ನು ಪಿ.ಆರ್. ನಾಯಕ್ ಅವರ ಅಧ್ಯಕ್ಷತೆಯಲ್ಲಿ ಮಾಡಿ ಸಧ್ಯದಲ್ಲಿ ವರದಿ ಕೊಡುತ್ತಿದೆ. ಆದುದರಿಂದ ರಿಸೋರ್ಸಸ್ ಮೊಬಿಲೈಸೇಷನ್ ಮಾಡುವುದು ಅಥವಾ ಔಟ್‌ಸೈಡ್ ದಿ ಪ್ಲಾನ್ ಹಣ ಜೋಡಿಸುವುದಕ್ಕೆ ಯಾವ ರೀತಿಯಲ್ಲಿ ಸಾಧ್ಯವಿದೆ ಎಂದು ನಾವು ಕಾರ್ಯಕ್ರಮ ಹಾಕುತ್ತಿದ್ದೇವೆಯೇ ಹೊರತು ಇವತ್ತು ಪ್ಲಾನಿಂಗ್ ಬೋರ್ಡಿನಲ್ಲಿ ನಿರ್ಣಯ ಮಾಡಿದ್ದಾರೆಂಬ ವ್ಯಾಖ್ಯೆ ಇದೆ, ಅದು ಸರಿಯಲ್ಲವೆಂದು ಹೇಳುವುದಕ್ಕೆ ಅಪೇಕ್ಷಿಪಡುತ್ತೇನೆ. ತಾವು ಪವರ್ ಚಾರ್ಜಸ್ ಬಗ್ಗೆ ಹೇಳಿದಿರಿ, ಅದನ್ನು ಕೇಂದ್ರ ಸರ್ಕಾರದವರು ಕ್ಲಿಯರ್ ಮಾಡಿದ್ದಾರೆ. ಆದರೆ ಪ್ರಮುಖವಾಗಿ ಅವರು 10 ಹೆಚ್.ಪಿ.ವರೆಗೆ ಏನು ಫ್ರೀ ಕೊಡುತ್ತಿದ್ದರು ಅದಕ್ಕೆ ನಾವು 610ಕೋಟಿ ರೂಪಾಯಿ ವರ್ಷಕ್ಕೆ ಸಬ್ಸಿಡಿ ಕೊಡುತ್ತಿದ್ದೇವೆ ಕೆ.ಇ.ಬಿ.ಯಲ್ಲಿ ಹತ್ತು ಹೆಚ್.ಪಿ. ವರೆಗೆ ಫ್ರೀ ಕೊಟ್ಟದ್ದು 610 ಕೋಟಿ ರೂಪಾಯಿ. ಇವತ್ತು ಸುಮಾರು 260 ಕೋಟಿ ರೂಪಾಯಿಗಳನ್ನು ರೈತರು ಕೊಟ್ಟರೆ ಕೆ.ಇ.ಬಿ. ಯನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವಿದೆ. ಆದುದರಿಂದ ವಿಶ್ವ ಬ್ಯಾಂಕಿನವರು ಹೇಳಿದ್ದು ಕೆ.ಇ.ಬಿ.ಯವರು ಕಮರ್ಷಿಯಲ್ ಬೇಸಿಸ್ ಮೇಲೆ ಕೆಲಸ ಮಾಡಬೇಕಾಗುತ್ತದೆ. ವ್ಯವಹಾರಿಕ ದೃಷ್ಟಿಯಿಂದ ಕೆಲಸ ಮಾಡಿದಾಗ ನಾವು ವಿಶ್ವ ಬ್ಯಾಂಕಿನಿಂದ ಸಾಲ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲವೆಂಬ ದೃಷ್ಟಿಯಿಂದ ಸಸ್ಪೆಂಡ್ ಮಾಡಿದ್ದಾರೆಯೇ ಹೊರತು ಅದೇ ಮುಖ್ಯ ಅಲ್ಲ. ಇವತ್ತಿಗೂ ಆ ಬ್ಯಾನ್ ಲಿಫ್ಟ್ ಮಾಡಿಲ್ಲ. ಏಕೆಂದರೆ ಆ ಟ್ಯಾರಿಫ್ ಬದಲಾವಣೆ ಮಾಡಿಲ್ಲ. ಆದರೆ ಬ್ಯಾನ್

ಏನಾಗಿದೆ ಎಂದರೆ ಇರಿಗೇಷನ್ ಪ್ರಾಜೆಕ್ಟಿನದು ಮಾತ್ರ ಲಿಫ್ಟ್ ಮಾಡಿದ್ದಾರೆಂದು ಈಗಾಗಲೇ ಈ ಬಗ್ಗೆ ಹೇಳಿದೆ. ಇನ್ನು ಬೈರೇಗೌಡರು ಒಂದು ವಿಚಾರ ಹೇಳಿದರು, ಚುನಾವಣೆ ಗುರುತಿನ ಚೀಟಿಯ ಬಗ್ಗೆ .ಕರ್ನಾಟಕ ರಾಜ್ಯ ಗುರುತಿನ ಚೀಟಿಯನ್ನು ಅನುಷ್ಠಾನ ಮಾಡಿದರೆ 60 ಕೋಟಿ ರೂಪಾಯಿ ಖರ್ಚು ಮಾಡಬೇಕು. ಹತ್ತು ಕೋಟಿ ರೂಪಾಯಿಗಳನ್ನು ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್‌ಗೆ ಖರ್ಚು ಮಾಡಬೇಕು. ಒಟ್ಟು 70 ಕೋಟಿ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಇದಕ್ಕೆ 70 ಪರ್ಸೆಂಟ್ ಆದರೂ ಕೇಂದ್ರ ಸರ್ಕಾರದವರು ಭರ್ತಿ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ. ಆದರೆ ನಾವು ಇದನ್ನು ಅನುಷ್ಠಾನ ಮಾಡುವುದಕ್ಕೆ ಒಪ್ಪಿದ್ದೇವೆ. ಅದರ ತಯಾರಿಕೆಗೆ ನಾವು ಬೇರೆ ಬೇರೆ ರೀತಿಯಲ್ಲಿ ಸಮಾಲೋಚನೆ ಮಾಡುತ್ತಿದ್ದೇವೆ, ಸಭೆ ಸಮಾರಂಭ ಮಾಡುತ್ತಿದ್ದೇವೆ.

ಮೊನ್ನೆತಾನೇ ಮುಖ್ಯ ಮಂತ್ರಿಗಳ ಸಮಾಲೋಚನಾ ಸಭೆಯನ್ನು ಕೇಂದ್ರದ ಗೃಹ ಮಂತ್ರಿಗಳು ಕೂಡ ಕರೆದಿದ್ದರು. ಈ ಬಗ್ಗೆ ಮಾತುಕತೆ ನಡೆಯುತ್ತಿದೆ. ಆದುದರಿಂದ ಗುರುತಿನ ಚೀಟಿ ಮಾಡುವುದರಲ್ಲಿ ಚುನಾವಣಾ ಆಯೋಗದವರು ನಮಗೆ ಏನು ಒಂದು ಸುತ್ತೋಲೆ ಕಳುಹಿಸಿದ್ದಾರೆ ಅದರ ಪ್ರಕಾರ ನಾವು ಇದನ್ನು ಅನುಷ್ಠಾನ ಮಾಡಬೇಕೆಂದು ಈಗಾಗಲೇ ಕ್ರಮ ಕೈಗೊಂಡಿದ್ದೇವೆ. ಹಣದ ಪ್ರಶ್ನೆ ಬಂದಾಗ ಕೇಂದ್ರ ಸರ್ಕಾರದವರು 80 ಪರ್ಸೆಂಟ್ ಕೊಡಬೇಕೆಂದು ಈಗಾಗಲೇ ಹೇಳಿದ್ದೇವೆ.

ಶ್ರೀ ಸಿ. ಬೈರೇಗೌಡ : ನವೆಂಬರ್‌ನಲ್ಲಿ ನಡೆಯುವ ಚುನಾವಣೆಯೊಳಗೆ ಗುರುತಿನ ಚೀಟಿಯನ್ನು ರಾಜ್ಯದ ಮತದಾರರಿಗೆ ಕೊಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಕೊಡುವುದು ಸರಿಯೇ ಆದರೆ ಹಣ ಬೇಕು. ಹಣ ಎಲ್ಲಿಂದ ಬರುತ್ತದೆ? ಕೇಂದ್ರ ಸರ್ಕಾರದವರು ಹಣ ಕೊಡಬೇಕು, ಇಲ್ಲದಿದ್ದರೆ ನಮ್ಮ ಯೋಜನೆಯಲ್ಲಿರತಕ್ಕ ಹಣ ತೆಗೆದು ಕೊಡಬೇಕು. ಪ್ರಶ್ನೆ ಇರತಕ್ಕದ್ದು ಇಷ್ಟೆ. ಈ ಬಗ್ಗೆ ಸ್ಪಷ್ಟೀಕರಣ ಕೊಟ್ಟಿದ್ದೇವೆ. ಆದ್ದರಿಂದ ರಾಜ್ಯಪಾಲರ ಭಾಷಣದ ಮೇಲಿನ ನಿರ್ಣಯದ ಬಗ್ಗೆ ಧನ್ಯವಾದದ ಮಂಡನೆ ಏನಿದೆ ಇದಕ್ಕೆ ಸಭೆ ಒಪ್ಪಿಗೆ ಕೊಡಬೇಕೆಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಸುಸ್ತಿ ಬಡ್ಡಿ ಬಗ್ಗೆ ಸ್ಪಷ್ಟವಾದ ಭರವಸೆ ಕೊಡಬೇಕು.

ಶ್ರೀ ಸಿ. ಬೈರೇಗೌಡ : ಕಳೆದ 4 ವರ್ಷಗಳಿಂದ ನಾವೆಲ್ಲರೂ ಒಕ್ಕೊರಲಿನಿಂದ ಹೇಳುತ್ತಿದ್ದೇವೆ.

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ : ನಿಮ್ಮ ಅಭ್ಯಾಸ ಬಲ ಹೋಗುವುದಿಲ್ಲ. ಒಂದು ತಿಳಿದುಕೊಳ್ಳಬೇಕು. ಯಾವಾಗಲೂ ನೀವು ಚುಚ್ಚಿದಾಗ ನಾವು ಎಷ್ಟು ಸಮಾಧಾನದಿಂದ ಇರುತ್ತೇವೆ ಅದನ್ನು ನೀವು ಮೊದಲು ಕಲಿತುಕೊಳ್ಳಿ. ನಿಮಗೆ ಚುಚ್ಚಿದಾಗ ನೀವು ಎಲ್ಲ ಹೀಗೆ ಎದ್ದುನಿಂತುಕೊಳ್ಳತಕ್ಕದ್ದು ಸರಿಯಲ್ಲ.

ಉಪಾಧ್ಯಕ್ಷರು : ಶ್ರೀ ಪಿ.ಜಿ.ಆರ್. ಸಿಂಧ್ಯ ಅವರಿಂದ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಪ್ರಸ್ತಾವಕ್ಕೆ ತಿದ್ದುಪಡಿ. ಮಾನ್ಯ ಸದಸ್ಯರು ಪ್ರಸ್ತಾವನೆಯನ್ನು ಮಂಡಿಸಬೇಕು.

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಉಪಾಧ್ಯಕ್ಷರು : ಮಾನ್ಯ ಸದಸ್ಯರು ಇಲ್ಲದಿರುವುದರಿಂದ ತಿದ್ದುಪಡಿಯನ್ನು ತಿರಸ್ಕರಿಸಲಾಗಿದೆ. ಶ್ರೀಮಾನ್ ಏಕಾಂತಯ್ಯನವರಿಂದ ರಾಜ್ಯಪಾಲರ ಭಾಷಣಕ್ಕೆ ತಿದ್ದುಪಡಿ.

ತಿದ್ದುಪಡಿ ಪ್ರಸ್ತಾವ

(ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಪ್ರಸ್ತಾವಕ್ಕೆ ತಿದ್ದುಪಡಿ)

ಶ್ರೀ ಹೆಚ್. ಏಕಾಂತಯ್ಯ: ನನ್ನ ತಿದ್ದುಪಡಿ ಪ್ರಸ್ತಾವ ಈ ರೀತಿ ಇದೆ. ಪ್ರಸ್ತಾವದ ಕೊನೆಯಲ್ಲಿ ಈ ಕೆಳಕಂಡಂತೆ ಸೇರಿಸುವುದು:

"ಆದರೆ ಆಡಳಿತ ಪಕ್ಷದಲ್ಲಿ ನಡೆದ ಯಾದವಿ ಕಲಹ ರಾಜ್ಯದ ಆಡಳಿತದ ಮೇಲೆ ಬೀರಿದ ದುಷ್ಪರಿಣಾಮದ ಬಗ್ಗೆ ಪ್ರಸ್ತಾಪಿಸದೆ ಇರುವುದಕ್ಕೆ ಸದನವು ವಿಷಾದಿಸುತ್ತದೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "ಆದರೆ ಆಡಳಿತ ಪಕ್ಷದಲ್ಲಿ ನಡೆದ ಯಾದವಿ ಕಲಹ ರಾಜ್ಯದ ಆಡಳಿತದ ಮೇಲೆ ಬೀರಿದ ದುಷ್ಪರಿಣಾಮದ ಬಗ್ಗೆ ಪ್ರಸ್ತಾಪಿಸದೆ ಇರುವುದಕ್ಕೆ ಸದನವು ವಿಷಾದಿಸುತ್ತದೆ"

ಪ್ರಸ್ತಾವ ತಿರಸ್ಕೃತವಾಯಿತು.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್: ಮಾನ್ಯ ಉಪಾಧ್ಯಕ್ಷರೇ, ನಾನು ರಾಜ್ಯಪಾಲರ ಭಾಷಣಕ್ಕೆ ಈ ತಿದ್ದುಪಡಿ ನಿರ್ಣಯವನ್ನು ಮಂಡಿಸುತ್ತಿದ್ದೇನೆ.

"At the end of the Motion the following be added : "but regret that the Government have not taken into consideration the negative effects the New Liberal Economic Policies and the major structural reforms in the economic, industrial and trade policies announced by the Government of India would have on the powers of the Government of the State in providing better economic opportunities to minority communities, to provide and ensure fair and adequate representation of SC's and ST's in Civil Services, to ensure the well-being of the Backward Classes, to formulate a comprehensive plan for the development of women, to evolve a multiple sector plan for child development, or to arrest the growing unemployment among the graduates of various disciplines in the State"

ಪ್ರಸ್ತಾವ ಮಂಡಿಸಲ್ಪಟ್ಟಿತು

ಉಪಾಧ್ಯಕ್ಷರು: ಈಗ ತಿದ್ದುಪಡಿ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಶ್ನೆ ಏನೆಂದರೆ: "At the end of the Motion the following be added : "but regret that the Government have not taken into consideration the negative effects the New Liberal Economic Policies and the major structural reforms in the economic, industrial and trade policies announced by the Government of India would have on the powers of the Government of the State in providing better economic opportunities to minority communities, to provide and ensure fair and adequate representation of SC's and ST's in Civil Services, to ensure the well-being of the Backward Classes, to formulate a comprehensive plan for the development of women, to evolve a multiple sector plan for child development, or to arrest the growing unemployment among the graduates of various disciplines in the State"

ಪ್ರಸ್ತಾವ ತಿರಸ್ಕರಿಸಲ್ಪಟ್ಟಿತು

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೆ, ತಾವು ವಂದನಾ ನಿರ್ಣಯ ತೆಗೆದುಕೊಳ್ಳುವುದಕ್ಕೆ ಮುಂಚೆ ಒಂದು ನಿಮಿಷ ಅವಕಾಶ ಕೊಡಿ. ಕಳೆದ ನಾಲ್ಕೂವರೆ ವರ್ಷಗಳಿಂದ ನಾವು ಈ ಕಡೆಯಿರತಕ್ಕವರು ಒಂದೇ ಸಮನೆ ಒಕ್ಕೊರಲಿನಿಂದ ಹೇಳುತ್ತಿದ್ದೇವೆ. ರಾಜ್ಯದ ರೈತರ ಮೇಲೆ ಹೊರೆಯಾಗಿರತಕ್ಕ ಅವರ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿಬಡ್ಡಿಯನ್ನು ವಜಾಮಾಡಬೇಕೆಂದು. ಇವತ್ತು ಸ್ವಲ್ಪಮಟ್ಟಿಗೆ ಸುಸ್ತಿ ಬಡ್ಡಿಯನ್ನು ವಜಾ ಮಾಡುತ್ತೇನೆಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಅದಕ್ಕಾಗಿ ತಮಗೆ ಧನ್ಯವಾದಗಳು. ಆದರೆ ಅತಿಮುಖ್ಯವಾಗಿ ಬಡ್ಡಿಯನ್ನು ವಜಾ ಮಾಡತಕ್ಕದ್ದು ಇದೆ. ಆ ಕಡೆಯವರು ಸಹ ತಮ್ಮ ಪಕ್ಕದಲ್ಲಿ ಕುಳಿತಿರುವವರು ಬಹಳ ಚೆನ್ನಾಗಿ ಮಾತನಾಡಿದರು. ನಮ್ಮ ಕಾನಡೆಯವರು ಬಹಳ ಚೆನ್ನಾಗಿ ಮಾತನಾಡಿದರು.

ಉಪಾಧ್ಯಕ್ಷರು : ಏನಾಗಬೇಕು ಅದನ್ನು ಬೇಗ ಹೇಳಿ.

ಶ್ರೀ ಸಿ. ಬೈರೇಗೌಡ : ದಯವಿಟ್ಟು ತಾವು ಬಡ್ಡಿಯನ್ನು ವಜಾಮಾಡಬೇಕೆಂದೂ ಅದಕ್ಕೆ ಒಪ್ಪಿಕೊಳ್ಳಬೇಕೆಂದು ಉಪಾಧ್ಯಕ್ಷರ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳು ವಿರೋಧಪಕ್ಷದ ನಾಯಕರ ಸಭೆಯನ್ನು ವರ್ಷಕ್ಕೊಂದು ಸಾರಿ ಕರೆದು ರೈತರ ಬಗ್ಗೆ ಚರ್ಚೆ ಮಾಡುತ್ತೇನೆಂದು ಹೇಳಿ ನಮ್ಮನ್ನು ಮೋಸಗೊಳಿಸಿದ್ದಾರೆ ಆ ವಿಚಾರ ಈಗ ಬೇಕಾಗಿಲ್ಲ. ನೇರವಾಗಿ ಈಗ ಹೇಳಲಿ, ಅವರು ಏನು ಹೇಳತಕ್ಕದ್ದು ಇದೆ ಮುಖ್ಯಮಂತ್ರಿಗಳು ನಮಗೆ ಭರವಸೆಯನ್ನು ಕೊಡಲಿ. ರೈತರ ಸಾಲದ ಮೇಲಿನ ಬಡ್ಡಿಯನ್ನು ವಜಾ ಮಾಡಿದ್ದೇನೆಂದು ಆ ಭರವಸೆಯನ್ನು ಕೊಡಲಿ ಅದಕ್ಕೆ ನಾನು ಒತ್ತಾಯ ಮಾಡುತ್ತಿದ್ದೇನೆ. ಬಡ್ಡಿಯ ವಿಚಾರದಲ್ಲಿ ಕೊನೆಯ ಮಾತು ಹೇಳಿ. ನಮ್ಮನ್ನು ಕರೆದು ಏಕೆ ಮಾತನಾಡಿದ್ದೀರಿ? ಯಾವ ಉದ್ದೇಶಕ್ಕೆ ಮಾತನಾದಿದ್ದೀರಿ?

ಉಪಾಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್ ಮತ್ತು ಬೈರೇಗೌಡರೇ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುತ್ತೇನೆಂದೂ ಅದರಿಂದ 13 ಕೋಟಿ ರೂಪಾಯಿ ಖರ್ಚು ಬರುತ್ತದೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ : ನಾಲ್ಕು ವರ್ಷಗಳಿಂದ ನಾವು ಇದರ ಬಗ್ಗೆ ಸತತವಾಗಿ ಮಾತನಾಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಈ ವಿಚಾರದಲ್ಲಿ ನಾವೆಲ್ಲ ಒಂದಾಗಿ ಒಂದು ತೀರ್ಮಾನಕ್ಕೆ ಬಂದು ಸಾಲ ಮನ್ನಾ ಮಾಡುತ್ತೇವೆಂದು ಹೇಳದಿದ್ದರೂ ಬಡ್ಡಿ ಮತ್ತು ಸುಸ್ತಿಬಡ್ಡಿಯನ್ನು ಮನ್ನಾ ಮಾಡಬೇಕೆನ್ನುವ ಒಂದು ತೀರ್ಮಾನಕ್ಕೆ ಬಂದು ಒಂದಲ್ಲ ಎರಡು ಸಾರಿ ಸಭೆ ಕರೆದರು. ನಿನ್ನೆ ಸಭೆ ಕರೆದರು. ನಿನ್ನೆ ಸಹ ಬಹಳ ಆಶಾದಾಯಕವಾಗಿ ನಮಗೆ ಒಂದು ಭರವಸೆಯನ್ನು ಕೊಡುತ್ತಾರೆಂದು ಅರದುಕೊಂಡಿದ್ದೆ. ಆದರೆ ಇವತ್ತು ಇವರ ಮಾತುಕತೆ ನೋಡಿದರೆ ಭರವಸೆ ಹುಸಿಯಾಗುತ್ತಿದೆ. ಆದ್ದರಿಂದ ನಿಮ್ಮ ಸರ್ಕಾರದ ನೀತಿಯನ್ನು ವಿರೋಧಿಸಿ ಹೊರಗೆ ಹೋಗಬೇಕಾಗುತ್ತದೆ. ಮುಖ್ಯಮಂತ್ರಿಗಳು ಏನು ಹೇಳುತ್ತಾರೆ ಹೇಳಲಿ ನಾವು ಆಮೇಲೆ ಹೊರಗಡೆ ಹೋಗುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಸಾಕಷ್ಟು ಉತ್ತರಗಳನ್ನು ಅನೇಕ ವಿಚಾರಗಳಲ್ಲಿ ಹೇಳಿದ್ದಾರೆ. ಅವರು 1989ನೇ ಇಸವಿಯಿಂದ ಅವರ ಸರ್ಕಾರದ ಸಾಧನೆಗಳೇನು ಏನೇನು ಮಾಡಿದ್ದಾರೆ ಅದನ್ನು ಹೇಳುವುದನ್ನು ಬಿಟ್ಟು ಕಳೆದ ವರ್ಷ ಇವರು ಮುಖ್ಯಮಂತ್ರಿಗಳಾದ ಒಂದು ವರ್ಷದಲ್ಲಿ ಏನು ಮಾಡಿದ್ದಾರೆ ಅದನ್ನೆಲ್ಲ ಹೇಳಿದ್ದಾರೆ. ಕಳೆದ ವರ್ಷದ ರಾಜ್ಯಪಾಲರ ಭಾಷಣದಲ್ಲಿ

ಏನು ಹೇಳಿದ್ದಾರೆ. ಈ 12 ತಿಂಗಳು ಏನೇನು ಆಗಿದೆ ಅದನ್ನು ಹೇಳಿದ್ದಾರೆ. ಸಮಯ ಸಿಗಲಿಲ್ಲವೆಂದು ನಮ್ಮಲ್ಲಿ ಅನೇಕ ಜನ ಚರ್ಚೆಯಲ್ಲಿ ಭಾಗವಹಿಸಲಿಲ್ಲ. ಅನೇಕ ವಿಚಾರಗಳನ್ನು ಕಳೆದ ವರ್ಷದ ರಾಜ್ಯಪಾಲರ ಭಾಷಣಕ್ಕೆ ಇವತ್ತಿನ ರಾಜ್ಯಪಾಲರ ಭಾಷಣಕ್ಕೆ ಇರತಕ್ಕ ವ್ಯತ್ಯಾಸವನ್ನು ಇವರ ಸಾಧನೆಯನ್ನು ಹೇಳತಕ್ಕದ್ದು ಸಮಯ ಸಿಗಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಕಳೆದ ವರ್ಷದ ರಾಜ್ಯಪಾಲರ ಭಾಷಣಕ್ಕೆ ನಾವೇನು ಸಾಧನೆಗಳನ್ನು ಮಾಡಿದ್ದೇವೆ ಅವುಗಳನ್ನು ಹೇಳುವುದಕ್ಕೆ ಸಮಯ ಇರಲಿಲ್ಲ. ಆ ಪಟ್ಟಿಯನ್ನು ನಿಮಗೆ ಕಳುಹಿಸಿ ಕೊಡುತ್ತೇನೆ. ಅದನ್ನು ಹೇಳುವುದಕ್ಕೆ ಸಮಯ ಇರಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನನಗೂ ಅದೇ ಬಂದಿರುವುದು ಸಮಯವಿರಲಿಲ್ಲ. ನಾನೊಂದು ಅಮೆಂಡ್‌ಮೆಂಟ್ ಕಳುಹಿಸಿದ್ದೆ ನಾನು ಅಮೆಂಡ್‌ಮೆಂಟಗೋಸ್ಕರ ಬಂದೆ, ಅವರಿಗೆ ಮೆಜಾರಿಟಿ ಇದೆ ಅದು ಬಂದು ಹೊರಟುಹೋಗಿದೆ. ನಾನು ಇರಲಿಲ್ಲ ಹೊರಗೆ ಹೋಗಿದ್ದೆ ಅದು ನನ್ನದೆ ತಪ್ಪು. ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ ರೈತರಿಗೆ ಕಳೆದ ಮೂರ್‍ನಾಲ್ಕು ವರ್ಷಗಳಿಂದ ಸಾಲದ ಮೇಲಿನ ಬಡ್ಡಿಯನ್ನು ರದ್ದುಮಾಡತಕ್ಕ ಸೌಜನ್ಯವನ್ನು ಈ ಸರ್ಕಾರ ತೋರಿಸುತ್ತದೆ ನಾವು ವಿಧಾನಸೌಧದಲ್ಲಿ ಹೋರಾಟ ಮಾಡುತ್ತೇವೆ ಎನ್ನುವ ಭರವಸೆಯನ್ನು ಜನಗಳಿಗೆ ಕೊಟ್ಟಿದ್ದೇವೆ. ನಮ್ಮ ಕಡೆಯಿಂದ ಅನೇಕ ಸದಸ್ಯರು ಈ ವಿಚಾರವನ್ನು ಒತ್ತಾಯ ಮಾಡಿ ಹೇಳಿದ್ದಾರೆ. ಸರ್ಕಾರದ ಮೇಲಿನ ಹೊರೆಯನ್ನು ನಾವು ಅರ್ಥಮಾಡಿಕೊಳ್ಳುತ್ತೇವೆ. ಆದರೂ ಸಹಿತ ನಾವು ನಿಮಗೆ ಒತ್ತಾಯ ಮಾಡುತ್ತಿದ್ದೇವೆ. ನೀವು ಯಾವುದಾದರೂ ಕಾರ್ಯಕ್ರಮವನ್ನು ತೆಗೆದುಕೊಂಡು, ರೈತರ ಸಾಲವನ್ನು ರದ್ದುಮಾಡಿಯೆಂದು ಹೇಳುವುದಿಲ್ಲ, ಕನಿಷ್ಠ ಸಾಲದ ಮೇಲಿನ ಬಡ್ಡಿಯನ್ನು ಸಂಪೂರ್ಣವಾಗಿ ರದ್ದುಮಾಡಿದ್ದೇವೆ ಎನ್ನತಕ್ಕ ಭರವಸೆಯನ್ನು ಕೊಡಬೇಕೆಂದು ಆ ಬಗ್ಗೆ ಮುಖ್ಯ ಮಂತ್ರಿಗಳಿಂದ ಉತ್ತರವನ್ನು ಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅವರು ಹೇಳುವುದಿಲ್ಲ, ನಿಮ್ಮ ಸರ್ಕಾರದ ನೀತಿಯನ್ನು ವಿರೋಧಿಸಿ ನಾವು ಸಭೆಯಿಂದ ಹೊರಗಡೆ ಹೋಗುತ್ತೇವೆ ಇದು ಸರಿಯಲ್ಲ.

(ಈ ಹಂತದಲ್ಲಿ ವಿರೋಧಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯ

ಉಪಾಧ್ಯಕ್ಷರು : ಪ್ರಸ್ತಾಪ ಏನೆಂದರೆ "ಮಾನ್ಯ ಸದಸ್ಯರಾದ ಶ್ರೀ ಜಿ.ಎಸ್.ಶಿವನಂಜಪ್ಪ ಮಂಡಿಸಿದ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯವನ್ನು ಸಭೆಯು ಅನುಮೋದಿಸಬೇಕು"

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

ಉಪಾಧ್ಯಕ್ಷರು : ಈ ಸದನದಲ್ಲಿ ಅಂಗೀಕರಿಸಿದ ವಂದನಾ ನಿರ್ಣಯವನ್ನು ರಾಜ್ಯಪಾಲರಿಗೆ ಕಳುಹಿಸಿ ಕೊಡಲಾಗುವುದು.

ಶಾಸನ ರಚನಾ ಕಾರ್ಯಕಲಾಪಗಳು

ವಿಧೇಯಕಗಳ ಮಂಡನೆ ಹಾಗೂ ಪ್ರಸ್ತಾವ

ಶ್ರೀ ಪಾರ್ವತಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 1985-86 ಮತ್ತು 1986-87ನೇ ಸಾಲಿಗೆ ನಿಗದಿಯಾದ